ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 13 ಶುಕ್ರವಾರ 2026

ಸಂಪುಟ: 46 | ಸಂಚಿಕೆ: 322 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

‘ಮಿತ್ರ’ನ ಪಪ್ಪಿಗಳು...

ನಮ್ಮನ್ನು ದತ್ತು ಪಡೆಯುವಿರಾ...


ಮ್ಯಾಂಗೋ


ಚಿಕ್ಕೂ


ಟೋಫಿ

ಮೈಸೂರು, ಮಾ.12(ಎಂಕೆ)– ಮ್ಯಾಂಗೋ, ಚಿಕ್ಕೂ ಮತ್ತು ಟೋಫಿ ಎಂಬ ಹೆಸರಿನ ಮೂರು ಮುದ್ದಾದ ದೇಸಿ ನಾಯಿ ಮರಿಗಳು(ಎರಡು ಗಂಡು ಮತ್ತು ಒಂದು ಹೆಣ್ಣು) ದತ್ತು ಪಡೆದುಕೊಳ್ಳಲು ಮೈಸೂರಿನ ಪೀಪಲ್ ಫಾರ್ ಅನಿಮಲ್ಸ್ (ಪಿಎಫ್ಎ)ನಲ್ಲಿ ಲಭ್ಯವಿವೆ. ಈ ನಾಯಿ ಮರಿಗಳಿಗೆ ಲಸಿಕೆ ಹಾಕಿದ್ದು, ಆರೋಗ್ಯಕರವಾಗಿವೆ. ತುಂಟಾಟದೊಂದಿಗೆ ಗಮನ ಸೆಳೆಯುವ ಈ ಮೂರು ಮರಿಗಳನ್ನು ಸಾರ್ವಜನಿಕರು ದತ್ತು ಪಡೆದು, ಆಸರೆಯಾಗುವಂತೆ ಪಿಎಫ್ಎ ಮನವಿ ಮಾಡಿದೆ. ಅದಕ್ಕಾಗಿ ದೂರವಾಣಿ ಸಂಖ್ಯೆ: 0821–2598213 ಅಥವಾ ಮೊ: 98456–54429 ಅಥವಾ ಇ–ಮೇಲ್: pfamysore@gmail.com ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಸದೃಢತೆ ಹೆಚ್ಚಿಸುವ ಸಾಮರ್ಥ್ಯ ದೈಹಿಕ ಶಿಕ್ಷಕರಲ್ಲಿದೆ

● ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಅನಿತಾ ಅಭಿಮತ ● ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಾಮರ್ಥ್ಯ ವೃದ್ಧಿ ತರಬೇತಿ

ಮೈಸೂರು,ಮಾ.12(ಎಂಟಿವೈ)– ವಿದ್ಯಾರ್ಥಿಗಳ ಬದುಕನ್ನು ಮಾನಸಿಕ ಮತ್ತು ದೈಹಿಕವಾಗಿ ಗಟ್ಟಿಯಾಗಿ ಕಟ್ಟಿಕೊಡುವ ಸಾಮರ್ಥ್ಯ ದೈಹಿಕ ಶಿಕ್ಷಕರಿಗೆ ಇದೆ ಎಂದು ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ವಲಯದ ಜಂಟಿ ನಿರ್ದೇಶಕರ ಕಚೇರಿ ಹಾಗೂ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ‘ದೈಹಿಕ ಶಿಕ್ಷಣ ನಿರ್ದೇಶಕರಿಗೆ ಒಂದು ದಿನದ ಸಾಮರ್ಥ್ಯ ವೃದ್ಧಿ ತರಬೇತಿ’ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಜೀವನದಲ್ಲಿ ದೈಹಿಕ ಶಿಕ್ಷಕರ ಪಾತ್ರ ಮುಖ್ಯವಾಗಿದೆ. ಇತರೆ ವಿಷಯಗಳ ಶಿಕ್ಷಕರು ವಿದ್ಯಾರ್ಥಿಗಳಿಗೆ ಆಯಾ ವಿಷಯದ ಜ್ಞಾನವನ್ನು ತುಂಬುವ ಕೆಲಸ ಮಾಡಿದರೆ, ದೈಹಿಕ ಶಿಕ್ಷಕರು ಶಿಸ್ತನ್ನು ಕಲಿಸುತ್ತಾರೆ. ಅಲ್ಲದೆ, ಕ್ರೀಡಾ ಚಟುವಟಿಕೆ, ವ್ಯಾಯಾಮ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿ ಕೊಳ್ಳಲು ಸಹಕಾರಿಯಾಗಲಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಅಧ್ಯಕ್ಷ ಡಾ.ಹೆಚ್.ವಿ.ಉದಯ್‌ಕುಮಾರ್ ಮಾತನಾಡಿ, ಪದವಿ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ವಿದ್ಯಾರ್ಥಿಗಳು ಸಾಕಷ್ಟು ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಕಾರ್ಯಾಗಾರದಲ್ಲಿ ಅವುಗಳ ಕುರಿತು ಸಮಾಲೋಚನೆ, ಚರ್ಚೆ ಮತ್ತು ಸೂಕ್ತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮುಂದಾಗಬೇಕು ಎಂದರು.


ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸಭಾಂಗಣದಲ್ಲಿ ದೈಹಿಕ ಶಿಕ್ಷಕರಿಗಾಗಿ ಆಯೋಜಿಸಿದ್ದ ಸಾಮಾರ್ಥ್ಯ ವೃದ್ಧಿ ತರಬೇತಿ ಕಾರ್ಯಾಗಾರವನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ ಉದ್ಘಾಟಿಸಿದರು

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಶಿಕ್ಷಣ ಇಲಾಖೆ ಮೈಸೂರು ಪ್ರಾದೇಶಿಕ ವಲಯದ ಜಂಟಿ ನಿರ್ದೇಶಕರಾದ ಡಾ.ಬಿ.ಎಸ್. ಪ್ರತಿಮಾ ಮಾತನಾಡಿ, ದೈಹಿಕ ಶಿಕ್ಷಣ ನಿರ್ದೇಶಕರಿಗೆ ವಿಶೇಷ ಕಾರ್ಯಾಗಾರವನ್ನು ಆಯೋಜಿಸಿರುವುದು ಅಭಿನಂದನಾರ್ಹ. ವಿದ್ಯಾರ್ಥಿಗಳಲ್ಲಿ ಕ್ರೀಡೆಯ ಆಸಕ್ತಿ ಮತ್ತು ಸೋಲು ಗೆಲುವನ್ನು ಸಮಾನ ಸ್ಥಿತಿಯಲ್ಲಿ ಸ್ವೀಕರಿಸುವ ಮನೋಭಾವವನ್ನು ಹುಟ್ಟುಹಾಕುವ ಜವಾಬ್ದಾರಿ ದೈಹಿಕ ಶಿಕ್ಷಣ ನಿರ್ದೇಶಕರ ಮೇಲಿದೆ ಎಂದು ತಿಳಿಸಿದರು.

ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜು ಶಿಕ್ಷಣ ಇಲಾಖೆ ನೋಡಲ್ ಅಧಿಕಾರಿ ಡಾ.ಶ್ರೀಕಾಂತ್, ಕಾಲೇಜು ಶಿಕ್ಷಣ ಇಲಾಖೆ ಮೈಸೂರು ಜಂಟಿ ನಿರ್ದೇಶಕರ ಕಚೇರಿಯ ಪತ್ರಾಂಕಿತ ವ್ಯವಸ್ಥಾಪಕ ಅರವಿಂದ್ ತರಬೇತಿ ನೀಡಿದರು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಕಾರ್ಯದರ್ಶಿ ಡಾ.ಕೆ.ಎಸ್. ಭಾಸ್ಕರ್, ಕಾರ್ಯಾಗಾರದ ಸಂಯೋಜಕ ಡಾ. ಮುತ್ತುರಾಜ್, ಕನ್ನಡ ಸಹ ಪ್ರಾಧ್ಯಾಪಕರಾದ ಡಾ. ಸುಂದರಿ, ಅರ್ಥಶಾಸ್ತ್ರ ಸಹಪ್ರಾಧ್ಯಾಪಕರಾದ ಬಿ.ಎಸ್.ದಿವ್ಯ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಮೈಸೂರು, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯ 100 ದೈಹಿಕ ಶಿಕ್ಷಣ ನಿರ್ದೇಶಕರು ಭಾಗವಹಿಸಿದ್ದರು.

ನಾಳೆ ಕೋಟೆ ಯೋಗ ಸ್ಟಾಪ್ಸ್ ಟ್ರಾಫಿಕಿಂಗ್ ಕಾರ್ಯಕ್ರಮ

ಮೈಸೂರು,ಮಾ.12(ಜಿಎ)–ಒಡನಾಡಿ ಸೇವಾ ಸಂಸ್ಥೆ ವತಿಯಿಂದ ಎಂದಿನಂತೆ ಈ ಬಾರಿ ಸಹಾ ಮಹಿಳೆಯರು, ಮಕ್ಕಳ ಸಶಕ್ತತೆಗಾಗಿ ಮಾ.14ರ ಬೆಳಗ್ಗೆ 7.30ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಯೋಗಾ ಸ್ಟಾಪ್ಸ್ ಟ್ರಾಫಿಕಿಂಗ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಸ್ಟ್ಯಾನ್ಲಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಸುಮಾರು 400 ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇದಲ್ಲದೆ ವಿಶ್ವದ ಸುಮಾರು 40 ದೇಶಗಳಲ್ಲಿ ಸುಮಾರು 3000 ಮಂದಿ ಏಕ ಕಾಲಕ್ಕೆ ಯೋಗಾಸನದಲ್ಲಿ ಪಾಲ್ಗೊಂಡು ಸಂಸ್ಥೆಯ ಈ ಕಾರ್ಯಕ್ರಮಕ್ಕೆ ಬೆಂಬಲ ನೀಡಲಿದ್ದಾರೆ. ಈ ವೇಳೆ ಸುಮಾರು 500 ರೂ. ಮೌಲ್ಯದ ಟೀ ಶರ್ಟ್ ನೀಡಲಾಗುವುದು. ಇದು ಸಂಸ್ಥೆಯ ಚಟುವಟಿಕೆಗೆ ಪ್ರೋತ್ಸಾಹ ಪಡೆಯುವ ಉದ್ದೇಶ ಹೊಂದಿದೆ ಎಂದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಆಗಮಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪರಶುರಾಂ, ಡಾ.ಲತಾ ಕೆ.ಬಿದ್ದಪ್ಪ, ಡಾ.ಬಿ.ಪಿ.ಮೂರ್ತಿ ಇದ್ದರು.

ಮಾ.16 ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಡಿವಾಳ ಸಮಾಜದಿಂದ ಪ್ರತಿಭಟನೆ

ಮೈಸೂರು,ಮಾ.12(ಜಿಎ)–ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂಬ ಕೂಗಿನೊಡನೆ ಹೋರಾಟ ಬಹಳಷ್ಟು ವರ್ಷಗಳಿಂದ ನಡೆದಿದೆ. ಆದರೂ ಸರ್ಕಾರ ನಿರ್ಲಕ್ಷಿಸಿರುವ ಹಿನ್ನೆಲೆ ಮಾ.16ರಂದು ಬೆಳಗ್ಗೆ 8 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿರುವ ಅಹೋರಾತ್ರಿ ಪ್ರತಿಭಟನೆಯಲ್ಲಿ ಜಿಲ್ಲೆಯ ಸಮುದಾಯದವರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮಡಿವಾಳ ಯುವ ಬಳಗದ ಅಧ್ಯಕ್ಷ ಮಾಧುರಾಜ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮುದಾಯಕ್ಕೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಸಿಗಬೇಕಾದ ಮನ್ನಣೆ ಇದುವರೆಗೂ ದೊರಕಿಲ್ಲ. ಈ ಬಗ್ಗೆ ಬಹಳಷ್ಟು ವರ್ಷಗಳಿಂದ ಹೋರಾಟ ಮಾಡುತ್ತ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಕೋರಿದರೂ ಇದುವರೆಗಿನ ಎಲ್ಲಾ ಸರ್ಕಾರಗಳು ನಿರ್ಲಕ್ಷಿಸಿವೆ ಎಂದರು.

ಹೀಗಾಗಿ ಸರ್ಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಈ ಪ್ರತಿಭಟನೆಯನ್ನು ಡಾ.ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ ನೇತೃತ್ವದಲ್ಲಿ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘದ ನಾಯಕತ್ವದಲ್ಲಿ ಆಯೋಜಿಸಲಾಗಿದೆ. ಜಿಲ್ಲೆಯಿಂದ ಸಾವಿರಾರು ಮಂದಿ ಪಾಲ್ಗೊಳ್ಳಲಿದ್ದಾರೆ. ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ಮುಂದುವರಿಯಲಿದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ದುದ್ದಗೆರೆ ಶಿವಣ್ಣ, ಸಿದ್ದಪ್ಪಾಜಿ, ಮಹದೇವ, ಮಲ್ಲಹಳ್ಳಿ ವೆಂಕಟೇಶ್, ಮಹೇಶ್ ಉಪಸ್ಥಿತರಿದ್ದರು.

ಮಾ.15ಕ್ಕೆ ಮೂರು ಪುಸ್ತಕ, ಕವನ ಸಂಕಲನ ಬಿಡುಗಡೆ

ಮೈಸೂರು: ನಗರದ ಕವಿತಾ ಪ್ರಕಾಶನವು ಲೇಖಕ ಗಣೇಶ ಅಮೀನಗಡ ಅವರ ಮೂರು ಪುಸ್ತಕ ಹಾಗೂ ರಮೇಶ ಚಂದ್ರ ಅವರ ‘ಹಾದಿಂತೊಳಗಣ ಹಾಡೇ...’ ಕವನ ಸಂಕಲನ ಬಿಡುಗಡೆ ಸಮಾರಂಭವನ್ನು ಮಾರ್ಚ್ 15ರಂದು ಬೆಳಿಗ್ಗೆ 10.30 ಗಂಟೆಗೆ ಇಲ್ಲಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದೆ.

ಕೃತಿಗಳನ್ನು ಹಿರಿಯ ವಿಮರ್ಶಕರಾದ ಓ.ಎಲ್.ನಾಗಭೂಷಣ ಸ್ವಾಮಿ ಬಿಡುಗಡೆಗೊಳಿಸಿ ಮಾತನಾಡುವರು. ಸಮಾರಂಭದಲ್ಲಿ ಹಿರಿಯ ರಂಗಕರ್ಮಿ ಹುಲಗಪ್ಪ ಕಟ್ಟಿಮನಿ, ಬಿಡುಗಡೆಗೊಂಡ ಕೈದಿಗಳಾದ ಎಚ್.ವಿ.ರಮೇಶ್ ಹಾಗೂ ಮಹೇಶ ಬಾಗಳಿ ಭಾಗವಹಿಸುವರು. ಗಣೇಶ ಅಮೀನಗಡ ಅವರ ಕೈದಿಗಳ ಕಥನ, ಅಂಕಣದ ಆಯ್ದ ಲೇಖನಗಳ ಸಂಕಲನ ರಂಗ ಪ್ರಸಂಗ ಹಾಗೂ ರಂಗಭೂಮಿ ಕಲಾವಿದೆಯರ ಕುರಿತ ರಂಗ ಕರ್ಪೂರ ಕೃತಿಗಳು ಬಿಡುಗಡೆಗೊಳ್ಳಲಿವೆ.

ಸಮಾರಂಭದ ಆರಂಭದಲ್ಲಿ ಮಹೇಶ ಬಾಗಳಿ ರಂಗಗೀತೆಗಳನ್ನು ಹಾಡುವರು. ಕೈದಿಗಳ ಕಥನ ಕೃತಿಯಲ್ಲಿ ಎಸ್.ವಿ. ರಮೇಶ್, ಮಹೇಶ ಬಾಗಳಿ ಅವರ ಅನುಭವಗಳಿವೆ. ಅಲ್ಲದೆ ಕೈದಿಗಳಿಗೆ ನಾಟಕ ನಿರ್ದೇಶಿಸುವ ಹುಲಗಪ್ಪ ಕಟ್ಟಿಮನಿ ಡೈರೆಕ್ಟರ್ ಡೈರಿ ಎನ್ನುವುದು ಕೂಡ ಇದೆ.

ಮಾದಕ ವಸ್ತು ಸೇವನೆ, ಸಾಗಾಟದ ದುಷ್ಪರಿಣಾಮ ಕುರಿತಾಗಿ ವಿದ್ಯಾರ್ಥಿಗಳ ನಶಾಮುಕ್ತ ಜಾಗೃತಿ ಜಾಥಾ

ಮೈಸೂರು,ಮಾ.12(ಎಂಟಿವೈ)– ಮಾದಕ ವಸ್ತುಗಳ ಸೇವನೆ ಹಾಗೂ ಸಾಗಾಟದಿಂದಾಗಿ ಜನರ ಆರೋಗ್ಯ ಮತ್ತು ಸಮಾಜದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ವಿದ್ಯಾರ್ಥಿಗಳು ನಶಾ ಮುಕ್ತ ಜಾಗೃತಿ ಜಾಥಾ ನಡೆಸಿದರು.



ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ವಿದ್ಯಾರ್ಥಿಗಳು ನಶಾ ಮುಕ್ತ ಜಾಗೃತಿ ಜಾಥಾ ನಡೆಸಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಮುಂಭಾಗ ಗುರುವಾರ ಬೆಳಗ್ಗೆ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಮತ್ತು ಆಸ್ಪತ್ರೆಯ ರಾಷ್ಟ್ರೀಯ ಸೇವಾ ಯೋಜನಾ ಘಟಕವು ಮಂಡಿ ಪೊಲೀಸ್ ಠಾಣೆಯ ಸಹಯೋಗದಲ್ಲಿ ಆಯೋಜಿಸಿದ್ದ ನಶಾಮುಕ್ತ ಜಾಥಾದಲ್ಲಿ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು, ಆಸ್ಪತ್ರೆಯ ಸಿಬ್ಬಂದಿ ಪಾಲ್ಗೊಂಡು ಮಾದಕ ವಸ್ತುಗಳ ಸೇವನೆಯಿಂದ ದೂರ ಇರುವಂತೆ ಹಾಗೂ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು.

ಸ್ವಸ್ಥ್ ಭಾರತ್ ಶ್ರೇಷ್ಠ ಭಾರತ್, ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್, ಯುವ ಶುದ್ಧಿ ಅಭಿಯಾನ ಸೇರಿದಂತೆ ವಿವಿಧ ಘೋಷಣೆಗಳೊಂದಿಗೆ ಜಾಗೃತಿ ಜಾಥಾ ಆರಂಭಿಸಿದ ವಿದ್ಯಾರ್ಥಿಗಳು ಇರ್ವಿನ್ ರಸ್ತೆಯಲ್ಲಿ ಸಾಗಿ ಎಸ್‌ಬಿಐ ವೃತ್ತ, ಮಂಡಿ ಪೊಲೀಸ್ ಠಾಣೆಯ ಮುಂಭಾಗದ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ ಸರ್ಕಾರಿ ಆಯುರ್ವೇದ ಕಾಲೇಜಿನ ಆವರಣ ತಲುಪಿದರು. ಮೆರವಣಿಗೆಯುದ್ದಕ್ಕೂ ಮಾದಕ ವಸ್ತುಗಳ ಸೇವನೆಯಿಂದ ದೂರ ಇರುವಂತೆ ಘೋಷಣೆ ಕೂಗುತ್ತಾ ಗಮನ ಸೆಳೆದರು.

ಇದಕ್ಕೂ ಮುನ್ನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಂಡಿ ಠಾಣೆ ಇನ್‌ಸ್ಪೆಕ್ಟರ್ ಆರ್.ದಿವಾಕರ್ ಜಾಥಾಗೆ ಚಾಲನೆ ನೀಡಿದರು. ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ. ಶ್ರೀವತ್ಸ, ಆರ್‌ಎಂಒ ಡಾ. ಶಶಿರೇಖಾ, ಹಿರಿಯ ಪ್ರಾಧ್ಯಾಪಕ ಡಾ.ಅನಂತ ದೇಸಾಯಿ, ಎನ್‌ಎಸ್‌ಎಸ್ ಅಧಿಕಾರಿ ಡಾ.ಸುನೀತಾ ಸಿದ್ದೇಶ, ಕಾಲೇಜಿನ ಬೋಧಕರು, ಬೋಧಕೇತರರು, ಆಸ್ಪತ್ರೆ ಮತ್ತು ಕಚೇರಿ ಸಿಬ್ಬಂದಿ, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಜಾಗೃತಿ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಕಾವೇರಿ ವಿದ್ಯಾಸಂಸ್ಥೆ ವಿದ್ಯಾರ್ಥಿಗಳ ಸಾಧನೆ


ಕೀರ್ತನ


ಫೌಜಿಯಾ


ಫೌಜಿಯಾ ಫಾತಿಮ


ಕೆ.ಉಮಾ


ಜಕ್ರಿಯಾ

ಮೈಸೂರು,ಮಾ.12–ನಗರದ ಪ್ರತಿಷ್ಠಿತ ಕಾವೇರಿ ವಿದ್ಯಾ ಸಂಸ್ಥೆಯ ಆರೋಗ್ಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ರಾಜ್ಯ ಮಟ್ಟದ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.


28ನೇ ವಾರ್ಷಿಕ ಘಟಿಕೋತ್ಸವದ ಭಾಗವಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯವು ಪ್ರಕಟಿಸಿದ ಬ್ಯಾಂಕ್ ಪಟ್ಟಿಯಲ್ಲಿ ಕಾವೇರಿ ಆರೋಗ್ಯ ವಿಜ್ಞಾನ ವಿಭಾಗದ 26 ವಿದ್ಯಾರ್ಥಿಗಳು ರ್‍ಯಾಂಕ್ ಗಳಿಸುವ ಮೂಲಕ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ಅರವಳಿಕೆ ಮತ್ತು ಆಪರೇಷನ್ ಥಿಯೇಟರ್ ತಂತ್ರಜ್ಞಾನದಲ್ಲಿ ಸಂಸ್ಥೆಯ ಕುಮಾರಿ ಕೀರ್ತನ ವಿವಿ ಮಟ್ಟದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ತುರ್ತು ಮತ್ತು ಆಘಾತ ಆರೈಕೆ ತಂತ್ರಜ್ಞಾನದಲ್ಲಿ ಫೌಜಿಯಾ 2ನೇ ರ್‍ಯಾಂಕ್ ಪಡೆದರೆ, ಫೌಜಿಯಾ ಫಾತಿಮಾ 3ನೇ ರ್‍ಯಾಂಕ್, ಮೂತ್ರ ಪಿಂಡ ಡಯಾಲಿಸಿಸ್ ತಂತ್ರಜ್ಞಾನದಲ್ಲಿ ಮೊಹಮ್ಮದ್ ಜಖಿಯಾ 4ನೇ ರ್‍ಯಾಂಕ್ ಪಡೆದಿದ್ದಾರೆ.


ಅನಖಾ

ಕಾರ್ಡಿಯಾಕ್ ಕೇರ್ ತಂತ್ರಜ್ಞಾನದಿಂದ ಕೆ.ಉಮಾ, ನರ ವಿಜ್ಞಾನ ತಂತ್ರ ಜ್ಞಾನದಲ್ಲಿ ಅನಖಾ 10ನೇ ರ್‍ಯಾಂಕ್, ಅರಿವಳಿಕೆ ಮತ್ತು ಆಪರೇಷನ್ ಥಿಯೇಟರ್ ತಂತ್ರಜ್ಞಾನದಿಂದ ಜೈನಾಬ್ ಮತ್ತು ಬೀಬಿ ಫಾತಿಮಾ, ಕಾರ್ಡಿಯಾಕ್ ಕೇರ್ ತಂತ್ರಜ್ಞಾನದಿಂದ ತೇಜಸ್ವಿನಿ ಮತ್ತು ಖದೀಜಾ ಹನಾ, ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞಾನದಿಂದ ಶ್ರೇಯಾ, ಉಸಿರಾಟದ ಆರೈಕೆ ತಂತ್ರಜ್ಞಾನದಿಂದ ಅಪರ್ಣ ಕೃಷ್ಣನ್ ಮತ್ತು ಅಪ್ಟೋಮೆಟ್ರಿಯಿಂದ ಚೈತನ್ಯ ಪ್ರಸಾದ್ ಶ್ರೇಯಾಂಕ ರ್‍ಯಾಂಕ್ ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ.

ಇಂದಿನಿಂದ ಮೈಸೂರು ಫ್ಯಾಷನ್ ವೀಕ್ ಸೀಸನ್ 8

ಸಿನಿ ತಾರೆಯರು, ಸೂಪರ್ ಮಾಡಲ್‌ಗಳು ಭಾಗಿ


ಮನ್ನಾರ ಚೋಪ್ರಾ


ವತ್ಸಲ್ ಶೇಥ್

ಮೈಸೂರು,ಮಾ.12(ಜಿಎ)–ಮೈಸೂರು ಫ್ಯಾಷನ್ ವೀಕ್‌ನ 8ನೇ ಆವೃತ್ತಿಯನ್ನು ಮೈಸೂರಿನ ಸೈಲೆಂಟ್ ಶೋರ್ಸ್ ರೆಸಾರ್ಟ್‌ನಲ್ಲಿ ಮಾ.13ರಿಂದ 15 ರವರೆಗೆ ಆಯೋಜಿಸಲಾಗಿದೆ ಎಂದು ಮೈಸೂರು ಫ್ಯಾಷನ್ ವೀಕ್ ಸಂಸ್ಥಾಪಕಿ ಜಯಂತಿ ಬಲ್ಲಾಳ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿದಿನ ಫ್ಯಾಷನ್ ಶೋ ಸಂಜೆ 6 ಗಂಟೆಯಿಂದ ರಾತ್ರಿ 10ರವರೆಗೆ ನಡೆಯಲಿದೆ. 45 ಮಂದಿ ಮಹಿಳಾ, 16 ಮಂದಿ ಪುರುಷ ರೂಪದರ್ಶಿಗಳು ಪಾಲ್ಗೊಳ್ಳಲಿದ್ದಾರೆ. ಓಸಿ ಅಹ್ಲುವಾಲಿಯಾ, ರಿಯಾಜ್ ಗಂಜಿ, ರೆಹಾನ್ ಶಾ, ಅಯ್ನಾ ವರ್ಲ್ಡ್, ಸುರೇಶ್ ಮೆನನ್, ಭಾರ್ಗವಿ ಕುನಮ್, ಕಿಂಗ್ ಶುಕ್ ಬಾದರು, ಪಂಕಜ್ ಸೋನಿಯಂತಹ ವಿನ್ಯಾಸಕಾರರ ಸಂಗ್ರಹಗಳನ್ನು ಉದಯೋನ್ಮುಖ ವಿನ್ಯಾಸ ಪ್ರತಿಭೆಗಳ ಪ್ರದರ್ಶನದೊಂದಿಗೆ ಆಯೋಜಿಸಲಾಗಿದೆ.

MYSORE FASHION WEEK

ಶೋ ಸ್ಟಾಪರ್‌ಗಳಾಗಿ ಮನ್ನಾರ ಚೋಪ್ರಾ, ರಿತು ಶಿವಪುರಿ, ಅನುಪ್ರಿಯಾ ಗೋಯೆಂಕಾ, ಚೈತ್ರ ಜೆ ಆಚಾರ್, ರೋಶ್ನಿ ಪ್ರಕಾಶ್, ಸೂರಜ್‌ಗೌಡ, ಅದಿತಿ ಪೋಹಂಕರ್ ಸೇರಿದಂತೆ ಅನೇಕ ಸಿನಿ ತಾರೆಯರು, ಸೂಪರ್ ಮಾಡೆಲ್‌ಗಳಾದ ಐರಿಸ್ ಮೈಟಿ, ಮಾನಸಿ ಮೋಘೆ, ಅನಿತಾ ಕುಮಾರ್, ರಿಯಾ ಸುಖೇಜಾ, ಸೋನಾಲಿಕಾ ಸಹಾಯ್, ರಿಯಾ ಸುಬೋಧ್ ಮತ್ತು ಸೃಷ್ಟಿ ವ್ಯಾಕರಣಂ ಹೆಜ್ಜೆ ಹಾಕಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆವಿನ್ ಉಪಸ್ಥಿತರಿದ್ದರು.

ನಿಧನ

ಟಿ.ಕೃಷ್ಣ



ಮೈಸೂರು, ಮಾ.12– ಮೈಸೂರು ಹೊರವಲಯದ ಕೆ.ಆರ್. ಮಿಲ್ ಕಾಲೋನಿ ಗ್ರಾಮ ಪಂಚಾಯ್ತಿ ಮಾಜಿ ಉಪಾಧ್ಯಕ್ಷರೂ ಆದ ಹಿರಿಯ ಕಾಂಗ್ರೆಸ್ ಮುಖಂಡ ಟಿ.ಕೃಷ್ಣ (62) ಅವರು ಇಂದು ನಿಧನರಾದರು. ಮೃತರು ಪತ್ನಿಯರು, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರು ಮೂರು ಬಾರಿ ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 12 ಗಂಟೆಗೆ ಕೆ.ಆರ್.ಮಿಲ್ ಕಾಲೋನಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಸಮಿತಿ ಸಂತಾಪ ಸೂಚಿಸಿದೆ.



ಶ್ರೀಮತಿ ಭಾಗ್ಯಮ್ಮ

ಮೈಸೂರು: ಗಾಂಧಿನಗರದ 11ನೇ ಕ್ರಾಸ್, ಶಿವಯೋಗಿ ಸ್ವಾಮಿ ಮೂರನೇ ಮುಖ್ಯ ರಸ್ತೆ ನಿವಾಸಿ ದಿವಂಗತ ಮರಿದೇವರು ಅವರ ಪತ್ನಿ ಶ್ರೀಮತಿ ಭಾಗ್ಯಮ್ಮ(65) ಇಂದು ನಿಧನರಾದರು. ಮೃತರು ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.3.2026 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಸೈಂಟಿಫಿಕ್ ಪ್ರಾಣಾಯಾಮ ಫೌಂಡೇಷನ್ ಟ್ರಸ್ಟ್, ಎಟಿಎಂಇ ಇಂಜಿನಿಯರಿಂಗ್ ಕಾಲೇಜು, ಆರ್‌ವಿ ಇಂಜಿನಿಯರಿಂಗ್ ಕಾಲೇಜು, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಇಂಡಿಯನ್ ಯೋಗ ಅಸೋಸಿಯೇಷನ್, ಆಯುಷ್ :** ರಾಷ್ಟ್ರೀಯ ಪ್ರಾಣಾಯಾಮ ಸಮ್ಮೇಳನದ ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಯೋಗ ಯೂನಿವರ್ಸಿಟಿ ಆಫ್ ಭಾರತ್ ಸಂಸ್ಥಾಪಕ ಡಾ. ರಾಜಶೇಖರ ರೆಡ್ಡಿ ಪೋರೆಡ್ಡಿ, ಎಸ್‌ವಿವೈಎಎಸ್‌ಎ ಮಾಜಿ ಕುಲಪತಿ ಡಾ. ಸುಬ್ರಮಣ್ಯಸ್ವಾಮಿ, ಪ್ರಾಧ್ಯಾಪಕ ಡಾ. ಶರಶ್ಚಂದ್ರ ಭಾಲೇಕರ್, ಡಾ. ಪ್ರಹ್ಲಾದರಾವ್, ಅಧ್ಯಕ್ಷತೆ : ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ಎಲ್. ಅರುಣ್‌ಕುಮಾರ್, ಸ್ಥಳ: ಎಟಿಎಂಇ ಇಂಜಿನಿಯರಿಂಗ್ ಕಾಲೇಜು ಆವರಣ, ಬನ್ನೂರು ರಸ್ತೆ, ಮಧ್ಯಾಹ್ನ 3.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಒಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ಕಾಯಿಲೆಗಳಿಗೆ ಉಚಿತ ತಪಾಸಣೆ, ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10 ರಿಂದ.

■ **ಸೇಂಟ್ ಜೋಸೆಫ್ ಕಾಲೇಜ್ ಆಫ್ ಎಜುಕೇಷನ್ :** ರಾಜ್ಯ ಮಟ್ಟದ ಅಂತರ ಬಿ.ಇಡಿ. ಕಾಲೇಜುಗಳ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಸಮ್ಮಿಲನ ಕಲಾಸೃಷ್ಟಿ–2026, ಮುಖ್ಯ ಅತಿಥಿಗಳು : ಅಬ್ದುಲ್ ರಶೀದ್, ಎಂಡಿಇಎಸ್ ಸಂಸ್ಥೆ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಲ್ಡಾನ, ಖಜಾಂಚಿ ಗುರು ನವೀನ್ ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೆಬಿ ಮಾವೇಲಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘ :** ವಿಶ್ವ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಶ್ರೀಮತಿ ಡಾ. ಕಮಲ, ಶಾಸಕ ಕೆ. ಹರೀಶ್‌ಗೌಡ, ಅಭಿನಂದಿತರು : ಡಾ. ಎಂ.ಪಿ. ಮೋನಿಕ, ಶ್ರೀಮತಿ ವೀಣಾ ಅಶೋಕ್, ಸ್ಥಳ: ಹೊಸ ನ್ಯಾಯಾಲಯದ ಎದುರು, ಕೆ.ಜಿ. ಕೊಪ್ಪಲು, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿವಿ ತತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಎಂ. ಡ್ಯಾನಿಯಲ್ ಅವರಿಂದ ಉನ್ನತ ಶಿಕ್ಷಣದಲ್ಲಿ ನೀತಿಶಾಸ್ತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಧ್ಯಾಹ್ನ 3.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ :ಬಿ.ಕೆ. ಮೀನಾಕ್ಷಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ – ಕೆ. ಶ್ರೇಯಾ, ಡಾ. ಎಂ.ಎ.ಜ್ಯೋತಿ ಹಾಗೂ ಎನ್. ಹೇಮಾ, ವ್ಯಾಖ್ಯಾನ–ಡಾ. ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಅರೋಗ್ಯ–ವಿಶ್ವ ಕಿಡ್ನಿ ದಿನಾಚರಣೆಯ ಸಂದರ್ಭದಲ್ಲಿ ಆ ದಿನದ ಮಹತ್ವ, ಧ್ಯೇಯವಾಕ್ಯ ಹಾಗೂ ಮೂತ್ರಪಿಂಡಗಳ ಆರೈಕೆ ಕುರಿತು ಮೈಸೂರಿನ ನೆಫ್ರೊಯುರಾಲಜಿ ಸಂಸ್ಥೆಯ ನೆಫ್ರಾಲಜಿ ವಿಭಾಗದ ಮುಖ್ಯಸ್ಥರು ಹಾಗೂ ಮಕ್ಕಳ ತಜ್ಞರಾದ ಡಾ. ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ –ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಆರ್. ಸುಧಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸಂಗೀತ ಸಂಭ್ರಮ ನಾದಾಲಯ ಸಂಗಮ, ಪ್ರಸ್ತುತಿ: ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ವಿಕಸಿತ್ ಭಾರತ್ GRAMG ಯೋಜನೆ. ಮಾತನಾಡುತ್ತಾರೆ– ಪತ್ರಕರ್ತ ರವಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಾ. ಎನ್. ರಮಣಿ –ಕೊಳಲು ವಾದನ, 4.00 ಮಹಿಳಾರಂಗ– ಸಖೀ–ಸಾಹಿತ್ಯ, ಮಹಿಳಾ ಬರಹಗಾರರ ಜೊತೆ ಮಾತುಕತೆ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಹವಾಮಾನ ಮಿತ್ರ, ಸಂಶೋಧನಾ ಸಾರ–ಕೃಷಿಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಕನ್ನಡ ಭಾರತಿ ಡಾ. ಕೆ.ಸಿ. ಶಿವಪ್ಪ ಅವರ ಮುದ್ದು ರಾಮನದರ್ಶನ ಸೋದಾಹಣ ಭಾಷಣ ಪ್ರೊ.ಎಂ. ಕೃಷ್ಣೇಗೌಡ ಅವರಿಂದ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ನಿರ್ಮಲಾ ರಾಜಶೇಖರ್– ವೀಣಾವಾದನ, 10.00 ತತ್ವ ಸಂಚಾರ– ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

■ **ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್:** ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಸಾಧನ ಸಲಕರಣೆ ಮತ್ತು ಶೈಕ್ಷಣಿಕ ಕಿಟ್ ವಿತರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜುನಿಚಿ ಮುನೆಜಾವಾ, ವ್ಯವಸ್ಥಾಪಕ ನಿರ್ದೇಶಕರು, ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮೈಸೂರು, ಸಂತೋಷ್, ಸಹಾಯಕ ಜನರಲ್ ಮ್ಯಾನೇಜರ್, ಹಣಕಾಸು ಮತ್ತು ತೆರಿಗೆ ವಿಭಾಗ, ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮೈಸೂರು, ಪದ್ಮನಾಭ, ಹಿರಿಯ ವ್ಯವಸ್ಥಾಪಕ, ಮಾನವ ಸಂಪನ್ಮೂಲ ವಿಭಾಗ, ಸುನಾಗಾ, ಜನರಲ್ ಮ್ಯಾನೇಜರ್, ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಮೈಸೂರು, ಶ್ರೀಮತಿ ಸುರಭಿ ಶರ್ಮಾ, ಕಾರ್ಯದರ್ಶಿ, ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಶಿವರಾಮು ದೇಶಪಾಂಡೆ, ಕಾರ್ಯನಿರ್ವಾಹಕ ಅಧಿಕಾರಿಗಳು, ಸಮರ್ಥನಂ ಅಂಗವಿಕಲರ ಸಂಸ್ಥೆ, ಶಿವರಾಜು, ಮುಖ್ಯಸ್ಥರು, ಮೈಸೂರು ವಿಭಾಗ, ಸಮರ್ಥನಂ ಅಂಗವಿಕಲರ ಸಂಸ್ಥೆ, ಸ್ಥಳ: EMRC ಸಭಾಂಗಣ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಸಂಜೆ 5ಕ್ಕೆ.

■ **ಸರ್ಕಾರಿ ಆಯುರ್ವೇದ ರಿಸರ್ಚ್ ಸೆಂಟರ್, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಲೇಖಾನುಸಂಧಾನ–2026, ಲೇಖನ ಬರವಣಿಗೆ ಕುರಿತು ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮುಖ್ಯ ಅತಿಥಿಗಳು : ನಿವೃತ್ತ ಜಂಟಿ ನಿರ್ದೇಶಕ ಡಾ. ಎನ್.ಎ. ಮೂರ್ತಿ, ಎಕ್ಸೆಲ್ ಮಾಟ್ನೋವಸ್ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಡಾ. ನಿತಿನ್ ಕುಂದಚೀರ ಸುಬ್ರಮಣಿ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಶ್ರೀವತ್ಸ, ಸ್ಥಳ: ಸೆಮಿನಾರ್ ಹಾಲ್, ಚರಕ ಪಿಜಿ ಬ್ಲಾಕ್, ಸಂಜೆ 5 ರಿಂದ.

■ **ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಸನ್ಮಾನಿತರು : ಮಹಿಳಾ ಉದ್ಯಮಿ ಶ್ರೀಮತಿ ಚೇತನ ಜಿನದತ್ತರಾಯ್, ಉಪಸ್ಥಿತರು : ಕೆ.ಎಸ್. ಕುಮಾರ್, ಮಂಗಲ ಶಿವಕುಮಾರ್, ಅಧ್ಯಕ್ಷತೆ : ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ಅಧ್ಯಕ್ಷ ಎನ್.ಎಸ್. ಮಹದೇವ ಸ್ವಾಮಿ, ಸ್ಥಳ: ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ಆವರಣ, ಜೆ.ಪಿ. ನಗರ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 13 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 322 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಸೂದ್ ಪೆಜೆಶ್ಕಿಯಾನ್

ಷರತ್ತಿಗೆ ಒಪ್ಪಿದರೆ ಮಾತ್ರ ಯುದ್ಧ ಅಂತ್ಯ

• ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ಪಟ್ಟು • ಅಮೆರಿಕ ತೈಲ ಟ್ಯಾಂಕರ್ ಮೇಲೆ ದಾಳಿ; ಭಾರತೀಯ ಸಾವು • ಮಕ್ಕಳ ಸಾವಿಗೆ ಪ್ರತೀಕಾರ; ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಶಪಥ

ಟೆಹರಾನ್, ಮಾ.12– ಪಶ್ಚಿಮ ಏಷ್ಯಾದಲ್ಲಿ ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧ ಸತತ 13ನೇ ದಿನವೂ ಮುಂದುವರಿದಿದ್ದು, ಅಮೆರಿಕದ ತೈಲ ಟ್ಯಾಂಕರ್ ಹಡಗಿನ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ನಾವಿಕರೊಬ್ಬರು ಗುರುವಾರ ಮೃತಪಟ್ಟಿದ್ದಾರೆ.

ಸಂಘರ್ಷದಿಂದ ಜಾಗತಿಕ ಇಂಧನ ಕೊರತೆ ಮತ್ತು ವಾಣಿಜ್ಯ ಹಡಗುಗಳ ಸಂಚಾರಕ್ಕೆ ತೀವ್ರ ತೊಂದರೆ ಆಗಿರುವುದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಘರ್ಷ ಶಮನಕ್ಕೆ ಒತ್ತಡಗಳು ಹೆಚ್ಚಾಗುತ್ತಿವೆ. ಇದರ ಬೆನ್ನಲ್ಲೇ ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಯುದ್ಧವನ್ನು ಕೊನೆಗೊಳಿಸಲು ಇರಾನ್ ಮೂರು ಷರತ್ತುಗಳನ್ನು ವಿಧಿಸಿದೆ.

ಈ ಕುರಿತು ತೆಗೆದುಕೊಳ್ಳುವ ಯಾವುದೇ ನಿರ್ಣಯವು ಇರಾನಿನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು. ಭವಿಷ್ಯದಲ್ಲಿ ಇರಾನ್ ಮೇಲೆ ಯಾವುದೇ ದಾಳಿ ನಡೆಸುವುದಿಲ್ಲ ಎಂಬುದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖಾತರಿಪಡಿಸಬೇಕು ಎಂದು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಲ್ಲದೆ, ಯುದ್ಧದ ಸಮಯದಲ್ಲಿ ಇರಾನ್‌ಗೆ ಆದ ಹಾನಿಗಳಿಗೆ ಸೂಕ್ತ ಪರಿಹಾರವನ್ನೂ ಕೊಡಬೇಕು ಎಂದು ಷರತ್ತು ವಿಧಿಸಿದ್ದಾರೆ. ಈ ಕುರಿತು ರಷ್ಯಾ ಮತ್ತು ಪಾಕಿಸ್ತಾನದ ನಾಯಕರ ಜತೆಗೆ ಮಾತುಕತೆ ನಡೆಸಿದ್ದೇನೆ. ಶಾಂತಿಗಾಗಿ ಇರಾನ್ ಬದ್ಧತೆಯನ್ನು ಈ ಸಂದರ್ಭದಲ್ಲಿ ನಾನು ಪುನರುಚ್ಚರಿಸಿದ್ದೇನೆ ಎಂದು ಅವರು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಇಸ್ರೇಲ್ ಮತ್ತು ಅಮೆರಿಕ ಆರಂಭಿಸಿದ ಈ ಯುದ್ಧವನ್ನು ಕೊನೆಗೊಳಿಸಲು ಇರುವ ಏಕೈಕ ಮಾರ್ಗ ಎಂದರೆ ಈ ಮೂರೂ ಷರತ್ತುಗಳಿಗೆ ಸಮ್ಮತಿ ಸೂಚಿಸಿ, ಬದ್ಧತೆ ತೋರುವುದಾಗಿದೆ ಎಂದು ಅವರು ಬರೆದುಕೊಂಡಿದ್ದಾರೆ.

ಒಂದು ವೇಳೆ ಅಮೆರಿಕವು ಇರಾನ್‌ನ ಬಂದರು ಸೌಲಭ್ಯಗಳ ಮೇಲೆ ದಾಳಿ ಮಾಡಿದರೆ, ಪರ್ಷಿಯನ್ ಕೊಲ್ಲಿಯಲ್ಲಿನ ಯಾವುದೇ ಬಂದರು, ಆರ್ಥಿಕ ಕೇಂದ್ರ ಅಥವಾ ತಾಣಗಳನ್ನು ಇರಾನ್ ಸಹಜವಾಗಿಯೇ ಗುರಿಯಾಗಿಸಲಿದೆ ಎಂದು ಇರಾನ್‌ನ ಸಶಸ್ತ್ರ ಪಡೆಗಳ ವಕ್ತಾರ ಅಬೋಲ್ ಫಜಲ್ ಶೇಖರ್ಚಿ ಅವರು ಇರಾನ್ ಸರ್ಕಾರಿ ವಾಹಿನಿ ಮೂಲಕ ಎಚ್ಚರಿಕೆ ನೀಡಿದ ಕೆಲವೇ ಹೊತ್ತಿನಲ್ಲಿ ಇರಾನ್ ಅಧ್ಯಕ್ಷರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಮೂರು ಷರತ್ತುಗಳ ಮೂಲಕ ಕದನ ವಿರಾಮ ಕುರಿತು ಪ್ರಸ್ತಾಪಿಸಿದ್ದಾರೆ.

ಮಕ್ಕಳ ಸಾವಿಗೆ ಪ್ರತೀಕಾರ: ಇರಾನ್‌ನ ಹೊಸ ಸರ್ವೋಚ್ಚ ನಾಯಕನಾಗಿ ಅಧಿಕಾರ ವಹಿಸಿಕೊಂಡ ನಂತರ ಜಗತ್ತಿಗೆ ಮೊದಲ ಸಂದೇಶ ರವಾನಿಸಿರುವ ಮೊಜ್ತಬಾ ಖಮೇನಿ, ಅಮೆರಿಕ ಮತ್ತು ಇಸ್ರೇಲ್‌ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ದಾಳಿಗಳಲ್ಲಿ ಮೃತಪಟ್ಟ ಇರಾನಿಯನ್ನರ ಪ್ರತಿ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲಾಗುತ್ತದೆ. ಅಗತ್ಯವಿದ್ದರೆ ಸಂಘರ್ಷ ಹೊಸ ಮಜಲುಗಳನ್ನು ಪಡೆದುಕೊಳ್ಳುತ್ತದೆ ಎಂದು ಹೇಳಿದ್ದಾರೆ. ಇರಾನ್ ತನ್ನ ಹುತಾತ್ಮರ ರಕ್ತದ ಸೇಡು ತೀರಿಸಿಕೊಳ್ಳುವುದರಿಂದ ಹಿಂದೆ ಸರಿಯುವುದಿಲ್ಲ. ಇದು ದೇಶಕ್ಕೆ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಖಮೇನಿ ಹೇಳಿದ್ದಾರೆ. ■ 10ನೇ ಪುಟಕ್ಕೆ

ಹಾರ್ಮುಜ್ ಜಲಸಂಧಿಯಿಂದ ಬರುವ ತೈಲಕ್ಕಿಂತ ಹೆಚ್ಚಿನದ್ದು ಬೇರೆಡೆಯಿಂದ ಭಾರತ ತಲುಪಿದೆ

ಪೆಟ್ರೋಲಿಯಂ ಸಚಿವರ ಕುತೂಹಲಕಾರಿ ಮಾಹಿತಿ



ಮುಂಬೈಗೆ ಬಂದ ಮೊದಲ ತೈಲ ಹಡಗು.

ನವದೆಹಲಿ, ಮಾ.12– ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆಗೆ ಅಡ್ಡಿ ಇದ್ದರೂ ಭಾರತದ ಕಚ್ಚಾ ತೈಲ ಪೂರೈಕೆಯ ಸ್ಥಿತಿ ಸುರಕ್ಷಿತವಾಗಿಯೇ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಗುರುವಾರ ಹೇಳಿದ್ದಾರೆ.



ಲೋಕಸಭೆಯಲ್ಲಿ ಮಾತನಾಡಿದ ಪುರಿ, ಇಂಧನ ಕ್ಷೇತ್ರದ ಇತಿಹಾಸದಲ್ಲಿ ಜಗತ್ತು ವರ್ತಮಾನದಂತಹ ಕ್ಷೋಭವನ್ನು ಎದುರಿಸಿಲ್ಲ ಎಂದು ಅವರು ಹೇಳಿದರು. ದಾಖಲಾದ ಇತಿಹಾಸದಲ್ಲಿ ಮೊದಲ ಬಾರಿಗೆ ಹಾರ್ಮುಜ್ ಜಲಸಂಧಿಯನ್ನು ವಾಣಿಜ್ಯ ಸಾಗಣೆಗೆ ಪರಿಣಾಮಕಾರಿಯಾಗಿ ಮುಚ್ಚಲಾಗಿದೆ ಎಂದು ತಿಳಿಸಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಕಾರಣವಾಗುವುದರಲ್ಲಿ ಭಾರತ ಯಾವುದೇ ಪಾತ್ರವನ್ನು ಹೊಂದಿಲ್ಲದಿದ್ದರೂ, ■ 10ನೇ ಪುಟಕ್ಕೆ

ಎಲ್‌ಪಿಜಿ ಸಿಲಿಂಡರ್ ವ್ಯತ್ಯಯದ ಹಿನ್ನೆಲೆ


ಮತ್ತೆ ಬಂದೇ ಬಿಡ್ತು ಸೌದೆ ಒಲೆ ಕಾಲ...!



ಹೋಟೆಲ್ ಉದ್ಯಮ ಒಲ್ಲೆ ಎನ್ನಲಾಗದು ಒಲೆಯಾ!; ಸೌದೆ ಡಿಪೋಗಳಲ್ಲಿ ಸೌದೆಗೆ ಭಾರೀ ಬೇಡಿಕೆ

ಮೈಸೂರು, ಮಾ.12(ಬಿಎಲ್‌ಯು)– ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಮಾಂಸಹಾರಿ ಹೋಟೆಲ್‌ಗಳು ಅನಿವಾರ್ಯವಾಗಿ ಪೂರ್ಣ ಪ್ರಮಾಣದಲ್ಲಿ ಸೌದೆ ಒಲೆ ಮೊರೆ ಹೋಗಿದ್ದು, ಹಾಗಾಗಿ ಸೌದೆಗೆ ಬೇಡಿಕೆ ಹೆಚ್ಚಾಗಿದೆ.

ಸಸ್ಯಹಾರಿ ಹೋಟೆಲ್ ಸೇರಿದಂತೆ ದೊಡ್ಡ ಹೋಟೆಲ್‌ಗಳು ಆಹಾರ ತಯಾರಿಕೆಗೆ ವಾಣಿಜ್ಯ ಸಿಲಿಂಡರ್ ಮೇಲೆಯೇ ಅವಲಂಬಿತವಾಗಿವೆ. ಈ ಹೋಟೆಲ್‌ಗಳಲ್ಲಿ ಸೌದೆ ಒಲೆಯಿಂದ ಆಹಾರ ತಯಾರಿಸುವ ವ್ಯವಸ್ಥೆಯೂ ಇಲ್ಲ. ಅದು ಸಾಧ್ಯವೂ ಇಲ್ಲ. ಆದರೆ ಕೆಲವು ಮಾಂಸಹಾರಿ ಹೋಟೆಲ್‌ಗಳಲ್ಲಿ ಇಂದಿಗೂ ಸೌದೆ ಒಲೆಯಲ್ಲಿ ಆಹಾರ ತಯಾರಿಸಲಾಗುತ್ತಿದೆ. ಸಾಂಪ್ರದಾಯಿಕ ವಿಧಾನದ ಸೌದೆ ಒಲೆ ಆಹಾರ ತಯಾರಿಕೆಯನ್ನು ಅವಲಂಬಿಸುವ ಅನಿವಾರ್ಯತೆ ಎದುರಾಗಿದ್ದು, ಹಾಗಾಗಿ ಸೌದೆ ಬೆಲೆ ಹೆಚ್ಚಳವಾಗುತ್ತಿದೆ. ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ■ 10ನೇ ಪುಟಕ್ಕೆ



ರೆಸಾರ್ಟ್‌ವೊಂದರಲ್ಲಿ ಸೌದೆ ಒಲೆಯಲ್ಲಿ ಆಹಾರ ತಯಾರಿಸುತ್ತಿರುವ ದೃಶ್ಯ.

ರೆಸಾರ್ಟ್, ಹೋಂ ಸ್ಟೇಗಳಲ್ಲಿ ಸೌದೆ ಒಲೆಯಲ್ಲೇ ಆಹಾರ ತಯಾರಿಕೆ

ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ಸೌದೆ ಒಲೆಯಿಂದಲೇ ಅಡುಗೆ ತಯಾರಿ ಆರಂಭಿಸಲಾಗಿದೆ.

ಸಾಮಾನ್ಯವಾಗಿ ರೆಸಾರ್ಟ್ ಹಾಗೂ ಹೋಂ ಸ್ಟೇಗಳು ನಗರ ಹೊರ ವಲಯ, ಹಳ್ಳಿಗಾಡು ಪ್ರದೇಶದಲ್ಲಿವೆ. ಬಂಡೀಪುರ, ನಾಗರಹೊಳೆ ಅಭಯಾರಣ್ಯ, ಹೆಚ್.ಡಿ.ಕೋಟೆಯ ಕಬಿನಿ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ ನೂರಾರು ರೆಸಾರ್ಟ್ ಹಾಗೂ ಹೋಂ ಸ್ಟೇಗಳಿವೆ. ಅಲ್ಲೆಲ್ಲಾ ಸರ್ವಸಾಮಾನ್ಯವಾಗಿ ಲಭ್ಯವಿರುವ ಸೌದೆಗಳಿಂದಲೇ ಆಹಾರ ತಯಾರಿಕೆ ಮಾಡಲಾರಂಭಿಸಿದ್ದಾರೆ.

ಅಡುಗೆ ಅನಿಲದ ಸಿಲಿಂಡರ್ ಪರಿಚಯವಾದ ಮೇಲೆ ನಗರ ಮಾತ್ರವಲ್ಲದೆ ಹಳ್ಳಿ ಜನರು ಕೂಡ ಗ್ಯಾಸ್ ಅವಲಂಬಿಸಿದ್ದರು. ಹೋಟೆಲ್, ರೆಸಾರ್ಟ್ ಹಾಗೂ ಹೋಂ ಸ್ಟೇಗಳಲ್ಲಿ ಸೌದೆ ಒಲೆ ವ್ಯವಸ್ಥೆಯೇ ಇರಲಿಲ್ಲ. ಈಗ ಬಯಲಲ್ಲಿ ಒಲೆ ಹಾಕಿ ಆಹಾರ ತಯಾರಿಸುತ್ತಿರುವುದು ಸಾಮಾನ್ಯವಾಗಿದೆ.

ಈ ಮೂಲಕ ತೆರೆಮರೆಗೆ ಸರಿದಿದ್ದ ಸೌದೆ ಒಲೆ ಅಡುಗೆ ವ್ಯವಸ್ಥೆ ಪುನಾರಂಭಗೊಂಡಿದೆ. ಸೌದೆ ಒಲೆ ಅಡುಗೆ ಹಳೆ ಕಾಲದ ವ್ಯವಸ್ಥೆ ಎಂದು ಮೂಗು ಮುರಿಯುತ್ತಿದ್ದ ಈಗಿನ ಪೀಳಿಗೆಗೆ ಈಗ ಹಳೆ ವ್ಯವಸ್ಥೆಯೇ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ವ್ಯವಸ್ಥೆಗೆ ಯಾವತ್ತಿದ್ದರೂ ಬೆಲೆ ಇದ್ದೆ ಇರುತ್ತದೆ ಈಗಿನ ಪರಿಸ್ಥಿತಿಯೇ ಸ್ಪಷ್ಟ ನಿದರ್ಶನ.

ಮಾ.16ಕ್ಕೆ ರಾಜ್ಯದ 2 ಕ್ಷೇತ್ರಗಳ ಉಪ ಚುನಾವಣೆ ಸೇರಿದಂತೆ 5 ರಾಜ್ಯಗಳ ಚುನಾವಣೆ ಘೋಷಣೆ ಸಾಧ್ಯತೆ

ಕೋಲ್ಕತ್ತಾ, ಮಾ.12– ಕೇಂದ್ರ ಚುನಾವಣಾ ಆಯೋಗ ಮಾರ್ಚ್ 16 ರಂದು ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ದಿನಾಂಕವನ್ನು ಘೋಷಿಸುವ ಸಾಧ್ಯತೆ ಇದೆ.

ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಬಗ್ಗೆ ಚರ್ಚೆ ನಡೆಯುತ್ತಿರುವ ಸಮಯದಲ್ಲೇ ಮಾರ್ಚ್ 14ರಂದು ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿಯ 'ಪರಿವರ್ತನ್ ಯಾತ್ರೆ'ಯ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಲಿದ್ದಾರೆ. ಇದಾದ ಎರಡು ದಿನಗಳ ನಂತರ, ಅಂದರೆ ಮಾರ್ಚ್ 16 ರಂದು ಕೇಂದ್ರ ಚುನಾವಣಾ ಆಯೋಗ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ದಿನಾಂಕ ಪ್ರಕಟಿಸುವ ನಿರೀಕ್ಷೆಯಿದೆ.

ECI ಮೂಲಗಳ ಪ್ರಕಾರ, ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ಎರಡು ಹಂತಗಳಲ್ಲಿ ನಡೆಯುವ ಸಾಧ್ಯತೆಯಿದೆ. ಮೊದಲ ಹಂತವು ಏಪ್ರಿಲ್ ಎರಡನೇ ವಾರದ ಕೊನೆಯಲ್ಲಿ ಅಥವಾ ಮೂರನೇ ವಾರದಲ್ಲಿ ನಡೆಯಬಹುದು. ಚುನಾವಣಾ ಆಯೋಗವು ಬಂಗಾಳವನ್ನು ಹೊರತುಪಡಿಸಿ, ■ 10ನೇ ಪುಟಕ್ಕೆ

ಮೈಸೂರಲ್ಲಿ ಸಾಕುಪ್ರಾಣಿಗಳ ಚಿತಾಗಾರಕ್ಕೆ ಶಾಸಕ ಶ್ರೀವತ್ಸ ಆಗ್ರಹ

ಬೆಂಗಳೂರು, ಮಾ.12– ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾಕುಪ್ರಾಣಿಗಳ ಅಂತ್ಯಕ್ರಿಯೆಗೆ ಚಿತಾಗಾರ ಹಾಗೂ ಕಳೇಬರ ಸಾಗಿಸಲು ಸೂಕ್ತ ವಾಹನ ವ್ಯವಸ್ಥೆ ಕಲ್ಪಿಸುವಂತೆ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಸದನದಲ್ಲಿ ಗುರುವಾರ ಮಾತನಾಡಿದ ಅವರು, ಸಾಕುಪ್ರಾಣಿಗಳು ಸಾವನ್ನಪ್ಪಿದ ನಂತರ ಕಳೇಬರವನ್ನು ಗೌರವಯುತವಾಗಿ ಹೂಳಲು ಅಥವಾ ಸುಡಲು ವ್ಯವಸ್ಥೆ ಕಲ್ಪಿಸಬೇಕು. ಮೈಸೂರಿನಲ್ಲಿ ಜೀವನೋಪಾಯಕ್ಕಾಗಿ ಹಲವರು ಹಸು ಸಾಕಾಣಿಕೆ ಮಾಡುತ್ತಾರೆ. ಶ್ವಾನ, ಬೆಕ್ಕುಗಳನ್ನು ಸಾಕುತ್ತಾರೆ. ಅಲ್ಲದೆ ಟಾಂಗಾ ಗಾಡಿ ನಡೆಸಿಕೊಂಡು ಜೀವನ ನಡೆಸುವವರೂ ಇದ್ದಾರೆ. ಮನೆ ಬಳಿ ಜಾಗ ಇರುವವರು ನಾಯಿ, ಬೆಕ್ಕು

ಪ್ರಾಣಿಗಳ ಕಳೇಬರ ಸಾಗಿಸಲು ಸೂಕ್ತ ವಾಹನ ವ್ಯವಸ್ಥೆಗೂ ಮನವಿ

ಸತ್ತರೆ ತಮ್ಮ ಜಾಗದಲ್ಲೇ ಹೂಳುತ್ತಾರೆ. ಆದರೆ ಹಸು, ಕುದುರೆಗಳಂತಹ ದೊಡ್ಡ ಪ್ರಾಣಿಗಳನ್ನು ಹೂಳಲು ಸ್ಥಳಾವಕಾಶವಿಲ್ಲ ಆದ್ದರಿಂದ ಸಾಕುಪ್ರಾಣಿಗಳ ಅಂತ್ಯಕ್ರಿಯೆಗೆ ಚಿತಾಗಾರ ವ್ಯವಸ್ಥೆ ಅಗತ್ಯವಿದೆ ಎಂದರು.

ರಿಂಗ್ ರಸ್ತೆ ಸೇರಿದಂತೆ ಹಲವೆಡೆ ವಾಹನಗಳಿಗೆ ಸಿಕ್ಕಿ ಸಾವನ್ನಪ್ಪುವ ಪ್ರಾಣಿಗಳ ಕಳೇಬರ ಅಲ್ಲಿಯೇ ಬಿದ್ದಿರುತ್ತದೆ. ಪ್ರಾಣಿಗಳ ಕಳೇಬರದ ಮೇಲೆ ವಾಹನಗಳು ಹರಿದು ದೇಹ ಛಿದ್ರವಾಗಿರುತ್ತದೆ. ಯಾರಾದರೂ ಪಕ್ಕಕ್ಕೆ ಸರಿಸಿದ್ದರೆ ಕಳೇಬರ ಕೊಳೆತು ಬಹಳ ದಿನ ದುರ್ವಾಸನೆ ಬೀರುತ್ತದೆ. ಆದ್ದರಿಂದ ವಾಹನಗಳಿಗೆ ಸಿಕ್ಕಿಸತ್ತಿರುವ ಪ್ರಾಣಿಗಳ ಕಳೇಬರವನ್ನು ಸಾಗಿಸಲು ಆಂಬುಲೆನ್ಸ್ ಮಾದರಿ ವಾಹನವನ್ನು ನಗರ ಪಾಲಿಕೆಗೆ ಒದಗಿಸಬೇಕು. ಆ ವಾಹನದಲ್ಲಿ ಸಾರ್ವಜನಿಕರು ತಮ್ಮ ಪ್ರಾಣಿಗಳ ಕಳೇಬರ ಸಾಗಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಮನವಿ ಮಾಡಿದರು.

ಮನುಷ್ಯರ ಚಿತಾಗಾರ ಇರುವ ಕಡೆಯಲ್ಲೇ ಸ್ಥಳಾವಕಾಶವಿದ್ದರೆ ಸಾಕುಪ್ರಾಣಿಗಳ ಚಿತಾಗಾರ ಕಲ್ಪಿಸಬೇಕು. ಇಲ್ಲವೇ ಸೂಕ್ತ ಜಾಗವನ್ನು ಗುರುತಿಸಿ, ಚಿತಾಗಾರ ನಿರ್ಮಿಸಬೇಕು. ಹೂಳುವುದರಿಂದ ಸತ್ತ ಪ್ರಾಣಿಗೆ ಏನಾದರೂ ■ 10ನೇ ಪುಟಕ್ಕೆ

ಬಿಪಿಎಲ್ ಕಾರ್ಡ್‌ಗೆ ಆದಾಯದ ಮಿತಿ 3 ಲಕ್ಷಕ್ಕೇರಿಸಲು ಸರ್ಕಾರದ ಚಿಂತನೆ

ಬೆಂಗಳೂರು, ಮಾ.12(ಕೆಎಂಶಿ)– ಬಿಪಿಎಲ್ ಕಾರ್ಡ್ ಪಡೆಯಲು ನಿಗದಿಪಡಿಸಲಾಗಿರುವ ವಾರ್ಷಿಕ ಆದಾಯ ಮಿತಿಯನ್ನು 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಏರಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿಂದು ತಿಳಿಸಿದರು.





ದಿನೇಶ್ ಗುಂಡೂರಾವ್

ಪ್ರಶ್ನೋತ್ತರ ಅವಧಿಯಲ್ಲಿ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಪ್ರಸ್ತಾವಕ್ಕೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರ ಪರವಾಗಿ ಉತ್ತರ ನೀಡಿದ ಅವರು, ವಾರ್ಷಿಕ ಆದಾಯ ಮಿತಿ ಪರಿಷ್ಕರಣೆಯಾಗಬೇಕು ಎಂಬ ಅಭಿಪ್ರಾಯ ಸರ್ಕಾರದ್ದು. ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಅವರ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗ ನೀಡಿರುವ ■ 10ನೇ ಪುಟಕ್ಕೆ

ಮಧ್ಯಪ್ರಾಚ್ಯ ದೇಶಗಳ ಯುದ್ಧದ ಪರಿಣಾಮ ಮೊಟ್ಟೆ ಬೆಲೆಯಲ್ಲಿ ಭಾರೀ ಇಳಿಕೆ

ಮೈಸೂರು, ಮಾ.12(ಬಿಎಲ್‌ಯು) ಮಧ್ಯ ಪ್ರಾಚ್ಯ ಯುದ್ಧ ಕುಕ್ಕುಟೋದ್ಯಮದ ಮೇಲೆ ಪರಿಣಾಮ ಬೀರಿದ್ದು, ಕೋಳಿ ಮೊಟ್ಟೆ ಬೆಲೆ ದಿಢೀರ್ ಕುಸಿತವಾಗಿದೆ.



ಭಾರತದಿಂದ ಮಧ್ಯ ಪ್ರಾಚ್ಯ ದೇಶಗಳಿಗೆ ಪ್ರತಿನಿತ್ಯ 250ಕ್ಕೂ ಹೆಚ್ಚು ವಸ್ತುಗಳು ರಫ್ತಾಗುತ್ತವೆ. ಇದರಲ್ಲಿ ಕೋಳಿ ಮೊಟ್ಟೆ ಕೂಡ ಒಂದಾಗಿದ್ದು, ಪ್ರತಿ ದಿನ ಸುಮಾರು 2 ಕೋಟಿವರೆಗೆ ರಫ್ತಾಗುತ್ತಿತ್ತು.

ಆದರೆ ಈಗ ಯುದ್ಧದ ಪರಿಣಾಮ ಶೇ. 80 ರಷ್ಟು ಕೋಳಿ ಮೊಟ್ಟೆ ರಫ್ತು ಸ್ಥಗಿತವಾಗಿದೆ. ಇದರಿಂದ ಕೋಲಾರ, ಬೆಂಗಳೂರು, ತಮಿಳುನಾಡು ■ 10ನೇ ಪುಟಕ್ಕೆ

ಹೈಟೆನ್ಷನ್ ಲೈನ್ ಕೆಳಗಿನ ಫುಡ್‌ಸ್ಟಾಲ್‌ಗಳು ನೆಲಸಮ

■ ವಿಜಯನಗರ 2ನೇ ಹಂತದ ಅಪಾಯಕಾರಿ ಸ್ಥಳದಲ್ಲಿ ಆಹಾರ ಪದಾರ್ಥ ಮಾರಾಟ! ■ ಇಷ್ಟು ದಿನ ಕಣ್ಣುಮುಚ್ಚಿ ಕುಳಿತಿದ್ದ ಪಾಲಿಕೆ ಅಧಿಕಾರಿಗಳು! ■ ಮನ ಬಂದಂತೆ ಸ್ಟಾಲ್ ನಿರ್ಮಿಸಿಕೊಂಡಿದ್ದ ವ್ಯಾಪಾರಿಗಳು; ತೆರವು ವೇಳೆ ದಾಂಧಲೆ ಯತ್ನ

ಮೈಸೂರು, ಮಾ.12(ಎಂಕೆ)– ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಬಳಿಯ ಹೈಟೆನ್ಷನ್ ವಿದ್ಯುತ್ ಲೈನ್ ಕೆಳಗೆ ಅನಧಿಕೃತವಾಗಿ ತಲೆಯೆತ್ತಿದ್ದ 70ಕ್ಕೂ ಅಧಿಕ ಫಾಸ್ಟ್‌ಫುಡ್ ಸ್ಟಾಲ್‌ಗಳನ್ನು ಗುರುವಾರ ತೆರವುಗೊಳಿಸಲಾಯಿತು.

ಬೆಳ್ಳಂಬೆಳಗ್ಗೆಯೇ ಪೊಲೀಸ್ ಭದ್ರತೆಯೊಂದಿಗೆ ಕಾರ್ಯಾಚರಣೆಗಿಳಿದ ನಗರ ಪಾಲಿಕೆಯ ವಲಯ ಕಚೇರಿ–5ರ ಅಧಿಕಾರಿ–ಸಿಬ್ಬಂದಿ ಹಾಗೂ ಅಭಯ ತಂಡ, ಮೂರು ಜೆಸಿಬಿ, ಐದು ಟಿಪ್ಪರ್, ನಾಲ್ಕು ಟ್ರ್ಯಾಕ್ಟರ್ ಹಾಗೂ ಗೂಡ್ಸ್ ವಾಹನಗಳ ಮೂಲಕ ಸ್ಟಾಲ್‌ಗಳನ್ನು ನೆಲಸಮಗೊಳಿಸಲಾಯಿತು.

ಹೈಟೆನ್ಷನ್ ವಿದ್ಯುತ್ ಲೈನ್‌ನ ಅಪಾಯದ ಅರಿವಿಲ್ಲದೆ ಅನಧಿಕೃತ ಸ್ಥಳದಲ್ಲಿ ಮನಸೋ ಇಚ್ಛೆ ಖಾಯಂ ಮಳಿಗೆಗಳನ್ನು ನಿರ್ಮಿಸಿಕೊಂಡು ವ್ಯಾಪಾರ–ವಹಿವಾಟು ನಡೆಸುತ್ತಿದ್ದವರಿಗೆ ಕಡಿವಾಣ ಹಾಕಿರುವ ನಗರಪಾಲಿಕೆ, ಹಲವು ಬಾರಿ ಎಚ್ಚರಿಕೆ ನೀಡಿದ ಬಳಿಕ ಕಡೆಗೂ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಿಸಿದೆ.

ವಲಯ ಕಚೇರಿಯ–5ರ ಉಪ ಆಯುಕ್ತ ಮಂಜುನಾಥ್ ರೆಡ್ಡಿ ನೇತೃತ್ವದಲ್ಲಿ ಬೆಳಗ್ಗೆ 6 ಗಂಟೆಗೆ ಆರಂಭವಾದ ಕಾರ್ಯಾಚರಣೆ ಸಂಜೆಯವರೆಗೂ ನಡೆಯಿತು. ಕೆಲವೆಡೆ ಕಾಂಕ್ರೀಟ್ ಬಳಸಿ ಖಾಯಂ ಸ್ಟಾಲ್ ನಿರ್ಮಿಸಿಕೊಂಡಿದ್ದರಿಂದ ಜೆಸಿಬಿಗಳನ್ನು ಬಳಕೆ ಮಾಡಿ, ಕಾಂಕ್ರೀಟ್ ಸಮೇತ ಕಿತ್ತೊಗೆಯಲಾಯಿತು.



ವಿಜಯನಗರ 2ನೇ ಹಂತದ ಹೈಟೆನ್ಷನ್ ಲೈನ್ ಕೆಳಗಿನ ಅನಧಿಕೃತ ಫುಡ್‌ಸ್ಟಾಲ್‌ಗಳನ್ನು ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದರು.

> ಹತ್ತು ದಿನಗಳ ಹಿಂದೆಯಷ್ಟೇ ನಗರದ ರಸ್ತೆ ಬದಿ ವ್ಯಾಪಾರಿಗಳ ಸಮಿತಿಯ ಸಭೆ ನಡೆಸಿ ಫುಡ್‌ಸ್ಟಾಲ್‌ಗಳನ್ನು ಸ್ಥಳಾಂತರಿಸುವಂತೆ ಸೂಚಿಸಲಾಗಿತ್ತು. ವ್ಯಾಪಾರಸ್ಥರು ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಬಳಕೆ ಮಾಡುತ್ತಿದ್ದರಿಂದ ಮೈಸೂರು ಅರಮನೆ ಬಳಿ ಸಂಭವಿಸಿದ ಹೀಲಿಯಂ ಬಲೂನ್ ಗ್ಯಾಸ್ ಸ್ಫೋಟದ ಮುನ್ನೆಚ್ಚರಿಕೆ ಕ್ರಮವಾಗಿ ತೆರವು ಕಾರ್ಯಾಚರಣೆ ನಡೆಸಲಾಯಿತು. ಬೇರೆ ಸ್ಥಳ ಸೂಚಿಸಿದ್ದು, ವ್ಯಾಪಾರಿಗಳು ಅಲ್ಲಿ ಫಾಸ್ಟ್‌ಫುಡ್ ವ್ಯಾಪಾರ ನಡೆಸಬಹುದಾಗಿದೆ.
> – ಮಂಜುನಾಥ್ ರೆಡ್ಡಿ, ಉಪ ಆಯುಕ್ತ, ವಲಯ ಕಚೇರಿ–5

ಇಟ್ಟಿಗೆಗಳನ್ನು ಬಳಸಿ ಕಟ್ಟಿದ್ದ ದೋಸೆ ಕಲ್ಲುಗಳು, ಕುಳಿತು ತಿಂಡಿ–ತಿನಿಸು ತಿನ್ನಲು ಹಾಕಿದ್ದ ಕಲ್ಲುಗಳು, ಟಾರ್ಪಾಲ್, ಬಿದಿರಿನ ಬೊಂಬುಗಳು, ಗಳಗಳನ್ನು ಕಿತ್ತೊಗೆದರೆ, ದಿನ ಪೂರ್ತಿ ಅಲ್ಲಿಯೇ ನಿಂತಿದ್ದ ಕೆಲ ಆಟೋ ಮತ್ತು ತಳ್ಳುವ ಗಾಡಿಗಳನ್ನು ತೆರವು ಮಾಡಿಸಲಾಯಿತು. ■ 10ನೇ ಪುಟಕ್ಕೆ

ಹಲವು ವರ್ಷಗಳಿಂದ ವ್ಯಾಪಾರ...

ವಿಜಯನಗರ ವಾಟರ್ ಟ್ಯಾಂಕ್ ಬಳಿಯ ಹೈಟೆನ್ಷನ್ ವಿದ್ಯುತ್ ಲೈನ್ ಕೆಳಗೆ ಕಳೆದ 10–12 ವರ್ಷಗಳಿಂದ ಫಾಸ್ಟ್‌ಫುಡ್ ಸ್ಟಾಲ್ ನಡೆಸಿಕೊಂಡು ಜೀವನ ನಡೆಸುತ್ತಿದ್ದೇವೆ. 70 ಸ್ಟಾಲ್‌ಗಳನ್ನು ನಂಬಿ ನೂರಾರು ಕುಟುಂಬಗಳು ಜೀವನ ನಡೆಸುತ್ತಿದ್ದವು. ಆದರೆ, ಪಾಲಿಕೆಯವರು ಏಕಾಏಕಿ ತೆರವು ಮಾಡಿರುವುದರಿಂದ ಈಗ ಕುಟುಂಬ ನಿರ್ವಹಣೆಯೂ ಕಷ್ಟವಾಗಲಿದೆ ಎಂದು ಇಲ್ಲಿನ ವ್ಯಾಪಾರಸ್ಥರು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗಲಿದೆ. ಶಾಲಾ ಶುಲ್ಕ ಕಟ್ಟಿದರಷ್ಟೇ ಪ್ರವೇಶ ಪತ್ರ ನೀಡುತ್ತಾರೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿರುವಾಗಲೇ ಸಂಪಾದನೆಯ ಆಧಾರವನ್ನು ಕಿತ್ತುಕೊಳ್ಳಲಾಗಿದೆ. ಸರ್ಕಾರಕ್ಕೆ ನಿರುದ್ಯೋಗ ಸಮಸ್ಯೆ ಬಗೆಹರಿಸುವ ಶಕ್ತಿ ಇಲ್ಲವಾದ ಮೇಲೆ ವ್ಯಾಪಾರಕ್ಕಾದರೂ ಅವಕಾಶ ಮಾಡಿಕೊಡಬೇಕು ಎಂದು ಅಳಲು ತೋಡಿಕೊಂಡರು.

ಹೈಟೆನ್ಷನ್ ಅಪಾಯ...!

ಹೈಟೆನ್ಷನ್ ವಿದ್ಯುತ್ ಲೈನ್ ಕೆಳಗೆ ಫಾಸ್ಟ್‌ಫುಡ್ ಸ್ಟಾಲ್‌ಗಳನ್ನು ನಡೆಸುವುದು ಅತ್ಯಂತ ಅಪಾಯಕಾರಿ. 11 ಸಾವಿರ ಕಿಲೋ ವ್ಯಾಟ್ ವಿದ್ಯುತ್ ಹರಿಯುವ ಲೈನ್ ಕೆಳಗಡೆ ಯಾವಾಗಬೇಕಾದರೂ ಅನಾಹುತ ಸಂಭವಿಸಬಹುದು. ಅಲ್ಲದೆ ಮೊಬೈಲ್ ಇನ್ನಿತರೆ ಎಲೆಕ್ಟ್ರಾನಿಕ್ ವಸ್ತುಗಳಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ. ಇದರ ನಡುವೆ ಅಡುಗೆ ಅನಿಲಗಳನ್ನು ವ್ಯಾಪಾರಿಗಳು ಬಳಸುತ್ತಿದ್ದು, ಆಕಸ್ಮಾತ್ ಅಗ್ನಿ ಅವಘಡಗಳು ಉಂಟಾದಲ್ಲಿ ಭಾರೀ ಪ್ರಮಾಣದಲ್ಲಿ ಪ್ರಾಣ ಹಾನಿಯಾಗಲಿದೆ ಎಂದು ಚೆಸ್ಕಾಂನ ಕೆಲ ಹಿರಿಯ ಅಧಿಕಾರಿಗಳು ಎಚ್ಚರಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ ತವರು ಮನೆಯಿಂದ ವಾಪಸ್ ಬಂದಳು
ಗಂಡ ಬಾಗಿಲು ತೆರೆದವನೇ ನಗಲಾರಂಭಿಸಿದ !

ಹೆಂಡತಿ : ಹೀಗೆ ಯಾಕೆ ನಗುತ್ತಿದ್ದೀರಿ...?
ಗಂಡ : ಗುರೂಜಿ ಹೇಳಿದ್ದರು, ಕಷ್ಟಗಳು ಎದುರಿಗೆ ಬಂದಾಗ ನಗುತ್ತಲೇ ಅದನ್ನು ಎದುರಿಸಿ ಎಂದು...!?

ಮೈಸೂರು ಮಿತ್ರ

ಶುಕ್ರವಾರ, ಮಾರ್ಚ್ 13, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ. ಏಕೆಂದರೆ... ಯಾರಿಗೆ ಗೊತ್ತು. ಆ ಹೆಜ್ಜೆ ನಿನ್ನ ಇತಿಹಾಸವನ್ನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿ ಹನಿಗೂಡಿದರೆ ಹಳ್ಳ; ತೆನೆ ತೆನೆಗೂಡಿದರೆ ಬಳ್ಳ

ನಿಮ್ಮ ಪತ್ರಗಳು

ನಂದಿ ಭವನ ಮುಂಭಾಗದ ಮೋರಿ ಶುಚಿಗೊಳಿಸಿ

ಮಾನ್ಯರೆ,



ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿ ಹೊತ್ತಿರುವ ಚಾಮರಾಜನಗರದ ನಂದಿ ಭವನದಲ್ಲಿ ಆಗಾಗ ಮದುವೆ ಮತ್ತು ಇತರ ಸಮಾರಂಭಗಳು ನಡೆಯುತ್ತವೆ. ಕಾರ್ಯಕ್ರಮಗಳು ಮುಗಿದು ಉಳಿದ ಆಹಾರ ಪದಾರ್ಥಗಳನ್ನು ಮುಂಭಾಗದ ಮೋರಿ (ಡ್ರೈನೇಜ್)ಗೆ ಸುರಿಯುತ್ತಾರೆ. ಈ ಭವನದಲ್ಲಿ ಪಾತ್ರೆಗಳನ್ನು ತೊಳೆಯುವ ನೀರು ಈ ಮೋರಿಗೆ ಬಂದು ನಿಂತಿರುವುದರ ಜೊತೆಗೆ ಹಲವರು ಮದ್ಯಪಾನ ಮತ್ತು ಧೂಮಪಾನಗಳನ್ನು ಮಾಡಿ ಅದರ ಕವರ್ ಹಾಗೂ ಬಾಟಲಿಗಳನ್ನು ಬಿಸಾಡಿ ಇನ್ನಷ್ಟು ಗಲೀಜು ಮಾಡುತ್ತಿದ್ದಾರೆ. ಇದರಿಂದಾಗಿ ಓಡಾಡುವ ಸಾರ್ವಜನಿಕರಿಗೆ ಮತ್ತು ಅಕ್ಕ ಪಕ್ಕದಲ್ಲಿ ವಾಸಿಸುವ ಹಾಗೂ ವ್ಯಾಪಾರ ವಹಿವಾಟು ನಡೆಸುವ ಜನರಿಗೂ ಸೇರಿ ನಂದಿ ಭವನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಆಗಮಿಸುವವರಿಗೆ ರೋಗ ರುಜಿನಗಳು ಹರಡುವ ಭೀತಿಯೂ ಎದುರಾಗಿದೆ. ಆದ್ದರಿಂದ ಸಂಬಂಧಪಟ್ಟ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಕೂಡಲೇ ನಂದಿ ಭವನದ ಮುಂಭಾಗದಲ್ಲಿರುವ ಮೋರಿಯನ್ನು ಸ್ವಚ್ಛಗೊಳಿಸಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಸ್ವಾಗತಾರ್ಹ ನಿರ್ಧಾರ

ಮಾನ್ಯರೆ,

ಆಸಿಡ್ ಸಂತ್ರಸ್ಥೆಯರಿಗೆ ಮಾಸಿಕ 50 ಸಾವಿರ ರೂಪಾಯಿಗಳ ಪಿಂಚಣಿ, ಉಚಿತ ವಸತಿ ಹಾಗೂ ಉದ್ಯಮ ಶುರುಮಾಡಲು ಧನ ಸಹಾಯ ನೀಡುವುದಾಗಿ ರಾಜ್ಯದ ಗೃಹ ಸಚಿವ ಡಾ.ಜಿ.ಪರಮೇಶ್ವರ ವಿಧಾನ ಪರಿಷತ್ತಿನಲ್ಲಿ ಘೋಷಿಸಿರುವುದು ಸ್ವಾಗತಾರ್ಹವಾಗಿದೆ. ದುಷ್ಕರ್ಮಿಗಳ ಅಟ್ಟಹಾಸಕ್ಕೆ ಬಲಿಯಾಗಿ ಆಸಿಡ್ ದಾಳಿಗೆ ತುತ್ತಾದ ಅನೇಕ ದೌರ್ಭಾಗ್ಯ ಹೆಣ್ಣುಮಕ್ಕಳ ಮುಂದಿನ ಬದುಕು ಯಾತನಾಮಯ ಹಾಗೂ ನರಕಸದೃಶ್ಯವಾಗಿರುತ್ತದೆ. ಈ ರೀತಿಯ ಘೋರ ಆಸಿಡ್ ದಾಳಿಗೆ ತುತ್ತಾದ ಸುಮಾರು 169 ಸಂತ್ರಸ್ಥೆಯರು ರಾಜ್ಯದಲ್ಲಿದ್ದು ಅವರ ಪೈಕಿ ಕೇವಲ 59 ಮಂದಿ ಹೆಣ್ಣು ಮಕ್ಕಳಿಗೆ ಮಾತ್ರ ಪಿಂಚಣಿ ಸಿಗುತ್ತಿದೆ ಎಂಬ ವರದಿಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಇನ್ನುಳಿದ ಎಲ್ಲಾ ಸಂತ್ರಸ್ಥೆಯರಿಗೂ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನೀಡುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಈ ಬಗ್ಗೆ ಶಾಸಕ ಕೆ.ಶಿವಕುಮಾರ್ ಸದನದಲ್ಲಿ ಪ್ರಸ್ತಾಪಿಸಿ, ಇಂತಹ ನಿರ್ಭಾಗ್ಯ ಹೆಣ್ಣುಮಕ್ಕಳ ಕಂಬನಿಗೆ ದನಿಯಾದದ್ದು ಹಾಗೂ ಪಕ್ಷಬೇಧ ಮರೆತು ಅವರಿಗೆ ಬೆಂಬಲ ಸೂಚಿಸಿದ ಇತರ ಶಾಸಕರು ಅಭಿನಂದನಾರ್ಹರು. ರಾಜ್ಯ ಸರ್ಕಾರದ ಘೋಷಣೆ ಕೇವಲ ಘೋಷಣೆಯಾಗಿಯೇ ಉಳಿಯದೇ ಆದಷ್ಟು ಬೇಗ ಕಾರ್ಯರೂಪಕ್ಕೆ ಬರಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಆಧುನಿಕ ವಿದ್ಯುತ್ ಚಿತಾಗಾರ ನಿರ್ಮಾಣವಾಗಲಿ

ಮಾನ್ಯರೆ,

ಮೈಸೂರಿನ ಕನ್ನೇಗೌಡನ ಕೊಪ್ಪಲು ಮತ್ತು ಜಯನಗರಕ್ಕೆ ಸೇರಿದ ಶತಮಾನಗಳಷ್ಟು ಹಳೆಯದಾದ ಸಾರ್ವಜನಿಕ ಸ್ಮಶಾನದ ಸುಮಾರು ಹತ್ತು ಎಕರೆ ಪ್ರದೇಶದ ಜಾಗವು ಹಲವಾರು ವರ್ಷಗಳಿಂದ ಗಿಡಗಂಟಿಗಳು ಬೆಳೆದು ಕಾಡಿನಂತಾಗಿತ್ತು. ಈಗ ಸಾರ್ವಜನಿಕರ ಒತ್ತಾಯದಿಂದ ಈ ಜಾಗವನ್ನು ನಗರ ಪಾಲಿಕೆಯವರು ಸ್ವಚ್ಛಮಾಡಿದ್ದಾರೆ. ನೂರಾರು ವರ್ಷಗಳಿಂದಲೂ ಈ ಜಾಗವು ಕನ್ನೇಗೌಡನ ಕೊಪ್ಪಲಿಗೆ ಸೇರಿದ ಸ್ಮಶಾನದ ಜಾಗ ಎಂದು ಹೇಳಲಾಗುತ್ತಿದೆ. ಈ ಜಾಗವು ಈಗಿರುವ ಕನ್ನೇಗೌಡನ ಕೊಪ್ಪಲಿಗೆ ಸೇರಿದ ಸ್ಮಶಾನದ ಪಕ್ಕದಲ್ಲೇ ಇರುವುದರಿಂದ ಬೆಳೆಯುತ್ತಿರುವ ಮೈಸೂರು ನಗರವನ್ನು ಗಮನದಲ್ಲಿಟ್ಟುಕೊಂಡು ಈ ಜಾಗದಲ್ಲಿ 'ಆಧುನಿಕ ವಿದ್ಯುತ್ ಚಿತಾಗಾರ' ನಿರ್ಮಾಣ ಮಾಡುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಪಾರಂಪರಿಕ ಮೈಸೂರಿನಲ್ಲಿ ಸಂಚಾರ ದಟ್ಟಣೆ, ಸಿಗ್ನಲ್ ಲೈಟುಗಳ ಅಬ್ಬರ

ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರು ತನ್ನ ಪ್ರಶಾಂತತೆ ಮತ್ತು ಪಾರಂಪರಿಕ ಸೌಂದರ್ಯಕ್ಕೆ ಹೆಸರುವಾಸಿ. ಆದರೆ ಇತ್ತೀಚಿನ ದಿನಗಳಲ್ಲಿ ನಗರದಾದ್ಯಂತ ಅಳವಡಿಸಲಾಗಿರುವ ಅತಿಯಾದ ಸಂಚಾರ ಸಿಗ್ನಲ್‌ಗಳು ನಗರದ ಮೂಲ ಸ್ವರೂಪಕ್ಕೆ ಧಕ್ಕೆ ತರುತ್ತಿವೆಯೇ ಎಂಬ ಆತಂಕ ಮೂಡುತ್ತಿದೆ.

ಮೈಸೂರು ಒಂದು ಪಾರಂಪರಿಕ ವಲಯವಾಗಿರುವುದರಿಂದ ಇಲ್ಲಿನ ರಸ್ತೆಗಳು ಮತ್ತು ಪರಿಸರಕ್ಕೆ ತನ್ನದೇ ಆದ ಘನತೆ ಇದೆ. ಆದರೆ ಈಗ ಪ್ರತಿ ಕಿಲೋ ಮೀಟರ್‌ಗೆ ಒಂದರಂತೆ ಸಿಗ್ನಲ್‌ಗಳು ಹೆಚ್ಚುತ್ತಿರುವುದರಿಂದ ವಾಹನಗಳ ಸಾಲು ಬೆಳೆಯುತ್ತಿದೆ. ಇದರಿಂದಾಗಿ ಪರಿಸರ ಮಾಲಿನ್ಯ, ಸಿಗ್ನಲ್‌ಗಳಲ್ಲಿ ನಿಮಿಷಗಟ್ಟಲೆ ವಾಹನಗಳು ಚಾಲನೆಯಲ್ಲಿಯೇ ನಿಲ್ಲುವುದರಿಂದ ಹೊರಬರುವ ಹೊಗೆಯು ಪಾರಂಪರಿಕ ಕಟ್ಟಡಗಳ ಆಯಸ್ಸನ್ನು ಕಡಿಮೆ ಮಾಡುತ್ತಿದೆ ಮತ್ತು ವಾಯು ಮಾಲಿನ್ಯ ಹೆಚ್ಚಿಸುತ್ತಿದೆ. ವಾಹನಗಳ ಧ್ವನಿ ಮಾಲಿನ್ಯವು ಮೈಸೂರಿನ ಶಾಂತಿಯುತ ಪರಿಸರವನ್ನು ಕೆಡಿಸುತ್ತಿದೆ.

ಸುಂದರ ವೃತ್ತಗಳ ಮಧ್ಯೆ ಎದ್ದು ನಿಂತಿರುವ ಆಧುನಿಕ ಸಿಗ್ನಲ್ ಕಂಬಗಳು ನಗರದ ಸೌಂದರ್ಯವನ್ನು ಮರೆಮಾಡುತ್ತಿವೆ.

ನಗರದ ಬೆಳವಣಿಗೆಗೆ ಶಿಸ್ತುಬದ್ಧ ಸಂಚಾರ ವ್ಯವಸ್ಥೆ ಅಗತ್ಯ ನಿಜ. ಆದರೆ, ಕೇವಲ ಸಿಗ್ನಲ್‌ಗಳನ್ನು ಅಳವಡಿಸುವುದೇ ಪರಿಹಾರವಲ್ಲ. ಪಾರಂಪರಿಕ ತಾಣಗಳ ಸುತ್ತಮುತ್ತ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವುದು ಮತ್ತು ಸಾರ್ವಜನಿಕ ಸಾರಿಗೆಗೆ ಹೆಚ್ಚಿನ ಒತ್ತು ನೀಡುವುದು ಇಂದಿನ ಅಗತ್ಯವಾಗಿದೆ. ಆಡಳಿತ ಮಂಡಳಿಯು ಮೈಸೂರಿನ ಪಾರಂಪರಿಕ ಲಕ್ಷಣಗಳನ್ನು ಉಳಿಸಿಕೊಂಡು ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲಿ ಎಂಬುದು ನನ್ನ ಆಶಯ.

–ಬಾಲಾಜಿ, ಮಹಾರಾಜ ಕಾಲೇಜು, ಮೈಸೂರು



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಕಾರ್ಪೊರೇಟ್, ಆರ್ಥಿಕ ರಂಗದಲ್ಲಿ ಮಹಿಳೆಯರ ಪಾಲುದಾರಿಕೆ

ನಿರ್ಮಾಣ ಸಂಸ್ಥೆಯನ್ನು ನಡೆಸುವವರೊಬ್ಬರು, ತಮ್ಮ ಸಂಸ್ಥೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶ ಕೊಡಲು ಬಯಸಿ, ಅದರ ಸಂಬಂಧ ಎದುರಾಗುವ ಸವಾಲುಗಳ ಬಗ್ಗೆ ಕೇಳುತ್ತಿದ್ದರು. ಒಬ್ಬ ಮಾನವ ಜೀವಿಯನ್ನು ಉತ್ಪಾದಿಸುವಲ್ಲಿ, ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚಿನ ಜವಾಬ್ದಾರಿ ಪ್ರಕೃತಿದತ್ತವಾಗಿದೆ. ಹಾಗಾಗಿ ಉತ್ಪಾದನಾ ಘಟಕಗಳಲ್ಲಿ ಅಥವಾ ನಿರ್ಮಾಣ ಕಾರ್ಯದಲ್ಲಿ ಅವರು ಹೆಚ್ಚು ನಿಪುಣರಾಗಿರುತ್ತಾರೆ. ಮಹಿಳೆಯರ ಕೊಡುಗೆ ಪುರುಷರಿಗಿಂತ ಬಹಳ ಬಹಳ ಹೆಚ್ಚು. ನಾನಿದನ್ನು ಖಂಡಿತವಾಗಿ ತಮಾಷೆಯಾಗಿ ಹೇಳುತ್ತಿಲ್ಲ. ಇದನ್ನು ಪ್ರಾಮಾಣಿಕವಾಗಿ ಗೌರವದಿಂದ ಹೇಳುತ್ತಿದ್ದೇನೆ. ಇಂದಿನ ದಿನಗಳಲ್ಲಿ ನಾವು ಕೇವಲ ಕಾರ್ಖಾನೆಗಳ ಪ್ರೊಡಕ್ಷನ್ ಅಸ್ಸೆಂಬ್ಲಿ ಲೈನ್? ಮತ್ತು ಉತ್ಪಾದನಾ ಸವಲತ್ತುಗಳ ಬಗ್ಗೆಯಷ್ಟೇ ಮಾತನಾಡುತ್ತೇವೆ. ಆದರೆ, ನಿರ್ಮಾಣ ಹಂತದಲ್ಲಿ ಸೃಜನಶೀಲತೆಯೂ ಇರುತ್ತದೆ, ಮತ್ತು ಇಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗುತ್ತದೆ.

ಅಸೆಂಬ್ಲಿ ಲೈನ್‌ಗಳಲ್ಲಿ ಪುರುಷ ಚಟುವಟಿಕೆಯೇ ಖಂಡಿತ ಹೆಚ್ಚು ಮತ್ತು ದೈನಂದಿನ ಹಾಜರಾತಿ ಅತ್ಯಗತ್ಯ. ಇದು ಮಹಿಳೆಯರಿಗೆ ಸಾಧ್ಯವಾಗದೇ ಹೋಗಬಹುದು. ಆಕೆ ಹಾಗೆ ಮಾಡಿದರೆ, ಸಾಂಸಾರಿಕ ಮತ್ತು ತನ್ನದೇ ಇತರ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗದೇ ಹೋಗಬಹುದು. ಹಾಗೆಂದು ಮಹಿಳೆಯರು ಆ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಿಲ್ಲ, ಆದರೆ ಅವರಿಗೆ ಕೆಲವೊಮ್ಮೆ ಅಗತ್ಯವಿರುವ ದೀರ್ಘ ವಿರಾಮಗಳಿಂದ ಕೆಲಸಕ್ಕೆ ತೊಂದರೆಯಾಗಬಹುದು. ಕಾರ್ಖಾನೆಯ ಕೆಲಸಗಳ ಬದಲು ಮಹಿಳೆಯರ ಸೃಜನಶೀಲತೆಯನ್ನು ನಿರ್ಮಾಣ ಕಾರ್ಯದ ಬೇರೆ ಬೇರೆ ಆಯಾಮಗಳಾದ ಡಿಸೈನಿಂಗ್(ವಿನ್ಯಾಸಗಳು), ಅಭಿವೃದ್ಧಿ ಮತ್ತು ಮಾರ್ಕೆಟಿಂಗ್ ವಿಭಾಗದಲ್ಲಿ ಉತ್ತಮವಾಗಿ ಬಳಸಿಕೊಳ್ಳಬಹುದು.

ಮಹಿಳೆಯರು ಮತ್ತು ಲಘು ಅರ್ಥಶಾಸ್ತ್ರ

ನಮ್ಮ ಪ್ರಪಂಚ ಇಂದು ಯಾವ ಘಟ್ಟದಲ್ಲಿದೆಯೆಂದರೆ, ಆರ್ಥಿಕ ಚಟುವಟಿಕೆಯೇ ಅತ್ಯಂತ ಪ್ರಮುಖ ಅಂಶವಾಗಿಬಿಟ್ಟಿದೆ. ಮಾನವ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಇರುವ ಮಹಿಳೆಯರು ಮಾನವ ಚಟುವಟಿಕೆಯ ನಿರಾಯಾಸವಾಗಿ ಸಾಗುವಲ್ಲಿ ಗಣನೀಯ ಪಾತ್ರ ವಹಿಸುವಂತಾಗಬೇಕು. ಮುಂಬರುವ ದಶಕಗಳಲ್ಲಿ ಆರ್ಥಿಕ ನಾಯಕತ್ವ ಬಹಳ ಮಹತ್ವವನ್ನು ಪಡೆಯುತ್ತದೆ. ವ್ಯವಹಾರವಾಗಲೀ ಅಥವಾ ಯಾವುದೇ ಚಟುವಟಿಕೆಯಾಗಲೀ, ಉತ್ತಮ ನಾಯಕತ್ವಕ್ಕೆ ದೂರದೃಷ್ಟಿ ಬಹು ಮುಖ್ಯ.

ನಾಯಕರೆಂದರೆ ಮಿಕ್ಕವರು ಗ್ರಹಿಸಲಾಗದ್ದನ್ನು ಗ್ರಹಿಸುವ ಸಾಮರ್ಥ್ಯವಿರುವವರು. ನೀವು ಹೊಸದಾದುದನ್ನು ನೋಡಲು ಅಸಮರ್ಥರಾದರೆ, ಅಪಹಾಸ್ಯದ ವಸ್ತುವಾಗುತ್ತೀರಿ. ಸಾಮಾನ್ಯವಾಗಿ, ಬೇರೊಬ್ಬರೊಂದಿಗಿನ ದಿನನಿತ್ಯದ ಪಂದ್ಯವು ಗಂಡಸರನ್ನು ತುಂಬಾ ಕಾರ್ಯನಿರತವಾಗಿಸುತ್ತದೆ ಮತ್ತು ಅವರಿಗೆ ಬೇರೆ ಏನನ್ನೂ ನೋಡಲು ಸಾಧ್ಯವಾಗುವುದಿಲ್ಲ. ಆದರೆ ಮಹಿಳೆಯರು ಸಮಾಧಾನವಾಗಿ ಕುಳಿತು ಸನ್ನಿವೇಶವನ್ನು ಅವಲೋಕಿಸುವ ಒಂದು ಸಾಮರ್ಥ್ಯವನ್ನು ತಮ್ಮೊಳಗೆ ಬೆಳೆಸಿಕೊಂಡಿರುತ್ತಾರೆ.



> “ಯಶಸ್ಸು ಎಂದರೆ, ವೈಯಕ್ತಿಕ ಆಕಾಂಕ್ಷೆಗಳಷ್ಟೇ ಆಗಿದೆ. ಇದು ಬಹಳ ಮೂರ್ಖತನದಿಂದ ಕೆಲಸ ಮಾಡುವ ರೀತಿ. ಆಕಾಂಕ್ಷೆಗಳಷ್ಟೇ ಗುರಿಯಾಗಿರದಿದ್ದರೆ, ನಾವು ಯಶಸ್ಸಿನೆಡೆ ಸಾಗಬಹುದು. ನಿಮ್ಮ ಸುತ್ತಲಿರುವ ಎಲ್ಲದರೊಂದಿಗೆ ಕಾಳಜಿಯಿಂದ ಇದ್ದರೆ, ಯಾವುದೇ ಹಿಂಜರಿಕೆಯಿಲ್ಲದೇ–ಸಹಜವಾಗಿಯೇ ನೀವು ಉತ್ತಮವಾದುದನ್ನು ಮಾಡುತ್ತೀರಿ. ಇದು ಮಹಿಳೆಯರ ಕಾರ್ಯ ವೈಖರಿ, ಮತ್ತು ಇಂದಿನ ಪ್ರಪಂಚದಲ್ಲಿ ಕಾರ್ಯನಿರ್ವಹಿಸಲು ಇದೇ ಅತ್ಯುತ್ತಮವಾದ ಮಾರ್ಗ.

ಪ್ರಪಂಚದ ಸೌಖ್ಯಕ್ಕಾಗಿ ಆರ್ಥಿಕ ಚಟುವಟಿಕೆಗಳನ್ನು ನಯವಾಗಿ ದೀರ್ಘಕಾಲ ಸುಸ್ಥಿರವಾಗಿ ನಡೆಸುವಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾಗುತ್ತದೆ. ಇಂದಿನ ಪ್ರಪಂಚದಲ್ಲಿ ಆರ್ಥಿಕ ವಿನ್ಯಾಸ ಹೇಗಿರಬೇಕೆಂದರೆ, ವಾಣಿಜ್ಯವು ಮನುಕುಲದ ಸೇವೆ ಮಾಡಬೇಕೆ ಹೊರತು ಮನುಕುಲವು ವಾಣಿಜ್ಯದ ಅಡಿಯಾಳಾಗಬಾರದು. ಮಾನವೀಯತೆಯನ್ನು ರೂಪಿಸುವಲ್ಲಿ ಯಾವುದೋ ಒಂದು ಲಿಂಗದ ಪಾತ್ರವಷ್ಟೇ ಮುಖ್ಯವಲ್ಲ. ನಾಯಕತ್ವ ಎಂದಾಗ – ವ್ಯವಹಾರವಾಗಲೀ, ರಾಜಕೀಯವಾಗಲೀ ಮಹಿಳೆಯರ ಪಾತ್ರ ಅವಶ್ಯವಾಗಿ ಇರುತ್ತದೆ. ಏಕೆಂದರೆ, ಅವರು ಮನುಕುಲದ ಒಂದು ಕೋಮಲ ಭಾಗ.

ಸ್ತ್ರೀ ಮತ್ತು ಪುರುಷ ಅಂಶಗಳ ಸಮತೋಲನ

ಬಹಳ ಕಾಲದಿಂದ ಮನುಕುಲವು ಪುರುಷ ಅಂಶಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದೆ, ಏಕೆಂದರೆ, ಬದುಕುಳಿಯುವಿಕೆಯೇ ಪ್ರಮುಖವಾಗಿತ್ತು. ನಮ್ಮ ಸಮಾಜವು ಸ್ತ್ರೀ ಅಂಶವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಹಕಾರಿಯಾದಾಗ ಹಾಗೂ ಸಂಸ್ಕೃತಿ ಮತ್ತು ನಾಗರೀಕತೆಯ ಒಂದು ನಿರ್ದಿಷ್ಟ ಹಂತವನ್ನು ತಲುಪಿದಾಗ ಸ್ತ್ರೀ ಅಂಶವು ಒಂದು ಸ್ಥಿರ ಸ್ಥಾನವನ್ನು ಪಡೆಯಲು ಸಾಧ್ಯವಾಗುವುದು. ಮೊದಲೆಲ್ಲಾ ಬದುಕುವುದು ಎಂದರೆ, ಅಂದಿನ ಊಟೋಪಚಾರದ ವ್ಯವಸ್ಥೆಯಾದರೆ ಸಾಕಾಗಿತ್ತು. ಆದರೆ, ಇಂದು ಹಾಗಲ್ಲ, ಐಶಾರಾಮಿ ಕಾರುಗಳು ಬದುಕಿನ ಒಂದು ಅರ್ಥವಾಗಿಬಿಟ್ಟಿದೆ. ನಾವು ಹೀಗೇ ಮುಂದುವರೆದರೆ, ಸ್ತ್ರೀ ಅಂಶಕ್ಕೆ ಸಮಾಜದಲ್ಲಿ ಜಾಗವೇ ಇಲ್ಲದೇ ಹೋಗಬಹುದು. ನಾವು ನಮ್ಮ ಬದುಕಿನ ಪ್ರವೃತ್ತಿಯನ್ನು ಸಡಿಲಗೊಳಿಸಿದರೆ, ಆಗ ಸಹಜವಾಗಿಯೇ ಸ್ತ್ರೀ ಅಂಶವೂ ಪ್ರಮುಖವಾಗುತ್ತದೆ.

ಸ್ತ್ರೀ ಮತ್ತು ಪುರುಷ ಅಂಶಗಳು ಕೇವಲ ಭೌತಿಕವಾಗಿ ಹೆಣ್ಣು–ಗಂಡುಗಳಾಗಿರುವುದಲ್ಲ. ಪುರುಷರಲ್ಲಿಯೂ ಸ್ತ್ರೀಯರಲ್ಲಿರುವಂತೆಯೇ ಸ್ತ್ರೀ ಅಂಶ ಜಾಗ್ರತವಾಗಿರಬಹುದು. ಇವು ಎರಡು ಗುಣಗಳು. ಈ ಎರಡೂ ಗುಣಗಳು ಸಮತೋಲನದಲ್ಲಿದ್ದಾಗ ಮಾತ್ರ ಮನುಷ್ಯನ ಜೀವನವು ಸಂಪೂರ್ಣವಾಗುತ್ತದೆ. ಇದಕ್ಕೆ ಉದಾಹರಣೆಯೆಂದರೆ, ನೀವು ಬೇರನ್ನು ಪುರುಷ ಅಂಶವೆಂದೂ, ಅದರ ಹೂವು ಮತ್ತು ಹಣ್ಣುಗಳನ್ನು ಸ್ತ್ರೀ ಅಂಶವೆಂದೂ ಪರಿಗಣಿಸಿದಾಗ, ಬೇರಿನ ಮುಖ್ಯ ಉದ್ದೇಶವೇ ಹೂವು ಮತ್ತು ಹಣ್ಣುಗಳನ್ನು ಕೊಡುವುದು. ಅದಾಗಲಿಲ್ಲವೆಂದರೆ, ಬೇರು ವ್ಯರ್ಥ. ಬದುಕುಳಿಯುವಿಕೆಯಷ್ಟೇ ಎಲ್ಲವನ್ನೂ ನಿರ್ವಹಿಸುವುದಿಲ್ಲ. ನಮ್ಮ ಉಳಿವಿಕೆಯ ಜೊತೆಗೇ ಬದುಕಿನ ಹಲವು ಸೂಕ್ಷ್ಮ ಅಂಶಗಳೂ ಅನುಭವವಾಗಬೇಕು.

ಆದರೆ, ಈಗ ಯಶಸ್ಸು ಎಂದರೆ, ವೈಯಕ್ತಿಕ ಆಕಾಂಕ್ಷೆಗಳಷ್ಟೇ ಆಗಿದೆ. ಇದು ಬಹಳ ಮೂರ್ಖತನದಿಂದ ಕೆಲಸ ಮಾಡುವ ರೀತಿ. ಆಕಾಂಕ್ಷೆಗಳಷ್ಟೇ ಗುರಿಯಾಗಿರದಿದ್ದರೆ, ನಾವು ಯಶಸ್ಸಿನೆಡೆ ಸಾಗಬಹುದು. ನಿಮ್ಮ ಸುತ್ತಲಿರುವ ಎಲ್ಲದರೊಂದಿಗೆ ಕಾಳಜಿಯಿಂದ ಇದ್ದರೆ, ಯಾವುದೇ ಹಿಂಜರಿಕೆಯಿಲ್ಲದೇ – ಸಹಜವಾಗಿಯೇ ನೀವು ಉತ್ತಮವಾದುದನ್ನು ಮಾಡುತ್ತೀರಿ. ಇದು ಮಹಿಳೆಯರ ಕಾರ್ಯ ವೈಖರಿ, ಮತ್ತು ಇಂದಿನ ಪ್ರಪಂಚದಲ್ಲಿ ಕಾರ್ಯ ನಿರ್ವಹಿಸಲು ಇದೇ ಅತ್ಯುತ್ತಮವಾದ ಮಾರ್ಗ.

ಪುರುಷ ಅಂಶದ ರೀತಿ ಎಂದರೆ, ಇಲ್ಲಿ, ಈಗ ಇರುವುದಕ್ಕೆ ಗಮನ ಕೊಡದೆ, ಎಲ್ಲೋ ಹೋಗುವುದು. ಸ್ತ್ರೀ ಅಂಶವು ಎಲ್ಲೂ ಹೋಗಲು ಪ್ರಯತ್ನಿಸುವುದಿಲ್ಲ. ಎಲ್ಲಿರುತ್ತದೋ ಅಲ್ಲೇ ಸಂತಸದಿಂದಿರುತ್ತದೆ. ಈ ಎರಡೂ ಗುಣಗಳೂ ಸಮತೋಲನದಲ್ಲಿದ್ದರೆ, ನಾವು ಎಲ್ಲೋ ತಲುಪುತ್ತೇವೆ, ಆದರೆ ಈಗಿರುವುದನ್ನೂ ಆನಂದಿಸುತ್ತೇವೆ. ಇಂದಿನ ಪ್ರಪಂಚದಲ್ಲಿ ಆಗಬೇಕಿರುವುದು ಇದೇ.

ಬುಡಸಮೇತ ಉರುಳಿದ ಮರ; ಅದೃಷ್ಟವಶಾತ್ ಯಾವ ಅಪಾಯವಿಲ್ಲ

ನೆಲ್ಸನ್ ಮಂಡೇಲಾ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಕಾರಣ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತ



ರಸ್ತೆಗೆ ಉರುಳಿ ಬಿದ್ದಿರುವ ರೈನ್‌ಟ್ರೀ(ಛತ್ರಿ) ಮರ.



ಮರದ ಬೇರಿಗೆ ಹಾನಿಯಾಗಿರುವುದು

ಮೈಸೂರು, ಮಾ.12(ವಿವಿಹೆಚ್)– ಮರವೊಂದು ಬುಡಸಮೇತ ನೆಲಕ್ಕುರುಳಿದ ಪರಿಣಾಮ ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ಗುರುವಾರ ಸಂಜೆ ವಾಹನ ಸಂಚಾರ ಕೆಲ ಕಾಲ ಅಸ್ತವ್ಯಸ್ತವಾಯಿತು. ಆದರೆ, ಘಟನೆಯಿಂದ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.


ಸಂಜೆ ಸುಮಾರು 7.30ರಲ್ಲಿ ಕೆಎಸ್ಆರ್‌ಟಿಸಿ ಬಸ್ ಡಿಪೋ ಮುಖ್ಯದ್ವಾರದ ಮುಂಭಾಗದಲ್ಲಿ ದಶಕಗಳಷ್ಟು ಹಳೆಯ ರೈನ್‌ಟ್ರೀ (ಛತ್ರಿ) ಮರ ನೆಲಕ್ಕುರುಳಿದೆ. ಮರದ ಬೇರಿಗೆ ಹಾನಿ ಮಾಡಿದ್ದೆ ಘಟನೆಗೆ ಕಾರಣ ಎಂಬ ದೂರು ಕೇಳಿ ಬಂದಿದೆ.

ರಸ್ತೆಗೆ ಅಡ್ಡಲಾಗಿ ಉರುಳಿ ಬಿದ್ದಿದ್ದ ಕಾರಣ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತವಾಯಿತು. ಮರ ಬಿದ್ದ ರಭಸಕ್ಕೆ ಸಮೀಪದಲ್ಲಿದ್ದ ವಿದ್ಯುತ್ ಕಂಬಕ್ಕೂ ಹಾನಿಯಾಗಿದೆ. ಜೊತೆಗೆ ಕಾರೊಂದರ ಬ್ಯಾನೆಟ್‌ಗೆ ಹಾನಿಯುಂಟಾಗಿದೆ.

ಭಾರೀ ಗಾತ್ರದ ಮರವಾದ ಕಾರಣ ತೆರವುಗೊಳಿಸುವರೆಗೂ ರಸ್ತೆ ಸಂಪೂರ್ಣ ಬಂದ್ ಆಗಿತ್ತು. ಕೆಲ ವಾಹನಗಳು ಸ್ಥಳದಲ್ಲೇ ನಿಂತರೆ, ಮತ್ತೆ ಕೆಲವು ಪರ್ಯಾಯ ಮಾರ್ಗಗಳಲ್ಲಿ ಸಾಗುತ್ತಿದ್ದವು. ಸ್ಥಳಕ್ಕಾಗಮಿಸಿದ ನರಸಿಂಹರಾಜ ಸಂಚಾರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸಿದ್ದೇಶ್ ಮತ್ತು ಸಿಬ್ಬಂದಿಗಳಾದ ಹೆಡ್ ಕಾನ್ಸ್‌ಟೇಬಲ್ ಸೈಯದ್ ಇಮ್ರಾನ್, ಮುನಾವರ್ ಅಹ್ಮದ್, ನಾಗೇಶ್, ಮಹದೇವಪ್ಪ ಸಂಚಾರ ಸಮಸ್ಯೆ ನಿವಾರಿಸಿದರು. ಮತ್ತೊಂದೆಡೆ ಪಾಲಿಕೆಯ ಅಭಯ–2 ತಂಡವು ತ್ವರಿತವಾಗಿ ಮರ ತೆರವುಗೊಳಿಸಿತು. ನೀರು ಸರಬರಾಜು ಸಂಬಂಧ ಕೆಎಸ್‌ಆರ್‌ಟಿಸಿ ಡಿಪೋ ಮುಂಭಾಗದ ಫುಟ್‌ಪಾತ್‌ನಲ್ಲಿ ಗುಂಡಿ ತೆಗೆಯುವಾಗ ಪೈಪ್ ಅಳವಡಿಕೆಗೆ ಅಡ್ಡಿಯಾಗುತ್ತಿದೆ ಎಂದು ಮರದ ಬೇರಿಗೆ ಹಾನಿಯುಂಟು ಮಾಡಿದ್ದೇ ಮರ ನೆಲಕ್ಕುರುಳಲು ಕಾರಣ ಎಂಬ ದೂರು ಕೇಳಿ ಬಂದಿದೆ. ಬೇರುಗಳನ್ನು ಕತ್ತರಿಸಿದ ಪರಿಣಾಮ ಹಾಗೂ ಕಡಿದಾದ ಗುಂಡಿ ತೆಗೆದ ಹಿನ್ನೆಲೆಯಲ್ಲಿ ಮಣ್ಣು ಸಡಿಲವಾಗಿ ಮರ ನೆಲಕ್ಕುರಳಿದೆ ಎಂದು ಸಾಮಾಜಿಕ ಕಳಕಳಿಯುಳ್ಳ ನಾಗರಿಕರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ. ಯಾರಿಗೂ ಪ್ರಾಣಾಪಾಯವಾಗದೇ ಇರುವುದೇ ಅಚ್ಚರಿ ಸಂಗತಿ. ಅದರ ಪಕ್ಕದಲ್ಲಿಯೇ ಟ್ರಾನ್ಸ್‌ಫಾರ್ಮರ್ ಕೂಡ ಇದ್ದು, ಮರ ಅದರ ಮೇಲೆ ಬಿದ್ದಿದ್ದರೆ ಭಾರೀ ಅನಾಹುತ ಸಂಭವಿಸುತ್ತಿತ್ತು ಎಂದು ಆತಂಕ ವ್ಯಕ್ತಪಡಿಸಿದರು.

ಇನ್ನಾದರೂ ಪಾಲಿಕೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಂಡು ಇಂತಹ ಕೆಲಸಗಳಿಗೆ ಕೈ ಹಾಕಬೇಕು. ಆ ಮೂಲಕ ಮರಗಳ ರಕ್ಷಣೆಗೆ ಮುಂದಾಗಬೇಕು ಎಂದು ಅವರು ಆಗ್ರಹಿಸಿದರು.

ಹಂಚ್ಯಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೋಗಿ ಸಿದ್ದಯ್ಯ, ಉಪಾಧ್ಯಕ್ಷರಾಗಿ ಕಮಲಮ್ಮ ಆಯ್ಕೆ



ಹಂಚ್ಯಾ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಪದಾಧಿಕಾರಿಗಳನ್ನು ಅಭಿನಂದಿಲಾಯಿತು.

ಮೈಸೂರು,ಮಾ.12–ಮೈಸೂರು ತಾಲೂಕಿನ ಹಂಚ್ಯಾ ಕೃಷಿ ಪತ್ತಿನ ಸಹಕಾರ ಸಂಘದ ಪದಾಧಿಕಾರಿಗಳು ಆಯ್ಕೆಗೊಂಡಿದ್ದು, ಕಾಂಗ್ರೆಸ್ ಬೆಂಬಲಿತ ಜೋಗಿಸಿದ್ದಯ್ಯ ನೂತನ ಅಧ್ಯಕ್ಷರಾಗಿ ನೇಮಕಗೊಂಡರು.

ಸೊಸೈಟಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 6 ಮಂದಿ ಹಾಗೂ ಜೆಡಿಎಸ್ ಬೆಂಬಲಿತ 5 ಮಂದಿ ಆಯ್ಕೆಯಾಗಿದ್ದರು. ಈ ಹಿನ್ನೆಲೆಯಲ್ಲಿ ಇಂದು ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಜೋಗಿಸಿದ್ದಯ್ಯ 2ನೇ ಅವಧಿಗೆ ಮತ್ತೊಮ್ಮೆ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾದರು. ಉಪಾಧ್ಯಕ್ಷೆಯಾಗಿ ಕಮಲಮ್ಮ ಆಯ್ಕೆಯಾದರು.

ಕಾಂಗ್ರೆಸ್ ಬೆಂಬಲಿತ ನಿರ್ದೇಶಕರಾದ ಕಾಳೇಗೌಡ, ಯೋಗೇಶ್, ಶಂಕರಪ್ಪ, ನಿಂಗಮ್ಮ ನೂತನ ಅಧ್ಯಕ್ಷರ ಅಭಿನಂದಿಸಿದರು. ಜೆಡಿಎಸ್ ಬೆಂಬಲಿತ ನಿರ್ದೇಶಕರಾಗಿ ಬೋರೇಗೌಡ, ತಮ್ಮೇಗೌಡ, ಕುಮಾರ್(ಗಳಿಗರಹುಂಡಿ), ವೆಂಕಟಶೆಟ್ಟಿ, ಮಹದೇವಪ್ಪ ನಿರ್ದೇಶಕರು ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸೊಸೈಟಿ ಮೇಲ್ವಿಚಾರಕ ಗಿರೀಶ್, ಕಾಂಗ್ರೆಸ್ ಮುಖಂಡ ಕೆ.ಎಸ್.ಸಣ್ಣಸ್ವಾಮಿ, ಹಂಚ್ಯಾ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಹೆಚ್.ಎಸ್.ರಾಮಚಂದ್ರ, ಮಾಜಿ ಸದಸ್ಯರಾದ ಬಸವರಾಜು, ಗ್ರಾಮದ ಮುಖಂಡರಾದ ಶ್ರೀನಿವಾಸ್‌ಗೌಡ, ಹಂಚ್ಯಾ ಪಿಎಸ್ ಸಿಸಿಎಸ್ ಮಾಜಿ ಅಧ್ಯಕ್ಷ ಕುಮಾರ್, ಹಂಚ್ಯಾ ಗ್ರಾಮದ ಹಾಲಿನ ಡೇರಿ ಅಧ್ಯಕ್ಷ ನಾಗೇಂದ್ರಮೂರ್ತಿ, ಮುಖಂಡರಾದ ಗಳಿಗರಹುಂಡಿ ಸುರೇಶ್, ಸಾತಗಳ್ಳಿ ಪರಮೇಶ್, ಮೇಷ್ಟ್ರು ನಂಜಪ್ಪ, ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿ ಶ್ರೀನಿವಾಸ್ ಗೌಡ, ಕೆಂಪೇಗೌಡ ಯುವಶಕ್ತಿವೇದಿಕೆ ರಾಜ್ಯ ಉಪಾಧ್ಯಕ್ಷ ಎಚ್.ಎಸ್. ಸ್ವಾಮಿಗೌಡ, ಶಿವಮಾಧು, ತಿಮ್ಮೇಗೌಡ, ನಾಗರಾಜ್, ದೇವರಾಜೇಗೌಡ, ಅರಸೇಗೌಡ, ಡೈರಿ ಸಣ್ಣೇಗೌಡ, ರೆಹಮಾನ್, ಎಚ್.ಪಿ.ಲಕ್ಷ್ಮಿ ನಾರಾಯಣಚಾರ್, ಹೆಚ್.ಬಿ.ಬೋರಯ್ಯ, ಹೇಮಂತ್‌ಕುಮಾರ್, ಮಂಜು ಸಾತಗಳ್ಳಿ, ರಮ್ಮನಹಳ್ಳಿ ಶಿವು, ನಾಡನಹಳ್ಳಿ ಚೇತನ್, ಕ್ಯಾತಮಾರನಹಳ್ಳಿ ಯೋಗೇಶ್, ಗುರುರಾಜು, ವೈರುಮುಡಿ, ನಿಂಗರಾಜು, ಪ್ರಸನ್ನ, ಚೇತನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪಿಎಚ್.ಡಿ ಪದವಿ



ಮೈಸೂರು,ಮಾ.12– ಡಾ.ಎನ್. ರಾಜೇಂದ್ರ ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಸುಮತಿ ಹೆಚ್.ಪಿ ಅವರು ರಸಾಯನ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ. ಸುಮತಿ ಹೆಚ್.ಪಿ ಅವರು ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ, ಕರ್ನಾಟಕ ಗ್ರಾಮೀಣ ಬ್ಯಾಂಕಿನ ನಿವೃತ್ತ ಹಿರಿಯ ವ್ಯವಸ್ಥಾಪಕರಾದ ಹೆಚ್.ಎಲ್.ಪರಮೇಶ್ ಅವರ ಪುತ್ರಿ.

ನಾಳೆ ಸಂಸಾರ ಬಂಧನ ನಾಟಕ ಪ್ರದರ್ಶನ

ಮೈಸೂರು, ಮಾ.12– ಸುತ್ತೂರಿನ ಶ್ರೀ ಮಾಳಿಗೇಶ್ವರಿ ಅಮ್ಮನವರ ಹಬ್ಬದ ಪ್ರಯುಕ್ತ ಶ್ರೀ ವಾಲ್ಮೀಕಿ ಕಲಾ ಸಂಘದ ವತಿಯಿಂದ ಮಾರ್ಚ್ 14ರಂದು ಶನಿವಾರ ರಾತ್ರಿ 9 ಗಂಟೆಗೆ ಕನಸು ರಮೇಶ್ ವಿರಚಿತ ಸಂಸಾರ ಬಂಧನ ಎಂಬ ಸಾಮಾಜಿಕ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾಳೆ ಯೋಧರ ತಾಯಿ, ಮಡದಿಗೆ ಸನ್ಮಾನ

ಮೈಸೂರು, ಮಾ.12(ಜಿಎ)– ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ ವತಿಯಿಂದ ಮಾ.14ರಂದು ಬೆಳಗ್ಗೆ 11.30ಕ್ಕೆ ಪುರಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಯೋಧರ ತಾಯಂದಿರು, ಮಡದಿಯರನ್ನು ಅಭಿನಂದಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲಾ ಈ ವಿಷಯ ತಿಳಿಸಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಕಾರ್ಯಕ್ರಮ ಉದ್ಘಾಟಿಸುವರು. ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಹರೀಶ್‌ಗೌಡ, ತನ್ವೀರ್‌ಸೇಠ್, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜೇಶ್, ಎಂ.ಪುಟ್ಟರಾಜು, ಅಮೀನ ಬೇಗಂ, ವೈ.ಬಿ.ಈಶ್ವರ್, ಪರಮೇಶ್, ಎನ್.ಕೆ.ಸುದರ್ಶನ್, ಹೆಚ್.ಟಿ. ಪಾರ್ವತಿ ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಅನಿತ .ಹೆಚ್ ಅವರು ಡಾ.ಷಣ್ಮುಖ ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಗಣಿತ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಆಡಿ, ಕಲಿತ ಶಾಲೆಯ ಅಂಗಳದಲ್ಲಿ 80ರ ಹರೆಯದ ಐವರು ಗೆಳೆಯರು!

ಒಂದು ಅವಿಸ್ಮರಣೀಯ ಕ್ಷಣಕ್ಕೆ ಸಾಕ್ಷಿಯಾಯ್ತು ಬನುಮಯ್ಯ ಪ್ರೌಢಶಾಲೆ



ಮೈಸೂರಿನ ಪ್ರತಿಷ್ಠಿತ ಡಿ.ಬನುಮಯ್ಯ ಪ್ರೌಢಶಾಲೆಗೆ ಭೇಟಿ ನೀಡಿದ್ದ ಹಳೆಯ ವಿದ್ಯಾರ್ಥಿಗಳಾದ ಎಸ್.ಜಯರಾಂ, ಎನ್.ಪ್ರಸನ್ನಕುಮಾರ್, ಗೌರಿಸತ್ಯ, ಆರ್.ಗುರು, ಸ್ಯಾಮ್‌ಸನ್ ಜಯಂತ್ ಸಾಧು ಅವರು ಶಾಲೆಯ ಧರ್ಮದರ್ಶಿ ಮಂಡಳಿಯ ಅಧ್ಯಕ್ಷ ಡಾ.ವಿ.ಬಿ.ಜಯದೇವ್ (ಎಡದಿಂದ ಮೂರನೆಯವರು) ಅವರೊಂದಿಗೆ ಶಾಲೆಯ ಎದುರು ಫೋಟೋ ತೆಗೆಸಿಕೊಂಡರು.

ಮೈಸೂರು, ಮಾ.12– ವಯಸ್ಸು ಎಂಬತ್ತು ದಾಟಿದ ಐವರು ಗೆಳೆಯರು, ತಾವು ಕಲಿತ ಶಾಲೆಗೆ ಭೇಟಿ ನೀಡಿ ಕೆಲಕಾಲ ಎಳೆಯರಾದರು.

ಮೈಸೂರಿನ ಪ್ರತಿಷ್ಠಿತ ವಿದ್ಯಾಸಂಸ್ಥೆ ಬನುಮಯ್ಯ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳಾದ ಕೈಗಾರಿಕೋದ್ಯಮಿ ಎನ್.ರಂಗರಾವ್ ಸನ್ಸ್‌ನ ಆರ್.ಗುರು, ಎಸ್‌ಡಿಎಂ ವಿದ್ಯಾಸಂಸ್ಥೆಗಳ ಆಡಳಿತಾಧಿಕಾರಿ ಎನ್.ಪ್ರಸನ್ನಕುಮಾರ್, ಸರಸ್ವತಿ ಟೈಪ್‌ರೈಟಿಂಗ್ ಶಾಲೆಯ ಮಾಜಿ ಪ್ರಿನ್ಸಿಪಾಲ್ ಎಸ್.ಜಯರಾಂ, ಇದೇ ಶಾಲೆಯಲ್ಲಿ ಬೋಧಕರಾಗಿದ್ದ ಸ್ಯಾಮ್‌ಸನ್ ಜಯಂತ್ ಸಾಧು ಮತ್ತು ಹಿರಿಯ ಪತ್ರಕರ್ತ ಗೌರಿಸತ್ಯ ಆರೇಳು ದಶಕಗಳ ಹಿಂದಿನ ವಿದ್ಯಾರ್ಥಿ ಜೀವನಕ್ಕೆ ಮರಳಿ ಸಂತಸಪಟ್ಟರು.

ಈ ಐವರು ಗೆಳೆಯರ ಬಳಗವನ್ನು ಶಾಲೆಯ ಈಗಿನ ಪ್ರಾಂಶುಪಾಲರಾದ ಪ್ರೊ.ಬಸವರಾಜ್ ಹಾಗೂ ಪ್ರಾಧ್ಯಾಪಕ ಕೃಪಾಶಂಕರ್ ಆತ್ಮೀಯವಾಗಿ ಬರಮಾಡಿಕೊಂಡರು. ಶಾಲೆಯ ಧರ್ಮದರ್ಶಿ ಮಂಡಳಿಯ ಅಧ್ಯಕ್ಷ ಡಾ.ವಿ.ಬಿ.ಜಯದೇವ್ ಅವರು ಹಿರಿಯ ವಿದ್ಯಾರ್ಥಿಗಳ ಅಪರೂಪದ ಭೇಟಿಯಿಂದ ಹರ್ಷಿತರಾಗಿ, ಅವರನ್ನು ಅಭಿನಂದಿಸಿದರು.

ತಮ್ಮದೇ ಆದ ವೃತ್ತಿ–ಪ್ರವೃತ್ತಿಯಲ್ಲಿ ಸಾಧನೆ ಮಾಡಿರುವ ಈ ಐವರು ಗೆಳಯರು 65 ವರ್ಷಗಳ ಹಿಂದೆ ಕಳೆದ ಅವಿಸ್ಮರಣೀಯ ಕ್ಷಣಗಳನ್ನು ಪರಸ್ಪರ ಹಂಚಿಕೊಂಡರು. ತಾವು ಪಾಠ ಕೇಳುತ್ತಿದ್ದ ತರಗತಿ ಕೊಠಡಿಗಳು, ಗ್ರಂಥಾಲಯ, ಸುಂದರ ಸಭಾಂಗಣವನ್ನು ಕಣ್ತುಂಬಿಕೊಂಡರು ಖುಷಿಪಟ್ಟರು. ಅಂದಿನ ಸಹಜ ಬಾಲಚೇಷ್ಟೆ, ತುಂಟಾಟ, ಆಟೋಟ, ಪುಸ್ತಕಗಳನ್ನು ಎರವಲು ಪಡೆಯುವುದು ಸೇರಿದಂತೆ ಪ್ರತಿಯೊಂದು ಕ್ಷಣಗಳನ್ನೂ ಸ್ಮರಿಸಿಕೊಂಡು ಮತ್ತೆ ಎಳೆಯರಾದರು.

ಸಭಾಂಗಣದಲ್ಲಿ ಇಂದಿಗೂ ವಿರಾಜಮಾನವಾಗಿ ಕಂಗೊಳಿಸುತ್ತಿರುವ ಶಾಲೆಯ ಸಂಸ್ಥಾಪಕರಾದ ಡಿ.ಬನುಮಯ್ಯನವರ ತೈಲ ಚಿತ್ರವನ್ನು ಕಂಡು ಕೈಮುಗಿದರು. ತಾವು ಓದುವಾಗ ಪ್ರಿನ್ಸಿಪಾಲ್ ಆಗಿದ್ದ ಬಿ.ವಿ.ಬನುಮಯ್ಯ ಮತ್ತು ವೈಸ್ ಪ್ರಿನ್ಸಿಪಾಲ್ ಆಗಿದ್ದ ಖ್ಯಾತ ಅಂಕಣಕಾರ ಮತ್ತು ಲೇಖಕ ಹೆಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್(ಹೆಚ್‌ಎಸ್ಕೆ) ಅವರ ಭಾವಚಿತ್ರಗಳನ್ನು ಕಂಡು ಅವರನ್ನು ಭೇಟಿಯಾಗಿದ್ದ ಕ್ಷಣಗಳನ್ನು ನೆನೆದರು.

ಶಾಲೆಯ ಸಂಸ್ಥಾಪಕ ಡಿ.ಬನುಮಯ್ಯನವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಹಿನ್ನೆಲೆಯಲ್ಲಿ ಶಾಲೆಗೆ ಮಹಾತ್ಮ ಗಾಂಧೀಜಿ ಅವರು ಭೇಟಿ ನೀಡಿ, ಭಾಷಣ ಮಾಡಿದ್ದ ಐತಿಹಾಸಿಕ ಘಟನೆಯ ಚಿತ್ರವನ್ನು ಈ ಐವರು ಗೆಳೆಯರು ಕುತೂಹಲದಿಂದ ವೀಕ್ಷಿಸಿದರು. ಹಾಗೆಯೇ ತಮ್ಮ ಶಾಲಾದಿನಗಳ ಹಳೆಯ ಛಾಯಾಚಿತ್ರಗಳನ್ನು ನೋಡಿ, ಗುರುಗಳು ಹಾಗೂ ಸಹಪಾಠಿಗಳನ್ನು ಗುರುತಿಸಿ ಸಂತಸಗೊಂಡರು. ಶಾಲಾ–ಕಾಲೇಜು ದಿನಗಳು, ಜೀವನಯಾನದ ಸಂಪುಟದಲ್ಲಿ ಅಳಿಸಲಾಗದ ಪುಟಗಳು. ಓದಿನ ನಂತರ ವಿಭಿನ್ನ ಕ್ಷೇತ್ರದಲ್ಲಿ ಪಯಣಿಸಿದರೂ ವಿದ್ಯಾರ್ಥಿ ಜೀವನದ ನೆನಪು ಸದಾ ಹಸಿರಾಗಿರುತ್ತದೆ. ಒಂದಿಲ್ಲೊಂದು ಸಂದರ್ಭದಲ್ಲಿ ಸಹಜವಾಗಿ ಮೆಲುಕು ಹಾಕುತ್ತಿರುತ್ತೇವೆ. ಹೀಗೆ ತಮ್ಮ ಸಾಧನೆಯ ಬದುಕಿಗೆ ಗಟ್ಟಿ ಅಡಿಪಾಯ ಹಾಕಿಕೊಟ್ಟ ಶಾಲೆಗೆ ಈ ಐವರು ಮಹನೀಯರು ಒಟ್ಟಿಗೆ ಭೇಟಿ ನೀಡಿ, ಹಳೆಯ ನೆನಪುಗಳ ಮೆಲುಕು ಹಾಕಿದ್ದು ಅನುಕರಣೀಯ.

ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬದ ಪ್ರಯುಕ್ತ ನಡೆದ ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ



ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬದ ಪ್ರಯುಕ್ತ ಶ್ರೀಮತಿ ಸರಸ್ವತಿ ಶಿವಣ್ಣನವರ ಸ್ಮರಣಾರ್ಥ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಮಾ.12– ಗ್ರಾಮ ದೇವತೆ ಹಬ್ಬಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಚಲನಚಿತ್ರ ನಟ ಎಸ್.ಜಯಪ್ರಕಾಶ್(ಜೆಪಿ) ಅವರಿಗೆ ಮತ್ತಷ್ಟು ಯಶಸ್ಸು ದೊರಕಲಿ ಎಂದು ಚಲನಚಿತ್ರ ಸಹ ಕಲಾವಿದರ ಸಂಘದ ಅಧ್ಯಕ್ಷ ಪಾಲಹಳ್ಳಿ ರಾಮಕೃಷ್ಣ ಹಾರೈಸಿದರು.

ನಗರದ ಒಂಟಿಕೊಪ್ಪಲು ಗ್ರಾಮದೇವತೆ ಹಬ್ಬದ ಪ್ರಯುಕ್ತ ಶ್ರೀಮತಿ ಸರಸ್ವತಿ ಶಿವಣ್ಣನವರ ಸ್ಮರಣಾರ್ಥ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಕ್ತರ ಜೊತೆಗೂಡಿ ಗ್ರಾಮ ದೇವತೆ ಹಬ್ಬದ ಯಶಸ್ಸಿಗೆ ಸಹಕರಿಸಿದ ಜೆಪಿ ಅವರಿಗೆ ಶುಭವಾಗಲಿ ಎಂದರು.

ಬಿಜೆಪಿ ನಗರಾಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಪ್ರತಿವರ್ಷ ಜೆಪಿ ತಮ್ಮ ತಾಯಿಯ ಹೆಸರಲ್ಲಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸುತ್ತಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಎಸ್.ಜಯಪ್ರಕಾಶ್(ಜೆಪಿ) ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದರು. ಯುವ ಮುಖಂಡ ಮದನ್ ಮಾದೇಶ್, ನಿರ್ಮಾಪಕ ಚೇತನ್ ರಮೇಶ್ ಮತ್ತಿತರರು ಉಪಸ್ಥಿತರಿದ್ದರು. ಬಳಿಕ ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು.



ಆತ್ಮಸ್ಥೈರ್ಯ ತುಂಬಿದ ಮಾಜಿ ಸಚಿವ ಸಾರಾ

ಅಧಿಕಾರಿಗಳು ತನ್ನ ಜಮೀನಿನ ಖಾತೆ ಮಾಡಲು ಸತಾಯಿಸುತ್ತಿದ್ದ ಕಾರಣದಿಂದಾಗಿ ತೀವ್ರ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿ, ಅಸ್ವಸ್ಥರಾಗಿ ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಾಲಿಗ್ರಾಮ ತಾಲೂಕು, ಚಿಕ್ಕನಾಯಕನಹಳ್ಳಿ ಗ್ರಾಮದ ಬಡ ರೈತ ರಂಗೇಗೌಡ ಅವರನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಗುರುವಾರ ಭೇಟಿಯಾಗಿ ಅವರ ಆರೋಗ್ಯ ವಿಚಾರಿಸಿ, ಅವರಲ್ಲಿ ಆತ್ಮ ವಿಶ್ವಾಸವನ್ನು ತುಂಬಿದರು.

ಮುಖ್ಯಮಂತ್ರಿ ಆರೋಗ್ಯವಾಗಿದ್ದಾರೆ! ಆರೋಗ್ಯ ಇಲಾಖೆ ಅನಾರೋಗ್ಯಕ್ಕೀಡಾಗಿದೆ!!

ಸರ್ಕಾರಿ ಆಸ್ಪತ್ರೆಗಳ ಅವ್ಯವಸ್ಥೆ ಬಗ್ಗೆ ವಿಪಕ್ಷ ನಾಯಕ ಆರ್. ಅಶೋಕ್ ವ್ಯಂಗ್ಯ




ಬೆಂಗಳೂರು, ಮಾ.12(ಕೆಎಂಶಿ)– ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಔಷಧಿಯ ಕೊರತೆ, ಆಂಬುಲೆನ್ಸ್‌ಗಳ ಸೇವೆಯ ವ್ಯತ್ಯಯಗಳಿಂದ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಿಧಾನಸಭೆಯಲ್ಲಿಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ನಿಲುವಳಿ ಸೂಚನೆಯ ಅಡಿ ಪೂರ್ವಭಾವಿ ಪ್ರಸ್ತಾಪ ಮಾಡಿದ ಅವರು, ಮುಖ್ಯಮಂತ್ರಿ ಆರೋಗ್ಯವಾಗಿದ್ದಾರೆ, ಆದರೆ ಆರೋಗ್ಯ ಇಲಾಖೆ ಅನಾರೋಗ್ಯ ಕ್ಕೀಡಾಗಿದೆ ಎಂದು ಕಿಡಿಕಾರಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸಿಗುತ್ತಿಲ್ಲ, ವೈದ್ಯರ ಕೊರತೆ ಇದೆ. ಇದನ್ನು ವೈದ್ಯಕೀಯ ಸಂಘದ ಪದಾಧಿ ಕಾರಿಗಳೇ ಬಹಿರಂಗವಾಗಿ ಹೇಳಿದ್ದಾರೆ. ಔಷಧಿ ದೊರೆಯದೆ ಇರುವುದರಿಂದ ವೈದ್ಯ ಕೀಯ ಸಿಬ್ಬಂದಿ ಮೇಲೆ ಒತ್ತಡ ಹೆಚ್ಚಾಗುತ್ತಿದೆ. ರೋಗಿಗಳು ಮತ್ತು ಸಿಬ್ಬಂದಿ ಗಳ ನಡುವೆ ಸಂಘರ್ಷಗಳಾಗುತ್ತಿವೆ. 210 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚಲು ಸರ್ಕಾರ ತಯಾರಿ ನಡೆಸಿದೆ ಎಂದು ಹೇಳಿದರು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮಾನ್ ರಂಗಯ್ಯ ಅವರು

ದಿನಾಂಕ: 03–03–2026 ರಂದು ದೈವಾಧೀನರಾಗಿದ್ದು, ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 13–03–2026 ರಂದು ಜಿ.ಮಾರಹಳ್ಳಿಯಲ್ಲಿ ಏರ್ಪಡಿಸಲಾಗಿದೆ. – ಕುಟುಂಬವರ್ಗ

ರಾತ್ರಿ 9 ಗಂಟೆಗೆ ಮೈಸೂರು ಗುರುರಾಜ್ ತಂಡದಿಂದ ಕಥಾ ಕಾರ್ಯಕ್ರಮವಿರುತ್ತದೆ.

PUBLIC NOTICE

Notice is hereby given that my client has agreed to purchase the below mentioned property from (1) Smt. Uma Rani Grover, wife of Late Rakesh Grover, (2) Smt. Divya Lalit Kumar Duggal, daughter of Late Rakesh Grover and wife of Sri. Lalit Kumar Duggal and (3) Sri. Sidharth Grover, son of Late Rakesh Grover [No. (2) and (3) are represented by their registered Power of Attorney Holder and Mother Smt. Uma Rani Grover] and any person or persons claiming any interest on the below mentioned property or any part thereof, is hereby required to communicate the same to me, with documentary evidence at my Office, situated at No.1063/71A, F-3A, 2nd Main, 8th Cross, Vidyaranyapuram, Mysore-570 008, within 10 (Ten) days from the date of this publication, failing which my client shall proceed with the sale transaction, without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

All the piece and parcel of a residential Property bearing No.1774, formed in the layout known as "Garudachar Layout", situated at Hinkal Village, Kasaba Hobli, Mysuru Taluk, within the jurisdiction of Hootagalli Municipal Council bearing Property No. 6823928230, Old No. Site No.1774, Ward No.2 and having 1.50 Square Meters of built area. Bounded on :- East By : Private Property, West By : House No.1532-1, North By : Road, South By : Property No.66 and 67, SITE MEASUREMENT: East-West: 15.24 Meters North-South: 24.384 Meters. Totally Measuring: 371.61 Square Meters

Sd/- Sri Laxmi .Y.S
Date: 12.03.2026, Place : Mysore

PUBLIC NOTICE

Public at large are hereby notified that my Clients are intending to purchase the residential site property which is more fully described in the schedule below from its owners Smt. P. Shree Priya and Smt. S. Rashmi. If any person/s have any right/s, title, interest, claim/s or objection/s in respect of the same, they may submit the same in writing with supporting documents with the undersigned at the address mentioned below within SEVEN DAYS from the date of this notification, failing which, my Clients shall deem that there are no claims or objections regarding the same and shall proceed with the said transaction. Any claims or objections received after the stipulated time shall be considered non est.

Schedule of Property:

All the piece and parcel of the residential site bearing No. 19 (Corner Site) in M. S. Ramaiah Royal City, formed in Sy Nos. 1/2, 3/1, 3/2, 3/3, 3/4, 6, 7, 8, 9, 20/1, 21 & 23 of Madagalli, Elavala Hobli, Mysuru admeasuring and bounded as follows:

Measurements: East to West : 24 Meters, North to South : (15.00+15.82)/2 Meters

Totally measuring : 369.84 Sq Meters/3979 Sq. Feet

Boundaries: East by: Site No.25, **West By :** Road, **North By:** Site No.18, **South by:** Road.

Date : 13-03-2026
Place : Mysore

Rohit Subbayya BAL., LL.B
Advocate
No.1230/A, CH 36, 2nd Cross, Krishnamurthypuram, Chamaraja Mohalla, Mysuru - 570004. Mob: 9480004999

ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, –570026, ಚಾಮರಾಜ ಮೊಹಲ್ಲಾ, ಬೋಗಾದಿ, ನ್ಯಾಯಾಂಗ ಬಡಾವಣೆ ಕ್ರೈಸ್ತ ಪಬ್ಲಿಕ್ ಸ್ಕೂಲ್ ಹತ್ತಿರ ಹೊನ್ನೆಮರ ರಸ್ತೆ, ಮನೆ ನಂ. 527 ರಲ್ಲಿ ವಾಸವಾಗಿರುವ ಲೇಟ್ ಸ್ವಾಮಿ ರವರ ಮಗನಾದ ಸುಮಾರು 34 ವರ್ಷ ವಯಸ್ಸಿನ ಶ್ರೀ ಮಹೇಶ(ಆಧಾರ್ ನಂ. 6885 9125 8805) ಆದ ನಾನು, ಮೈಸೂರು ಸಿಟಿ, ಬೆಳವಾಡಿ ಅಂಚೆ, ಹೂಟಗಳ್ಳಿ ಆಂಜನೇಯ ದೇವಸ್ಥಾನದ ಹತ್ತಿರ ಹೊನ್ನೇಗೌಡ ಬ್ಲಾಕ್ ಮನೆ ನಂ. 15 ರಲ್ಲಿ ವಾಸವಾಗಿರುವ ಲೇಟ್ ಬೋರಯ್ಯ ರವರ ಮಗನಾದ ಸುಮಾರು 43 ವರ್ಷ ವಯಸ್ಸಿನ ಶ್ರೀ ಸಿದ್ದರಾಜು ಬಿ ರವರಿಂದ ನಾನು ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಿದ್ದೇನೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೇರ್ಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 17/1, 17/2, 5/1, 15, 16/1, 18/1, 18/2, 19, 20, 21 22/2, 22/3, 22/4, 23/1, 23/2, 23/3, 24, 26/1 ಹಾಗೂ 3 ರ ಒಟ್ಟು 45 ಎಕರೆ 25 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ) ಮೈಸೂರು ರವರು ನಿರ್ಮಿಸಿ ಅಭಿವೃದ್ಧಿ ಪಡಿಸಿರುವ ನ್ಯಾಯಾಂಗ ಬಡಾವಣೆ ನಿವೇಶನ ಸಂಖ್ಯೆ 561 ಹಾಲಿ ಬೋಗಾದಿ ಪಟ್ಟಣ ಪಂಚಾಯಿತಿ ದಾಖಲೆ ನಮೂನೆ 3 (ನಿಯಮ 20) ರ ಪ್ರಕಾರ ಸ್ವತ್ತಿನ ಸಂಖ್ಯೆ 1646721439, ನಿರ್ಧರಣಾ ಸಂಖ್ಯೆ 14/561 ವುಳ್ಳದ್ದಕ್ಕೆ ಚೆಕ್ಕುಬಂದಿ:– ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 560ನೇ ನಂಬರ ಸ್ವತ್ತು, ಉತ್ತರಕ್ಕೆ : 562ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ : ರಸ್ತೆ, ಈ ಮಧ್ಯೆ ಇರುವ ಪೂರ್ವ–ಪಶ್ಚಿಮ 12.00 ಮೀಟರ್ ಮತ್ತು ಉತ್ತರ–ದಕ್ಷಿಣ (10.7+10)/2 ಮೀಟರ್, ಒಟ್ಟು ವಿಸ್ತೀರ್ಣ 124.20 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಏನಾದರೂ ತಂಟೆ ತಕರಾರು ಇದ್ದಲ್ಲಿ ದಿನಾಂಕ: 19–3–26 ರಂದು ಮಧ್ಯಾಹ್ನ 3 ಘಂಟೆಗೆ ತಮ್ಮ ತಕರಾರನ್ನು ಖುದ್ದಾಗಿ ಸಲ್ಲಿಸತಕ್ಕದ್ದು.

ಸಹಿ/– ಅರ್ಜಿದಾರರು
ಮೊ. 7259767839
Sd/- T.M. Durgaprasad BA., LL.B, LL.M., KAR/83/2016
#2549, 2nd floor, 4th Cross, K.G.Koppal, Mysore
ದಿನಾಂಕ : 12–3–2026, ಸ್ಥಳ : ಮೈಸೂರು

IN THE COURT OF THE HON'BLE IV ADDL. SENIOR CIVIL JUDGE AT MYSURU
Mis No. 59/2024

Petitioner : Sri M.N. Manjunath
V/s
Respondent : 1. Smt. Papibai Dead by LRs 2) Shankaranayak S/o Late Manyanayak, Aged about 61 years, R/at #150, 24th main, D-Block, II Phase, J.P. Nagar, Khille Mohalla, Mysuru-570008 3) Sri B.M. Anandamurthy S/o Late Byrappa, Aged about 57 years, R/at : #200, 2nd Cross, 5th Stage, K.M. Layout, Kalyanagiri, Mysuru - 570019

NOTICE

Whereas, the Petitioner have instituted the above suit U/s 39 rule 2A against the Respondents, the above suit has been posted for steps against the Respondents. You are hereby summoned to appear before the Court in person or through a pleader duly instructed and able to answer all the material questions relating to the above said suit on the 28-04-2026 at 11.00 am., in default of your presence on the said date and time ,it will be heard and determined in your absence as exparte. Given under my hand and seal of the Court on this day 10th of March 2026.

Sd/- Chief Ministerial Officer
Court of Senior Civil Judge and CJM, Mysuru

Sd/- H.S. Kumar, B.A.L., LL.B., Advocate, No. 1411/1, 1st Floor, 6th Cross, Thyagaraja Road Mysuru Mob.: 9448797546

ಪತ್ರಿಕಾ ಪ್ರಕಟಣೆ

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ. 132/3 ರಲ್ಲಿರುವ 0.32 (ಮೂವತ್ತೆರಡು ಗುಂಟೆ) ಮತ್ತು ಡಿಟೋ ವಿಳಾಸದಲ್ಲಿರುವ ಸರ್ವೆ ನಂ. 132/4 (ಹಳೇ ನಂ. 132/2) ರಲ್ಲಿರುವ 1–00 (ಒಂದು ಎಕರೆ) ಖುಷ್ಕೀ ಜಮೀನು ಒಟ್ಟು 1 ಎಕರೆ 32 ಗುಂಟೆ ಜಮೀನು ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಎಡಹಳ್ಳಿ ಗ್ರಾಮದ ನಿವಾಸಿಯಾದ ವೆಂಕಟೇಶಗೌಡ ಮತ್ತು ಕೆಂಪಮ್ಮ ರವರ ಮಗನಾದ ಶ್ರೀ ವೈ ವಿ ಶ್ರೀನಿವಾಸ್ ರವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷೀದಾರರಾದ ಶ್ರೀಮತಿ ಶಿವಲಕ್ಷ್ಮಿ ಎನ್ ಕೋಂ. ನಟರಾಜ್ (ಮೊ. ಸಂಖ್ಯೆ: 9980658997 / 6364220030) ರವರು ಶುದ್ಧಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ದಿನಾಂಕ.. 23.03.2026 ರಂದು ನೋಂದಣಿಗೆ ಸಿದ್ಧರಾಗಿರುತ್ತಾರೆ.

ಸದರಿ ಸ್ವತ್ತಿನ ಶುದ್ಧಕ್ರಯಪತ್ರವನ್ನು ದಿನಾಂಕ: 23.03.2026 ರಂದು ನೋಂದಾವಣೆ ಮಾಡಿಕೊಳ್ಳಲು ತಯಾರಿದ್ದು, ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿ ತಂಟೆ ತಕರಾರು, ಹಕ್ಕುಭಾದ್ಯತೆ, ಕ್ಲೈಮು, ವಗೈರೆಗಳು ಇದ್ದಲ್ಲಿ ಈ ದಿನದಿಂದ 7 ದಿನಗಳ ಅವಧಿಯ ಒಳಗಾಗಿ ನನಗೆ ಕರೆ ಮಾಡಿ ತಿಳಿಸಬೇಕಾಗಿ ಸೂಚನೆ.

ಷೆಡ್ಯೂಲ್ ಸ್ವತ್ತಿನ ವಿವರ:–

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ. 132/3 ರಲ್ಲಿರುವ 0.32 (ಮೂವತ್ತೆರಡು ಗುಂಟೆ) ಮತ್ತು ಡಿಟೋ ವಿಳಾಸದಲ್ಲಿರುವ ಸರ್ವೆ ನಂ./ 132/4 (ಹಳೇ ನಂ. 132/2) ರಲ್ಲಿರುವ 1–00 (ಒಂದು ಎಕರೆ) ಖುಷ್ಕೀ ಜಮೀನು ಒಟ್ಟು 1 ಎಕರೆ 32 ಗುಂಟೆ ಜಮೀನು.

ಕರೆಮಾಡಿ ತಿಳಿಸಬೇಕಾದ ಮೊ. ಸಂಖ್ಯೆ 9980658997 / 6364220030

ಸಹಿ/– ಎಸ್.ಎನ್. ಹೇಮಲತ
BAL.,LL.M, ವಕೀಲರು & ನೋಟರಿ
36, 1ನೇ ಮುಖ್ಯರಸ್ತೆ, ಕುಂಬಾರ ಕೊಪ್ಪಲ್, ಮೈಸೂರು–570016. ಮೊ: 8951506020
ದಿನಾಂಕ: 12–3–2026

5ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಗಂಡು ಮಕ್ಕಳು, ಸೊಸೆಯಂದಿರು, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು #268, ಸರ್ಕಾರಿ ಉತ್ತನಹಳ್ಳಿ, ಹಡಜನ ಅಂಚೆ, ವರುಣಾ ಹೋ॥, ಮೈಸೂರು ತಾ॥ ಹಾಗೂ ಗ್ರಾಮಸ್ಥರು – 98444797257

ಶ್ರೀಮತಿ ಸರೋಜಮ್ಮ
W/O ಲೇ॥ ಸಿದ್ದರಾಮಯ್ಯ
(Ideal java)

16ನೇ ವರ್ಷದ ಸವಿನೆನಪು



ನೀವು ನಮ್ಮಿಂದ ದೂರವಾಗಿ 16 ವಸಂತಗಳೇ ಕಳೆಯಿತು ಆದರೆ ನಮ್ಮಲ್ಲಿ ನಿಮ್ಮ ನೆನಪುಗಳು ಮಾತ್ರ ಶಾಶ್ವತವಾಗಿ ಉಳಿಯಿತು. ನಿಮ್ಮ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಆ ಭಗವಂತನಲ್ಲಿ ಪ್ರಾರ್ಥಿಸುವೆವು

ಬಿ.ಸುನಂದ

ದುಃಖತಪ್ತರು: ಪತಿ: ನಂಜೇಗೌಡ, ಮಕ್ಕಳಾದ: ಎನ್.ವಿಕಾಸ್, ಎನ್.ಮನೋಜ್, ಸೊಸೆ ಮಾನಸ ಹೆಚ್.ಎಸ್

8ನೇ ವರ್ಷದ ಸವಿನೆನಪು



ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ

ದುಃಖತಪ್ತರು: ಪತ್ನಿ ಶಿವಮ್ಮ, ಅಳಿಯ ಶ್ರೀನಿವಾಸ ಮಗಳು ಶೋಭಾವತಿ ಮಗ ಮಧುಸೂಧನ ಸೊಸೆ ನಿವೇದಿತ ಡಾ॥ ನಂದನ, ಹರೀಶ, ಜಾಹ್ನವಿ, ಗೌರವ್, ಗಾನವಿ, ಕುಟುಂಬವರ್ಗದವರು, ವಾಜಮಂಗಲ

ಎ.ಅಂಕಯ್ಯ
(ನೀರಾವರಿ ಇಲಾಖೆ)
ಜನನ: 15.01.1950
ಮರಣ: 14.03.2018

PUBLIC NOTICE

The Public at large is hereby notified that my client is intending to purchase the below mentioned Schedule Property for a valuable consideration from its absolute owner Sri. Mohammed Mansoor Ahmed S/o G.F.Nazeer Ahmed, residing at No.30, The Empire Layout, 2nd Stage, 2nd Phase, Rajiv Nagar, Mysore City, (hereinafter referred as "Owner"). The Owner claim that, his right is free from all encumbrances, charges, claims etc., of whatsoever nature and that, he has a clear and marketable title in respect of the Schedule Property. All or any persons including any Banks, Financial Institutions or any other party or persons, having any valid and legal claim, right, title, demand or interest by virtue of any sale, gift, lease, tenancy, license, exchange, partition, mortgage, charge, lien, inheritance, succession, trust, maintenance, possession, easement, power of attorney, agreement, lis-pendence, stay order, attachment, decree, specific performance or otherwise or any other right of whatsoever nature are required / called upon to convey their objection/s in writing at the address mentioned below during the working hours, with the documentary proof/s in original within Seven (07) days from issuance of this public notice. Failing which it will be presumed by my client that (a) there are no Power of Attorney holders, (b) there are no claim/s, lein/s, objection/s, mortgages, charges, etc., (c) if any, the same is / are deemed to have been waived and abandoned in respect of the Schedule Property and my client will be obliged to proceed with the execution and Registration of the Sale Agreement and Absolute Sale Deed as if there are no valid claim/s, lien/s, objection/s, mortgages, charge/s, etc., subsisting against the Schedule Property.

SCHEDULE

All the piece and Parcel bearing Site No.808, Property No.9999202611, (as per Form-3 (rule 2) issued by MCC, Mysore), Property Old No.808, Assessment No.808 measuring East to West 30.00 Feet, North to South 40.00 Feet situated at Sathagalli 1st Stage layout, Nazarbad Mohalla, Mysore City, bounded on; East by : Site No.807, West by : Site No.809, North by : Site No.762, South by: Road

Sd/- Mohana .C
Advocate KAR/1640/98,
#390 /E, 1st Floor, 4th Main, Kuvempunagar, Mysore-570023
Mob: 9448448407
Date: 10-03-2026, Place: Mysore

ಗೃಹ ಬಳಕೆ ಸಿಲಿಂಡರ್ ಲಭ್ಯವಿದ್ದರೂ ಬುಕಿಂಗ್‌ಗೆ ಮುಗಿ ಬೀಳುತ್ತಿರುವ ಜನ!

• ಅಡುಗೆ ಅನಿಲ ಸಿಲಿಂಡರ್ ಅಭಾವ ಸೃಷ್ಟಿಯಾಗುವ ಆತಂಕ • ಅಧಿಕಾರಿಗಳು, ಸರಬರಾಜು ಕಂಪನಿ ಪ್ರತಿನಿಧಿಗಳ ಮಾತಿಗೂ ಕಿವಿಗೊಡುತ್ತಿಲ್ಲ

ಮೈಸೂರು, ಮಾ.12(ಎಂಟಿವೈ)– ಇರಾನ್ ಮೇಲೆ ಇಸ್ರೇಲ್–ಅಮೆರಿಕ ನಡೆಸುತ್ತಿರುವ ಜಂಟಿ ದಾಳಿಯಿಂದಾಗಿ ಮೈಸೂರಲ್ಲಿ ಅಡುಗೆ ಅನಿಲ ಸರಬರಾಜಿನಲ್ಲಿ ಆಗಿರುವ ವ್ಯತ್ಯಯ ಮುಂದಿನ ಮೂರ್‍ನಾಲ್ಕು ದಿನಗಳಲ್ಲಿ ಸರಿ ಹೋಗಲಿರುವ ಆಶಯವಿದ್ದರೂ ಗ್ರಾಹಕರು ಮಾತ್ರ ಗೃಹೋಪಯೋಗಿ ಸಿಲಿಂಡರ್ ಬುಕಿಂಗ್‌ಗೆ ಮುಗಿ ಬೀಳುತ್ತಿದ್ದಾರೆ.

ಇರಾನ್–ಇಸ್ರೇಲ್, ಅಮೆರಿಕ ಯುದ್ಧ 13ನೇ ದಿನಕ್ಕೆ ಕಾಲಿಟ್ಟಿದ್ದರೂ, ಕಳೆದ 3–4 ದಿನಗಳಿಂದ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಯಲ್ಲಿ ವ್ಯತ್ಯಯವಾಗಿದೆ. ಆದರೆ, ಇದುವರೆಗೂ ಗೃಹೋಪಯೋಗಿ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಆಗಿಲ್ಲ. ಆದರೂ, ಮುಂಬರುವ ದಿನಗಳಲ್ಲಿ ಗೃಹೋಪಯೋಗಿ ಸಿಲಿಂಡರ್ ಸಿಗದೇ ಇರಬಹುದೆಂಬ ಆತಂಕ ಜನರಲ್ಲಿ ಮನೆ ಮಾಡಿದ್ದು, ದಾಸ್ತಾನು ಇಟ್ಟುಕೊಳ್ಳಲು ಬಯಸಿ ಸಿಲಿಂಡರ್ ಬುಕಿಂಗ್ ಮಾಡಲು ಮುಗಿ ಬೀಳುತ್ತಿದ್ದಾರೆ.

ಏಕ ಕಾಲದಲ್ಲಿ ನೂರಾರು ಮಂದಿ ಸಿಲಿಂಡರ್ ಬುಕಿಂಗ್‌ಗೆ ಮುಂದಾಗುತ್ತಿರುವುದರಿಂದ ಸರ್ವರ್ ಸಮಸ್ಯೆ ಉದ್ಭವಿಸಿದೆ. ಇದರಿಂದ ಸಿಲಿಂಡರ್ ಬುಕಿಂಗ್‌ಗೆ ಪ್ರಯತ್ನಿಸಿದ 2 ಗಂಟೆ ನಂತರ ಬುಕಿಂಗ್ ಕುರಿತು ಮೆಸೇಜ್ ಬರುತ್ತಿದೆ. ಸರ್ವರ್ ಸಮಸ್ಯೆಯೂ ಗ್ರಾಹಕರಲ್ಲಿನ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ವಾಣಿಜ್ಯ ಬಳಕೆ ಸಿಲಿಂಡರ್: ಸರ್ಕಾರದ ಮಾರ್ಗ ಸೂಚಿ ಮೇರೆಗೆ ಅಡುಗೆ ಅನಿಲ ಸರಬರಾಜು ಕಂಪನಿಗಳು ಗೃಹ ಬಳಕೆಯ ಸಿಲಿಂಡರ್‌ಗಳ ಮಾತ್ರ ರೀಫಿಲ್ಲಿಂಗ್ ಮಾಡುತ್ತಿವೆ. ಕಮರ್ಷಿಯಲ್ ಸಿಲಿಂಡರ್‌ಗಳಿಗೆ ರೀಫಿಲ್ಲಿಂಗ್ ಅನ್ನು ಎರಡು ದಿನದ ಹಿಂದೆಯೇ ಸ್ಥಗಿತಗೊಳಿಸಿವೆ. ಪ್ರಸ್ತುತ ಮೈಸೂರಲ್ಲಿರುವ 3 ಅನಿಲ ಸರಬರಾಜು ಕಂಪನಿಗಳಲ್ಲೂ ಅಡುಗೆ ಅನಿಲ ದಾಸ್ತಾನು ಇರುವುದರಿಂದ ಗೃಹಬಳಕೆಗೆ ಸಮರ್ಪಕ ರೀತಿ ಸಿಲಿಂಡರ್ ಪೂರೈಸಬಹುದಾಗಿದೆ. ಆದರೆ, ಕಮರ್ಷಿಯಲ್ ಸಿಲಿಂಡರ್ ಸರಬರಾಜಿನಲ್ಲಿ ಆಗಿರುವ ವ್ಯತ್ಯಯ ಮುಂದಿನ 3–4 ದಿನಗಳಲ್ಲಿ ಸರಿಯಾಗುವ ಆಶಾಭಾವನೆ ಡೀಲರ್‌ಗಳಲ್ಲಿದೆ. ಹೋಟೆಲ್ ಮಾಲೀಕರಲ್ಲೂ ಇದೇ ವಿಶ್ವಾಸವಿದೆ.



21ರಿಂದ 25 ದಿನಗಳ ನಂತರ

ಗೃಹ ಬಳಕೆ ಸಿಲಿಂಡರ್ ಒಂದು ತಿಂಗಳು ಬಾಳಿಕೆ ಬರಬಹುದಾಗಿದೆ. ಆದರೂ, ಗ್ರಾಹಕರು ಹೆಚ್ಚುವರಿ ಸಿಲಿಂಡರ್‌ಗೆ, ಗ್ಯಾಸ್ ಖಾಲಿಯಾಗುವ ಮುನ್ನವೇ ಸಿಲಿಂಡರ್‌ಗೆ ಬುಕಿಂಗ್ ಮಾಡುತ್ತಿರುವುದರಿಂದ ಸಮಸ್ಯೆಗೆ ಕಾರಣವಾಗಿದೆ. ಅವಧಿಗೂ ಮುನ್ನವೇ ಬುಕ್ಕಿಂಗ್ ಮಾಡುತ್ತಿರುವ ಗ್ರಾಹಕರಿಗೆ 21ರಿಂದ 25 ದಿನದ ನಂತರ ಸಿಲಿಂಡರ್ ಪೂರೈಸುವ ದಿನಾಂಕ ನೀಡಲಾಗುತ್ತಿದೆ. ಬುಕಿಂಗ್ ಮಾಡಿದ ಗ್ರಾಹಕರ ಜೇಷ್ಠತೆಗೆ ಅನುಗುಣವಾಗಿ ಗೃಹ ಬಳಕೆ ಸಿಲಿಂಡರ್ ಎಂದಿನಂತೆ ಸರಬರಾಜಾಗುತ್ತಿದೆ. ಆದರೂ, ಜನರಲ್ಲಿ ಸಿಲಿಂಡರ್ ಪೂರೈಕೆ ಸ್ಥಗಿತಗೊಳ್ಳುವ ಭಯದಿಂದ ಬುಕಿಂಗ್ ಮಾಡಲು ಪರದಾಡುತ್ತಿದ್ದಾರೆ.

ಖಾಸಗಿ ಕಂಪನಿಗಳ ಸಿಲಿಂಡರ್ ಪೂರೈಕೆ: ಅಡುಗೆ ಅನಿಲ ಉತ್ಪಾದನೆಯ ಕೆಲ ಖಾಸಗಿ ಕಂಪನಿಗಳೂ ಮೈಸೂರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವುಗಳ ಸಿಲಿಂಡರ್ ಎಂದಿನಂತೆ ಸರಬರಾಜಾಗುತ್ತಿದ್ದು, ಆದರೆ ದರ ಹೆಚ್ಚಿಸಲಾಗಿದೆ. ಈ ಖಾಸಗಿ ಕಂಪನಿಗಳ ಸಿಲಿಂಡರನ್ನು ಕೆಲವು ಫಾಸ್ಟ್‌ಫುಡ್, ಸಣ್ಣ ಪುಟ್ಟ ಹೋಟೆಲ್ ಹಾಗೂ ಟಿ ಅಂಗಡಿಗಳ ಮಾಲೀಕರು ಖರೀದಿಸುತ್ತಿದ್ದಾರೆ. ಇದರಿಂದ ತುರ್ತು ಸಂದರ್ಭ ಒದಗಿ ಬಂದರೆ ಖಾಸಗಿ ಕಂಪನಿಗಳ ಸಿಲಿಂಡರ್‌ಗಳನ್ನು ಬಳಸಿಕೊಳ್ಳಲು ಜಿಲ್ಲಾಡಳಿತ ಬಯಸಿದೆ. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅಡುಗೆ ಅನಿಲದ ಅಭಾವ ನಿರ್ಮಾಣವಾಗುವ ಲಕ್ಷಣ ಇಲ್ಲ ಎಂದು ಗ್ಯಾಸ್ ಏಜೆನ್ಸಿಗಳ ಪ್ರತಿನಿಧಿಗಳು ತಿಳಿಸಿದ್ದಾರೆ.

ಶಾಲೆಗೆ ಕಂಪ್ಯೂಟರ್ ಕೊಡುಗೆ ನೀಡಿ ಔದಾರ್ಯ ಮೆರೆದ ಅನಕ್ಷರಸ್ಥ ಮಹಿಳೆ



ಧಮತರಿ (ಛತ್ತೀಸ್ ಗಢ), ಮಾ.12 (ಬಿಎಲ್‌ಯು)– ಅನಕ್ಷರಸ್ಥ ಮಹಿಳೆಯೊಬ್ಬರು ಶಾಲೆಯೊಂದಕ್ಕೆ ಕಂಪ್ಯೂಟರ್ ದಾನ ನೀಡುವ ಮೂಲಕ ಔದಾರ್ಯ ಮೆರೆದಿದ್ದಾರೆ.

ಧಮತರಿ ಜಿಲ್ಲೆಯ ಸಿಂಗ್‌ಪುರ್ ಗ್ರಾಮದ ಖಮ್ಮನ್ ಬಾಯಿ ಕಮರ್ ಎಂಬುವರೆ ಉದಾರತೆ ಮೆರೆದ ಅನಕ್ಷರಸ್ಥ ಮಹಿಳೆಯಾಗಿದ್ದಾರೆ.

ಗುಡಿ ಕೈಗಾರಿಕೆ ನಡೆಸುವ ಈಕೆ ತಮಗೆ ಬರುವ ಆದಾಯವನ್ನು ಕೂಡಿಟ್ಟು ಸಿಂಗ್ ಪೂರ್‌ನ ಸ್ವಾಮಿ ಆತ್ಮನಂದ ಉತ್ಕೃಷ್ಟ ಹಿಂದಿ ವಿದ್ಯಾಲಯಕ್ಕೆ ಶಾಲೆಗೆ ಕಂಪ್ಯೂಟರ್ ಅನ್ನು ದಾನವಾಗಿ ನೀಡಿದ್ದಾರೆ.

ಜಿಲ್ಲಾ ಕೇಂದ್ರದಿಂದ 65 ಕಿಲೋ ಮೀಟರ್ ದೂರದಲ್ಲಿರುವ ಈ ಗ್ರಾಮ ಕಾಡಿನ ಮಧ್ಯೆ ಇದ್ದು, ಇಲ್ಲಿ ಬುಡಕಟ್ಟು ಸಮುದಾಯದ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಖಮ್ಮನ್ ಬಾಯಿ ಕಮರ್ ಅವರು ಕಂಪ್ಯೂಟರ್ ನೀಡಿರುವ ಕಾರಣ ಅಲ್ಲಿನ ಮಕ್ಕಳಿಗೆ ಕಂಪ್ಯೂಟರ್ ಕಲಿಕೆಗೆ ಅವಕಾಶ ದೊರೆತಂದಾಗಿದೆ.

ಒತ್ತಡದಲ್ಲಿ ಮಹಿಳೆಯರು ಆರೋಗ್ಯ ನಿರ್ಲಕ್ಷಿಸಬಾರದು

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಕಿವಿಮಾತು

ಮೈಸೂರು, ಮಾ.12(ಬಿಎಲ್ ಯು)– ಹೊರಗಿನ ಕೆಲಸದ ಜೊತೆಗೆ ಕುಟುಂಬ ನಿರ್ವಹಣೆ ಮಾಡುವ ಮಹಿಳೆಯರು ಆರೋಗ್ಯವನ್ನು ನಿರ್ಲಕ್ಷಿಸಬಾರದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸಲಹೆ ನೀಡಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಇಂದು 115ನೇ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ನಿಯಮಿತವಾಗಿ ಆರೋಗ್ಯ ತಪಾಸಣೆಗೆ ಒಳಪಡಬೇಕು ಎಂದು ಕಿವಿಮಾತು ಹೇಳಿದರು.

ಮಹಿಳೆಯರು ತಮಗೆ ಇರುವ ರಕ್ಷಣಾತ್ಮಕ ಕಾನೂನಿನ ಬಗ್ಗೆ ಅರಿತುಕೊಂಡು ಸುರಕ್ಷಿತ ಜೀವನ ಮಾಡಬೇಕು. ಪೋಕ್ಸೋದಂತಹ ಕಾನೂನಿನ ಬಗ್ಗೆ ಮಾಹಿತಿ ಹೊಂದುವ ಮೂಲಕ ಬಾಲಕಿಯರ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕು ಎಂದು ಸೀಮಾ ಲಾಟ್ಕರ್ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಪ್ರೊ.ಎಂ.ಪುಷ್ಪಾ, ಪರೀಕ್ಷಾಂಗ ಕುಲಸಚಿವ ಡಾ.ನಾಗರಾಜ್, ಸಿಂಡಿಕೇಟ್ ಸದಸ್ಯರಾದ ಜೆಶಿಲ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಗುರುವಾರ ನಡೆದ 115ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಉದ್ಘಾಟಿಸಿದರು.

ಅಡುಗೆ ಅನಿಲದ ಬಗ್ಗೆ ನಮ್ಮ ಸಂಸದರು ಸೊಲ್ಲೆತ್ತಿಲ್ಲ !

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ



ಬೆಂಗಳೂರು, ಮಾ. 12(ಕೆಎಂಶಿ)– ರಾಜ್ಯದಲ್ಲಿ ಉಂಟಾಗಿರುವ ಅಡುಗೆ ಅನಿಲದ ಕೊರತೆಯ ಬಗ್ಗೆ ನಮ್ಮ ಸಂಸದರು ಸಂಸತ್ತಿನಲ್ಲಿ ಧ್ವನಿ ಎತ್ತುತ್ತಿಲ್ಲ ಏಕೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಸಣ್ಣ ವಿಚಾರಗಳಿಗೆ ಕ್ಯಾತೆ ತೆಗೆಯುವ ನಮ್ಮ ಬಿಜೆಪಿ ಸಂಸದರು ಈ ವಿಷಯದಲ್ಲಿ ಮೌನ ವಹಿಸಿರುವುದಾದರೂ ಏಕೆ? ಅವರು ಉಭಯ ಸದನಗಳಲ್ಲಿ ಬಾಯಿ ಬಿಟ್ಟರೆ ತಕ್ಷಣವೇ ಸಮಸ್ಯೆ ಬಗೆಹರಿಯಲಿದೆ ಎಂದು ಹೇಳಿದ್ದಾರೆ.

ರಾಷ್ಟ್ರದ ಯಾವುದೇ ರಾಜ್ಯದಲ್ಲಿ ಉಂಟಾಗದ ಅಡುಗೆ ಅನಿಲದ ಕೊರತೆ, ಕರ್ನಾಟಕ, ತಮಿಳುನಾಡಿಗೆ ಮಾತ್ರ ಏಕೆ ಸೀಮಿತವಾಗಿದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡುಗೆ ಅನಿಲ ಸಿಲಿಂಡರ್ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಇನ್ನು ಹಳ್ಳಿ ಜನರು ಹಾಗೂ ಹೊಟೇಲ್‌ಗಳಿಗೆ ಸೌದೆ ಒಲೆ ಬಳಸಲು ಕಟ್ಟಿಗೆ ಬಳಸಿಕೊಳ್ಳಲು ಅವಕಾಶ ನೀಡುತ್ತಿಲ್ಲ ಎಂದು ಆಕ್ಷೇಪಿಸಿದರು.

ಇಂಧನ ಬೆಲೆ ಏರಿಕೆಯಿಂದ ಜನ ಪರದಾಡುತ್ತಿದ್ದಾರೆ. ಇದರಲ್ಲಿ ರಾಜ್ಯ ಸರ್ಕಾರ ಏನೂ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರ ವಿದೇಶಾಂಗ ನೀತಿ ಬಗ್ಗೆ ಸ್ಪಷ್ಟವಾಗಿ ಮಾತನಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಗರಿಕರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಮುಂದೆ ಪರಿಸ್ಥಿತಿ ಹೇಗಿರುತ್ತದೆಯೋ ಹೇಗೋ ಈಗಾಗಲೇ ಗ್ಯಾಸ್ ಚಾಲಿತ ಆಟೋ ಬಂದ್ ಆಗಿದ್ದು, ಸಮಸ್ಯೆ ಹೆಚ್ಚುತ್ತಿದೆ ಎಂದು ಅವರು ತಿಳಿಸಿದರು.

ಜಲ ಜೀವನ್ ಮಿಷನ್ ಅವಧಿ ವಿಸ್ತರಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ

ಸಂಸದ ಯದುವೀರ್ ಹೇಳಿಕೆ



ಮೈಸೂರು, ಮಾ.12(ಬಿಎಲ್‌ಯು)– ಜಲ ಜೀವನ್ ಮಿಷನ್ 2.0 ಅವಧಿಯನ್ನು ಡಿಸೆಂಬರ್ 2028 ರವರೆಗೆ ವಿಸ್ತರಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ಸ್ವಾಗತಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯು, ಗ್ರಾಮೀಣ ಕುಡಿಯುವ ನೀರು ಪೂರೈಕೆಗೆ ಈ ಯೋಜನೆ ಮರು ಸಂಘಟಿಸುವ ಬಗ್ಗೆ ಜಲಶಕ್ತಿ ಸಚಿವಾಲಯದ ಪ್ರಸ್ತಾವನೆಗೆ ಅನುಮೋದನೆ ನೀಡಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ಗ್ರಾಮೀಣ ಭಾಗದ ಕುಡಿಯುವ ನೀರು ಪೂರೈಕೆಗೆ ಹೆಚ್ಚಿನ ಆದ್ಯತೆ ದೊರೆಯಲಿದೆ ಎಂದು ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಯ ಅಧಿಕಾರಿಗಳ ಸಭೆ ಕರೆದು ಕ್ರಿಯಾ ಯೋಜನೆ ರೂಪಿಸಲು ಸೂಚಿಸುತ್ತೇನೆ ಎಂದು ಅವರು ತಿಳಿಸಿದ್ದಾರೆ.

ಭಾರತದ ಗ್ರಾಮೀಣ ಭಾಗದ 19.36 ಕೋಟಿ ಗ್ರಾಮೀಣ ಕುಟುಂಬಗಳಲ್ಲಿ 15.80 ಕೋಟಿ ಕುಟುಂಬಗಳು ನೀರು ಸಂಪರ್ಕ ಹೊಂದಿವೆ. ಜಲ ಜೀವನ್ ಮಿಷನ್ ಯೋಜನೆಯಿಂದ 9 ಕೋಟಿ ಮಹಿಳೆಯರನ್ನು ನೀರು ತರುವ ಕಷ್ಟದ ಕೆಲಸದಿಂದ ಮುಕ್ತಗೊಳಿಸಲಾಗಿದೆ ಎಂದು ಯದುವೀರ್ ಮಾಹಿತಿ ನೀಡಿದ್ದಾರೆ.


ವಾಣಿಜ್ಯ ಸಿಲಿಂಡರ್ ಸಮಸ್ಯೆ ನಿವಾರಣೆಗೆ ಮೈಸೂರು ವಾಣಿಜ್ಯ ಕೈಗಾರಿಕಾ ಸಂಸ್ಥೆ ಆಗ್ರಹ



ಮೈಸೂರು, ಮಾ.12(ಎಂಕೆ)– ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದ ಕೈಗಾರಿಕೆಗಳಿಗೆ ಮುಖ್ಯವಾಗಿ ರಫ್ತು ಉದ್ಯಮಗಳು ಹಾಗೂ ಹೋಟೆಲ್ ಉದ್ಯಮಗಳಿಗೆ ಸಂಕಷ್ಟ ಎದುರಾಗಿದೆ ಎಂದು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಡಾ. ಕೆ.ಬಿ.ಲಿಂಗರಾಜು ಆತಂಕ ವ್ಯಕ್ತಪಡಿಸಿದ್ದಾರೆ.

ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮ ದೇಶ ವ್ಯಾಪಿ ಉದ್ಭವಿಸಿರುವ ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಈಗಾಗಲೇ ಹೋಟೆಲ್ ಉದ್ಯಮ ಸ್ಥಗಿತಗೊಂಡಿದ್ದು, ಕೈಗಾರಿಕೆಗಳಿಗೆ ಮುಖ್ಯವಾಗಿ ರಫ್ತು ಉದ್ಯಮಗಳಿಗೂ ತೊಂದರೆ ಎದುರಾಗಿದೆ. ಇದೆಲ್ಲದರಿಂದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಬಾರೀ ಹೊಡೆತ ಬೀಳಲಿದ್ದು, ಕೂಡಲೇ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಸಚಿವಾಲಯ ಹಾಗೂ ರಾಜ್ಯ ಆಹಾರ ಮತ್ತು ನಾಗರಿಕ ಸಚಿವಾಲಯ ವಾಣಿಜ್ಯ ಸಿಲಿಂಡರ್ ವ್ಯತ್ಯಯ ಸಮಸ್ಯೆ ಬಗೆಹರಿಸಬೇಕು. ಇಲ್ಲವೇ ಪರ್ಯಾಯ ಮಾರ್ಗ ಕಂಡುಕೊಳ್ಳುವಂತೆ ಕೇಂದ್ರ ಸಚಿವ ಹರಿದೀಪ್ ಸಿಂಗ್ ಪುರಿ, ಸಂಸದೆ ಶೋಭಾ ಕರಂದ್ಲಾಜೆ, ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವ ಕೆ.ಹೆಚ್.ಮುನಿಯಪ್ಪ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಬಿಕ್ಲು ಶಿವ ಕೊಲೆ ಪ್ರಕರಣ: ಬೈರತಿ ಬಸವರಾಜ್‌ಗೆ ಜಾಮೀನು



ಬೆಂಗಳೂರು, ಮಾ.12– ಬಿಕ್ಲು ಶಿವ ಕೊಲೆ ಪ್ರಕರಣ ಆರೋಪಿ ಶಾಸಕ ಬೈರತಿ ಬಸವರಾಜ್ ಅವರಿಗೆ 82ನೇ ಜನಪ್ರತಿನಿಧಿಗಳ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ವಜಾ ಬಳಿಕ ಅವರನ್ನು ಬಂಧಿಸಲಾಗಿತ್ತು. ಫೆ.12ರಂದು ಅಹಮದಾಬಾದ್‌ನಿಂದ ಬೆಂಗಳೂರಿಗೆ ಆಗಮಿಸಿದ್ದ ಬೈರತಿ ಬಸವರಾಜ್ ಅವರನ್ನು ಪೊಲೀಸರು ಬಂಧಿಸಿದ್ದರು. ಮರುದಿನ ಆರೋಗ್ಯ ತಪಾಸಣೆ ನಡೆಸಿದ್ದ ವೇಳೆ ಅವರಿಗೆ ಇಸಿಜಿಯಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಬಳಿಕ ಅವರಿಗೆ ಜಯದೇವ ಆಸ್ಪತ್ರೆಯಲ್ಲಿ ಆಂಜಿಯೋಗ್ರಾಮ್ ಮಾಡಿಸಲಾಗಿತ್ತು.

ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ವಜಾಗೊಂಡ ಬೆನ್ನಲ್ಲೇ ಸುಪ್ರೀಂಕೋರ್ಟ್ ಮೊರೆ ಹೋಗಿದ್ದ ಬೈರತಿ ಬಸವರಾಜ್‌ಗೆ ಅಲ್ಲಿಯೂ ಹಿನ್ನಡೆಯಾಗಿತ್ತು.

ಕೊಲೆ ಪ್ರಕರಣದಲ್ಲಿ ಸರಣಿ ಘಟನೆಗಳು ಪೂರಕವಾಗಿ ನಡೆದಿವೆ. 2 ಗುಂಪುಗಳು ಜಗಳ ಆಡುವಾಗ ಆರೋಪಿತ ಶಾಸಕರು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಆಸ್ತಿಯ ಜಿಪಿಎ ತೋರಿಸಿದ್ದಾರೆ. ಬೈರತಿ ಬಸವರಾಜ್ ವಿಚಾರಣೆ ಎದುರಿಸಬೇಕು. ಈ ಹಿಂದೆ ನಿರೀಕ್ಷಣಾ ಜಾಮೀನು ಪಡೆದಾಗ ಹೇಗೆ ಇರಬೇಕು ಅಂತ ಗೊತ್ತಿಲ್ವಾ ಎಂದು ಕೋರ್ಟ್ ಗರಂ ಆಗಿ ಪ್ರಶ್ನಿಸಿತ್ತು.

ಪಶ್ಚಿಮ ಬಂಗಾಳದ 22ನೇ ರಾಜ್ಯಪಾಲರಾಗಿ ಆರ್.ಎನ್.ರವಿ ಪ್ರಮಾಣ ವಚನ ಸ್ವೀಕಾರ



ಕೋಲ್ಕತ್ತಾ: ಪಶ್ಚಿಮ ಬಂಗಾಳದ 22ನೇ ರಾಜ್ಯಪಾಲರಾಗಿ, ತಮಿಳುನಾಡು ಮಾಜಿ ರಾಜ್ಯಪಾಲ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಆರ್.ಎನ್. ರವಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಇಂದು ಬೆಳಗ್ಗೆ ಲೋಕಭವನದಲ್ಲಿ ನಡೆದ ಸಮಾರಂಭದಲ್ಲಿ ಕಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಜೋಯ್ ಪಾಲ್ ಅವರು ಆರ್.ಎನ್.ರವಿ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ಈ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ವಿಧಾನಸಭಾ ಸ್ಪೀಕರ್ ಬಿಮನ್ ಬ್ಯಾನರ್ಜಿ, ಹಿರಿಯ ಸಚಿವ ಮತ್ತು ಕೋಲ್ಕತ್ತಾ ಮೇಯರ್ ಫಿರ್ಹಾದ್ ಹಕೀಮ್ ಹಾಗೂ ಎಡಪಂಥೀಯ ಅಧ್ಯಕ್ಷ ಬಿಮನ್ ಬೋಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಆದರೆ ವಿರೋಧ ಪಕ್ಷ ಬಿಜೆಪಿ ಪಾಳಯದಿಂದ ಯಾವುದೇ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ನಂದಿನಿ ಚಕ್ರವರ್ತಿ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಸೇರಿದಂತೆ ಹಲವಾರು ಹಿರಿಯ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಾರ್ಚ್ 5 ರಂದು ಸಿ.ವಿ. ಆನಂದ ಬೋಸ್ ಅವರು ರಾಜ್ಯಪಾಲ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಅವರಿಂದ ತೆರವಾದ ಸ್ಥಾನಕ್ಕೆ ರವಿ ಅವರನ್ನು ನೇಮಕ ಮಾಡಲಾಗಿತ್ತು. ರವಿ ಈ ಹಿಂದೆ ನಾಗಾಲ್ಯಾಂಡ್, ಮೇಘಾಲಯ ಮತ್ತು ತಮಿಳುನಾಡು ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.

ಕಿಡ್ನಿ ಆರೋಗ್ಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ : ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

ಮೈಸೂರು,ಮಾ.12(ಪಿಎಂ)– ಕಿಡ್ನಿಯ ಆರೋಗ್ಯದ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚು ಜಾಗೃತಿ ಮೂಡಿಸಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಕರೆ ನೀಡಿದರು.

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಂತಾರಾಷ್ಟ್ರೀಯ ಕಿಡ್ನಿ ದಿನದ ಅಂಗವಾಗಿ ಮೈಸೂರು ಜೆನಿಟೋಯೂರಿನರಿ ಸರ್ಜನ್ಸ್ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ವಾಕಥಾನ್ ಮತ್ತು ಸೈಕ್ಲೋತಾನ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಮನುಷ್ಯನಿಗೆ ಆರೋಗ್ಯವೇ ಭಾಗ್ಯ, ಆರೋಗ್ಯವೇ ಆಸ್ತಿ. ಆದ್ದರಿಂದ ಪ್ರತಿಯೊಬ್ಬರು ಆರೋಗ್ಯವನ್ನು ಕಡೆಗಣಿಸದೆ ಪ್ರತಿವರ್ಷ ಆರೋಗ್ಯ ತಪಾಸಣೆ ಮಾಡಿಸಿಕೊಂಡರೆ ಕ್ಯಾನ್ಸರ್, ಕಿಡ್ನಿ, ಹೃದಯ ಸಮಸ್ಯೆ ಹಾಗೂ ಇತರೆ ಯಾವುದೇ ಸಮಸ್ಯೆ ಇದ್ದರೂ ಶೀಘ್ರ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಸೆಂಟ್ ಜೋಸೆಫ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎಕ್ಸ್.ಎ.ಡಿ'ಸೋಜ ಮಾತನಾಡಿ, ಕಿಡ್ನಿ ಒಮ್ಮೆ ಹಾನಿಗೊಳಗಾದರೆ ಜೀವನಪರ್ಯಂತ ತೊಂದರೆಯಾಗುತ್ತದೆ. ವೈದ್ಯರ ಸಲಹೆ ಇಲ್ಲದೆ ನೋವಿನ ಮಾತ್ರೆಗಳನ್ನು ತೆಗೆದುಕೊಳ್ಳಬೇಡಿ. ಸಕ್ಕರೆಕಾಯಿಲೆ ರಕ್ತದೊತ್ತಡ ನಿಯಂತ್ರಣದಲ್ಲಿ ಇಟ್ಟುಕೊಂಡರೆ ಕಿಡ್ನಿಯನ್ನು ಕಾಪಾಡಿಕೊಳ್ಳಬಹುದು ಎಂದರು.

ಅಪೋಲೋ ಆಸ್ಪತ್ರೆಯ ಹಿರಿಯ ನೆಫ್ರೋಲಜಿಸ್ಟ್ ಡಾ.ಶ್ರೀನಿವಾಸ್ ನಲ್ಲೂರ್ ಮಾತನಾಡಿ, ಸಾರ್ವಜನಿಕರು ಪ್ರತಿವರ್ಷ ಬಿಪಿ, ಕ್ರಿಯಾಟಿನ್ ಟೆಸ್ಟ್, ಯೂರಿನ್ ಟೆಸ್ಟ್, ಸ್ಕ್ಯಾನ್ ಮಾಡಿಸಿಕೊಂಡರೆ ಬಹುತೇಕ ಕಿಡ್ನಿ ತೊಂದರೆ ಇದೆಯೋ ಇಲ್ಲವೋ ಎಂದು ತಿಳಿದುಕೊಳ್ಳಬಹುದು. ಕಿಡ್ನಿ ವೈಫಲ್ಯದಿಂದ ಕೊನೆ ಹಂತಕ್ಕೆ ಹೋದಾಗ ಡಯಾಲಿಸೀಸ್‌ಗೆ ಹೋಗುತ್ತೇವೆ. ಕಿಡ್ನಿ ತೊಂದರೆಗೆ ಬಹುತೇಕ ಉತ್ತಮ ಚಿಕಿತ್ಸೆಗಳು ಬರುತ್ತಿವೆ ಎಂದು ತಿಳಿಸಿದರು.

ಹಿರಿಯ ವೈದ್ಯ ಡಾ.ಪ್ರಕಾಶ್‌ಪ್ರಭು ಮಾತನಾಡಿ, ಎಲ್ಲಾ ಕಿಡ್ನಿ ಕಾಯಿಲೆಗಳಿಗೆ ಹೆಚ್ಚು ನೀರು ಸೇವಿಸುವುದು ಪರಿಹಾರವಲ್ಲ. ಕಿಡ್ನಿ ವೈಫಲ್ಯದ ರೋಗಿಗಳಿಗೆ ಸೀಮಿತವಾದ ದ್ರವ ಪದಾರ್ಥ ಆಹಾರ ಸೇವನೆ, ರಕ್ತದೊತ್ತಡ ಹಾಗೂ ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿಟ್ಟುಕೊಳ್ಳುವುದು ಅಗತ್ಯ ಎಂದು ಹೇಳಿದರು.

ಮೈಸೂರು ಜೆನಿಟೋಯೂರಿನರಿ ಸರ್ಜನ್‌ಗಳ ಸಂಘದ ಅಧ್ಯಕ್ಷ ಡಾ.ಜೆ.ಬಿ.ನರೇಂದ್ರ, ಕಾರ್ಯದರ್ಶಿ ಡಾ.ಹೆಚ್.ಎಲ್.ಪ್ರಸಾದ್, ಹಿರಿಯ ವೈದ್ಯ ಡಾ.ಮಾದಪ್ಪ, ಡಾ.ದಿನೇಶ್, ಡಾ.ಅಮೃತ್ ರಾಜ್ ಜಿ.ಗೌಡ, ಡಾ.ಕುಮಾರ್‌ರಾಜ್‌ಅರಸ್, ಡಾ.ಹೆಚ್.ಎಸ್.ಪ್ರಕಾಶ್, ಡಾ.ಶಶಿಕಿರಣ್, ಸದಸ್ಯರಾದ ಡಾ.ಅಭಿಜಿತ್, ಡಾ.ಸುಹಾಸ್, ಖಜಾಂಚಿ ಡಾ.ಉಮೇಶ್ ಮತ್ತಿತರರು ಹಾಜರಿದ್ದರು.



ವಾಕಥಾನ್‌ನಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇತರೆ ಗಣ್ಯರು ಪಾಲ್ಗೊಂಡಿದ್ದರು.

ಮೈಸೂರಿನ ಎರಡು ಅನಿಲ ಚಿತಾಗಾರದಲ್ಲಿ ಗ್ಯಾಸ್ ನೋ ಪ್ರಾಬ್ಲಂ

• ಮುಂದೆ ಸಮಸ್ಯೆ ಉದ್ಭವವಾದರೂ ಪರ್ಯಾಯ ವ್ಯವಸ್ಥೆಯಾಗಿ ಸೌದೆ ಚಿತಾಗಾರ ಬಳಕೆ • 'ಮುಕ್ತಿಧಾಮ'ದ ಅನಿಲ ಚಿತಾಗಾರ ಕಾರ್ಯಸ್ಥಗಿತ

ಮೈಸೂರು,ಮಾ.12(ಪಿಎಂ)– ವಾಣಿಜ್ಯ ಅನಿಲ ಸಿಲಿಂಡರ್ ಪೂರೈಕೆ ಸ್ಥಗಿತವಾಗಿರುವ ಹಿನ್ನೆಲೆಯಲ್ಲಿ ಮೈಸೂರಿನಲ್ಲೂ ಹೋಟೆಲ್ ಉದ್ಯಮ, ಕೈಗಾರಿಕೋದ್ಯಮ ಸಮಸ್ಯೆಗೆ ಸಿಲುಕಿವೆ. ಈ ನಡುವೆ ಮೈಸೂರು ನಗರದಲ್ಲಿರುವ ಮೈಸೂರು ಮಹಾನಗರ ಪಾಲಿಕೆಯ ಸುಪರ್ದಿಯ ಅನಿಲ ಚಿತಾಗಾರಗಳಲ್ಲಿ ಸದ್ಯ ಯಾವುದೇ ಸಮಸ್ಯೆ ಉಂಟಾಗಿಲ್ಲ.

ಸಿಲಿಂಡರ್ ದಾಸ್ತಾನು ಇರುವ ಕಾರಣ ಈಗ ಸಮಸ್ಯೆ ಇಲ್ಲವಾದರೂ ಪರಿಸ್ಥಿತಿ ಇದೇ ರೀತಿಯಲ್ಲಿ ಮುಂದುವರೆದರೆ ಅನಿಲ ಚಿತಾಗಾರಗಳಿಗೂ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿ ತೊಂದರೆ ಎದುರಾಗಬಹುದು. ಅದಾಗ್ಯೂ ಸೌದೆಯಿಂದ ಸುಡುವ ಸ್ಮಶಾನದ ಸೌಲಭ್ಯ ಇರುವ ಹಿನ್ನೆಲೆಯಲ್ಲಿ ಗಂಭೀರ ಸಮಸ್ಯೆಯಾಗದು.

ಪಾಲಿಕೆಯ ಸುಪರ್ದಿಯಲ್ಲಿರುವ ಚಾಮುಂಡಿಬೆಟ್ಟದ ತಪ್ಪಲಿನ ಅನಿಲ ಚಿತಾಗಾರ ಹಾಗೂ ಕುವೆಂಪುನಗರ ಕೆ ಬ್ಲಾಕ್‌ನಲ್ಲಿರುವ ಅನಿಲ ಚಿತಾಗಾರ ಕಾರ್ಯಾಚರಣೆಯಲ್ಲಿದ್ದು, ಇವುಗಳಲ್ಲಿ ಸದ್ಯ ಅನಿಲ ಸಿಲಿಂಡರ್‌ಗಳು ದಾಸ್ತಾನಿರುವ ಕಾರಣ ಯಾವುದೇ ಸಮಸ್ಯೆ ಸದ್ಯಕ್ಕಿಲ್ಲವೆಂದು ಪಾಲಿಕೆ ಅಧಿಕಾರಿಗಳು ಮತ್ತು ಈ ಸ್ಮಶಾನದ ನಿರ್ವಹಣೆ ನೋಡಿಕೊಳ್ಳುವ ಸಿಬ್ಬಂದಿ ತಿಳಿಸಿದ್ದಾರೆ.

ವಿಜಯನಗರ 4ನೇ ಹಂತದಲ್ಲಿರುವ 'ಮುಕ್ತಿಧಾಮ' ಅತ್ಯಾಧುನಿಕ ಚಿತಾಗಾರದಲ್ಲಿ ಅನಿಲ ಚಿತಾಗಾರದ ವ್ಯವಸ್ಥೆ ಇತ್ತಾದರೂ ಅದೀಗ ಯಂತ್ರೋಪಕರಣಗಳ ದುರಸ್ತಿ ಕಾರಣಕ್ಕೆ ಸ್ಥಗಿತಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಇನ್ನು ಬೆಟ್ಟದ ತಪ್ಪಲಿನ ಅನಿಲ ಚಿತಾಗಾರ ಮತ್ತು ಕುವೆಂಪುನಗರ ಕೆ ಬ್ಲಾಕ್‌ನಲ್ಲಿರುವ ಅನಿಲ ಚಿತಾಗಾರದಲ್ಲಿ ಒಮ್ಮೆಗೆ ಒಂದು ಶವ ಸುಡುವ ಸೌಲಭ್ಯ ಇದ್ದು, ಅನಿಲ ಸಿಲಿಂಡರ್‌ಗಳು ದಾಸ್ತಾನು ಇರುವ ಹಿನ್ನೆಲೆಯಲ್ಲಿ ಇಲ್ಲಿ ಸದ್ಯಕ್ಕೆ ಸಮಸ್ಯೆ ಇಲ್ಲವಾಗಿದೆ. ಜೊತೆಗೆ ಈ ಎರಡು ಸ್ಮಶಾನಗಳಲ್ಲೂ ಪಕ್ಕದಲ್ಲೇ ಸೌದೆ ಬಳಸಿ ಶವ ಸುಡುವ ಸೌಲಭ್ಯ ಕೂಡ ಇರುವುದರಿಂದ ಅನಿಲ ಚಿತಾಗಾರಗಳು ಸಿಲಿಂಡರ್ ಅಭಾವದಿಂದ ಸ್ಥಗಿತಗೊಂಡರೂ ಪರ್ಯಾಯವಾಗಿ ಸುಡುವ ಸ್ಮಶಾನ ಬಳಸಿಕೊಳ್ಳಲು ಅವಕಾಶ ಇದ್ದೇ ಇದೆ. ಅಲ್ಲದೆ, ಕುವೆಂಪುನಗರದ ಸ್ಮಶಾನದಲ್ಲಿ ಶವ ಹೂಳುವುದಕ್ಕೂ ವ್ಯವಸ್ಥೆ ಇದೆ. ಜೊತೆಗೆ ಹಲವು ಸ್ಮಶಾನಗಳಲ್ಲಿ ಚಿತಾಗಾರ ಸೌಲಭ್ಯವೂ ಇದೆ.

ಈ ಎರಡು ಅನಿಲ ಚಿತಾಗಾರದಲ್ಲಿ ಒಂದೂವರೆ ತಿಂಗಳಿಗೆ ಆಗುವಷ್ಟು ಅನಿಲ ಸಿಲಿಂಡರ್ ದಾಸ್ತಾನು ಇದೆ ಎನ್ನುತ್ತಾರೆ ಸಂಬಂಧಿಸಿದ ಪಾಲಿಕೆ ಅಧಿಕಾರಿಗಳು. ಸದರಿ ಅನಿಲ ಚಿತಾಗಾರಗಳಲ್ಲಿ ವಾಣಿಜ್ಯ ಅನಿಲ ಸಿಲಿಂಡರ್ ದಾಸ್ತಾನು ಸಮರ್ಪಕವಾಗಿದೆ. ಈ ಸಂಬಂಧ ಚಿತಾಗಾರದ ಗುತ್ತಿಗೆದಾರರಿಂದ ಮಾಹಿತಿ ಪಡೆಯಲಾಗಿದೆ. ಒಂದು ಶವದ ದಹನಕ್ಕೆ ಅಂದಾಜು ಒಂದೂವರೆ ಸಿಲಿಂಡರ್ (19 ಕೆಜಿ) ಅಗತ್ಯವಾಗುತ್ತದೆ ಎಂದು ಮಾಹಿತಿ ನೀಡಿದರು.

ಕುವೆಂಪುನಗರ ಕೆ ಬ್ಲಾಕ್‌ನಲ್ಲಿರುವ ಅನಿಲ ಚಿತಾಗಾರಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದ ಪಾಲಿಕೆ ಅಧಿಕಾರಿಯೊಬ್ಬರು, ಇಲ್ಲಿ ಸಿಲಿಂಡರ್ ಅಭಾವ ಸೃಷ್ಟಿಯಾಗಿಲ್ಲ. ಜೊತೆಗೆ ಇಲ್ಲಿಗೆ ಬದಲಾಗಿ ಚಾಮುಂಡಿ ಬೆಟ್ಟದ ತಪ್ಪಲಿನ ಅನಿಲ ಚಿತಾಗಾರಕ್ಕೆ ಹೆಚ್ಚಿನ ಶವಗಳನ್ನು ಕೊಂಡೊಯ್ಯಲಾಗುತ್ತದೆ. ಇಲ್ಲಿಗೆ ವಾರದಲ್ಲಿ ಕೇವಲ 2 ಶವಗಳಷ್ಟೇ ಬರುವ ಸಾಧ್ಯತೆ ಇರುತ್ತದೆ ಎಂದರು.

ಚಾಮುಂಡಿಬೆಟ್ಟ ತಪ್ಪಲಿನ ಅನಿಲ ಚಿತಾಗಾರದ ಸಿಬ್ಬಂದಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಮ್ಮಲ್ಲಿ ಸಿಲಿಂಡರ್ ಸದ್ಯಕ್ಕೆ ಕೊರತೆಯಾಗಿಲ್ಲ. ಅನಿಲ ಚಿತಾಗಾರದ ಪಕ್ಕದಲ್ಲೇ ಸುಡುವ ಚಿತಾಗಾರವೂ ಇದೆ. ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬುದು ಕುಟುಂಬಸ್ಥರಿಗೆ ಬಿಟ್ಟ ವಿಚಾರ ಎಂದು ತಿಳಿಸಿದರು. ಈ ಅನಿಲ ಚಿತಾಗಾರದ ಗುತ್ತಿಗೆದಾರ ಚಂದ್ರಶೇಖರ್ ಮಾತನಾಡಿ, ಸಿಲಿಂಡರ್‌ಗಳ ದಾಸ್ತಾನಿದೆ. ಹಾಗಾಗಿ ಸದ್ಯಕ್ಕೆ ತೊಂದರೆ ಇಲ್ಲ ಎಂದು ಹೇಳಿದರು.

ಕುವೆಂಪುನಗರ ಅನಿಲ ಚಿತಾಗಾರದ ಸಿಬ್ಬಂದಿ ಸಹ ನಮ್ಮಲ್ಲಿ ಸಿಲಿಂಡರ್ ದಾಸ್ತಾನು ಇದೆ. ಈಗ ತೊಂದರೆ ಇಲ್ಲ ಎಂದರು.




ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಾಲಿಕೆಯ ಅನಿಲ ಚಿತಾಗಾರ.


ವಿಜಯನಗರದ 4ನೇ ಹಂತದ ಮುಕ್ತಿಧಾಮದಲ್ಲಿ ಸೌದೆ ಹಾಗೂ ವಿದ್ಯುತ್ ಚಿತಾಗಾರ ಚಾಲ್ತಿಯಲ್ಲಿವೆ. ಆದರೆ ಇಲ್ಲಿನ ಅನಿಲ ಚಿತಾಗಾರ ಸ್ಥಗಿತಗೊಂಡಿದೆ. ಈ ಸಂಬಂಧ ಯಂತ್ರೋಪಕರಣ ಕೆಟ್ಟು ನಿಂತಿದ್ದರೂ ದುರಸ್ತಿಗೊಳಿಸಿಲ್ಲ. ವರ್ಷಗಳೇ ಉರುಳುತ್ತಿದ್ದರೂ ಅನಿಲ ಚಿತಾಗಾರದ ಯಂತ್ರಗಳನ್ನು ದುರಸ್ತಿ ಮಾಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಈ ಹಿಂದಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮುಕ್ತಿಧಾಮವನ್ನು ನಿರ್ಮಿಸಿ 2026ರಲ್ಲಿ ಸೇವೆ ಸಮರ್ಪಿಸಲಾಯಿತು. ಬಳಿಕ ಪಾಲಿಕೆ ಸುಪರ್ದಿಗೆ ಬಂದಿದ್ದು, ಗುತ್ತಿಗೆಯಡಿ ಇದು ಕಾರ್ಯನಿರ್ವಹಿಸುತ್ತಿದೆ. ಇಲ್ಲಿ 2 ವಿದ್ಯುತ್ ಚಿತಾಗಾರ ಹಾಗೂ 6 ಸೌದೆ ಚಿತಾಗಾರ ಕಾರ್ಯಾಚರಣೆಯಲ್ಲಿದ್ದು, ಅನಿಲ ಚಿತಾಗಾರ ಮಾತ್ರ ಇದ್ದೂ ಬಳಕೆಗೆ ಬಾರದಾಗಿದೆ.



ಕುವೆಂಪುನಗರ ಕೆ ಬ್ಲಾಕ್‌ನಲ್ಲಿರುವ ಅನಿಲ ಚಿತಾಗಾರ

ಮಾ.15ಕ್ಕೆ ಡಿಆರ್‌ಸಿಯಲ್ಲಿ ಮೈಸೂರು ನಿರ್ದೇಶಕರ 'ಮಂಡಲ', 'ಐ ಸೀ ಯೂ' ಕಿರುಚಿತ್ರಗಳ ಪ್ರದರ್ಶನ






ರಿಷಿ ರಾಮನ್


ಮಿಂಚು ಜೋಷಿ

ಮೈಸೂರು, ಮಾ.12(ಎಂಕೆ)– ಮೈಸೂರಿನ ಜನಪ್ರಿಯ ಡಿಆರ್‌ಸಿ ಸಿನಿಮಾಸ್‌ನಲ್ಲಿ ಮಾ.15ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 12ರವರೆಗೆ ಮೈಸೂರಿನ ರಿಷಿ ರಾಮನ್ ಮತ್ತು ಮಿಂಚು ಜೋಶಿ ನಿರ್ದೇಶನದ 'ಮಂಡಲ' ಹಾಗೂ 'ಐ ಸೀ ಯೂ' ಕಿರುಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿದೆ.

ಬೈ/2 ವಿಶಿಷ್ಟ ರೀತಿಯಲ್ಲಿ ಈ ಎರಡು ಕಿರುಚಿತ್ರಗಳನ್ನು ಒಂದೇ ಸ್ಕ್ರೀನ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಎರಡೂ ಕಿರುಚಿತ್ರಗಳು ಈಗಾಗಲೇ ಸ್ಥಳೀಯ ಸಿನಿಮಾ ಪ್ರೇಕ್ಷಕರಲ್ಲಿ ಸಾಕಷ್ಟು ಕುತೂಹಲವನ್ನು ಹುಟ್ಟುಹಾಕಿದ್ದು, ವೀಕ್ಷಿಸಲು ಆಸಕ್ತಿ ಹೊಂದಿರುವವರು ತಮ್ಮ ಹೆಸರುಗಳನ್ನು ವಾಟ್ಸಾಪ್ ನಂಬರ್– 91876–71658 ಮೂಲಕ ಉಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬಹುದಾಗಿದೆ. ಪ್ರವೇಶ ಮೊದಲು ಬಂದವರಿಗೆ ಮೊದಲ ಆದ್ಯತೆ ಆಧಾರದ ಮೇಲೆ ಇರುತ್ತದೆ.

ಕಿರುಚಿತ್ರಗಳ ಕುರಿತು: ಬರ್ಲಿನ್‌ನಲ್ಲಿ ಚಿತ್ರೀಕರಿಸಲಾದ ರಿಷಿ ರಾಮನ್ ಅವರ 'ಮಂಡಲ' ಕಿರುಚಿತ್ರ ದೃಶ್ಯಾತ್ಮಕವಾಗಿ ಗಮನಾರ್ಹವಾದ ಥ್ರಿಲ್ಲರ್ ಸನ್ನಿವೇಶಗಳಿಂದ ಕೂಡಿದ್ದು, ವಾಸ್ತವ ಮತ್ತು ಮಾನಸಿಕ ಒತ್ತಡಗಳ ಕುರಿತು ಗಮನ ಸೆಳೆಯಲಿದೆ.

ಹಾಗೆಯೇ ಮುಂಬೈ ಮತ್ತು ಬೆಂಗಳೂರಿನಲ್ಲಿ ಚಿತ್ರೀಕರಿಸಲಾದ ಮಿಂಚು ಜೋಷಿ ಅವರ 'ಐ ಸೀ ಯೂ' ಕಿರುಚಿತ್ರವೂ ಸೂಕ್ಷ್ಮ ಅನ್ವೇಷಣೆಯೊಂದಿಗೆ ಭಾವನಾತ್ಮಕವಾಗಿ ಸೆಳೆಯಲಿದೆ. ಚಿತ್ರದ ಪ್ರತಿಯೊಂದು ಸನ್ನಿವೇಶಗಳನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಚಿತ್ರೀಕರಿಸಲಾಗಿದೆ.

ನಿರ್ದೇಶಕರಾದ ರಿಷಿ ರಾಮನ್ ಮತ್ತು ಮಿಂಚು ಜೋಶಿ, ಹೊಸ ಪೀಳಿಗೆಯ ನಿರ್ದೇಶಕರ ಸೃಷ್ಟಿಗೆ ಬುನಾದಿ ಹಾಕಿದ್ದು ತಮ್ಮಲ್ಲಿ ಸೃಜನಶೀಲತೆ ಮತ್ತು ಕೌಶಲ್ಯತೆಗಳಿಂದ ಸಾಂಪ್ರದಾಯಿಕ ಸ್ಟುಡಿಯೋ ವ್ಯವಸ್ಥೆಯ ಹೊರಗೆ ಮೂಲ ಕಥೆಗಳನ್ನು ಬರೆಯುವುದು, ನಿರ್ದೇಶಿಸುವುದು, ನಟಿಸುವುದು ಮತ್ತು ನಿರ್ಮಿಸುವುದು ಸೇರಿದಂತೆ ಬಹು ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ.

ಗಾನಯೋಗಿ ಪಂಚಾಕ್ಷರಿ ಗವಾಯಿಗಳ ಜಯಂತ್ಯೋತ್ಸವ





ಮೈಸೂರು,ಮಾ.12(ಜಿಎ)–ಗಾನಯೋಗಿ ಕಲಾ ಟ್ರಸ್ಟ್ ವತಿಯಿಂದ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ 135ನೇ, ಡಾ.ಪುಟ್ಟರಾಜ ಕವಿ ಗವಾಯಿಯವರ 112ನೇ ಜಯಂತ್ಯೋತ್ಸವ, ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವ ಕಾರ್ಯಕ್ರಮ ಮಾ.15 ರಂದು ಬೆಳಗ್ಗೆ 10 ಗಂಟೆಗೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವ ಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಹೆಚ್.ಎನ್.ಲೋಕೇಶಪ್ಪ ಈ ವಿಷಯ ತಿಳಿಸಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕಲ್ಲಯ್ಯ ಸ್ವಾಮೀಜಿ ಸ'ವ'ು ಖ'ದ' ಲ್ಲಿ ಡಾ.ಎಂ.ವೆಂಕಟೇಶ್ ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಟ್ರಸ್ಟ್ ಗೌರವಾಧ್ಯಕ್ಷ ಮ.ಗು. ಸದಾನಂದಯ್ಯ ಅಧ್ಯಕ್ಷತೆ ವಹಿಸುವರು. ಎಂ.ಕಲ್ಲಿನಾಥ್‌ಶಾಸ್ತ್ರಿ ಅಡ್ನೂರ, ಶ್ರೀಕಂಠ ಸ್ವಾಮೀಜಿ, ಡಾ.ಶರತ್‌ಚಂದ್ರ ಸ್ವಾಮೀಜಿ, ತೋಂಟದಾರ್ಯ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮ.ಗು. ಸದಾನಂದಯ್ಯ, ಪ್ರಸಾದ್, ಪ್ರಸನ್ನ ಕುಮಾರ್ ಉಪಸ್ಥಿತರಿದ್ದರು.

ಬ್ರಾಹ್ಮಣ ಯುವಕ–ಯುವತಿಯರ ಸಕಾಲದಲ್ಲಿ ವಿವಾಹಕ್ಕಾಗಿ ವಿಶೇಷ ಹೋಮ ಕಾರ್ಯಕ್ರಮ

ಮೈಸೂರು, ಮಾ.12(ಜಿಎ)–ಕೆಲವು ವರ್ಷಗಳಲ್ಲಿ ತ್ರಿಮತಸ್ಥ ಬ್ರಾಹ್ಮಣ ಯುವಕ–ಯುವತಿಯರು ಸಕಾಲದಲ್ಲಿ ವಿವಾಹ ಸಾಧ್ಯವಾಗದೇ ಪರಿತಪಿಸುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಧಾರ್ಮಿಕ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶಾಕಾಂಬರಿ ಧಾರ್ಮಿಕ ಕೇಂದ್ರ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾ ಸಂಯುಕ್ತಾಶ್ರಯದಲ್ಲಿ ನಗರದಲ್ಲಿ ಶೀಘ್ರದಲ್ಲೇ ಬೀಜ ಮಂತ್ರ ಪಠಣದೊಂದಿಗೆ 'ಶಚೀ ಪುರಂದರ ದೇವತಾ ಪೂಜೆಯೊಂದಿಗೆ ಮಾಂಗಲ್ಯ ಸಿದ್ಧಿ ಸೀತಾ ಸ್ವಯಂವರ ಹೋಮ' ಸಾಮೂಹಿಕವಾಗಿ ಆಯೋಜಿಸಲಾಗುತ್ತಿದೆ ಎಂದು ಹಿರಿಯ ಸಮಾಜ ಸೇವಕರಾದ ರಘುರಾಂ ವಾಜಪೇಯಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ಸಾಮಾಜಿಕ ಮೊದಲಾದ ಬೆಳವಣಿಗೆ, ಧಾರ್ಮಿಕ ಶ್ರದ್ಧೆ, ಧಾರ್ಮಿಕ ಆಚರಣೆ, ಧಾರ್ಮಿಕ ನಡವಳಿಕೆ ಕಡಿಮೆ ಆಗಿರುವುದು ಸಹಾ ಈ ಸಮಸ್ಯೆಗೆ ಪ್ರಮುಖ ಕಾರಣ ಎನ್ನಬಹುದಾಗಿದೆ. ಹೀಗಾಗಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಶೀಘ್ರದಲ್ಲೇ ಆಯೋಜಿಸಲಿದ್ದು, ಸ್ಥಳವನ್ನು ಸಹಾ ನಂತರದ ದಿನಗಳಲ್ಲಿ ತಿಳಿಸಲಾಗುವುದು. ಹೀಗಾಗಿ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಯುವಕ, ಯುವತಿಯರು ಪಾಲ್ಗೊಳ್ಳಬೇಕೆಂದು ಸಲಹೆ ನೀಡಿದರು.

ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್. ನಟರಾಜ ಜೋಯಿಸ್ ಮಾತನಾಡಿ, ಈ ಕಾರ್ಯಕ್ರಮವು ಬ್ರಾಹ್ಮಣ ಸಮುದಾಯದ ಯುವಕ, ಯುವತಿಯರ ಪುರೋಭಿವೃದ್ಧಿಗಾಗಿ ಆಯೋಜನೆಗೊಳ್ಳುತ್ತಿದೆ. ಜಾತಕ ಫಲಗಳಿಂದ ನಕ್ಷತ್ರ ದೋಷ, ಗುರು ದೋಷ, ಗೋತ್ರಾದಿಗಳ ಒಗ್ಗೂಡುವಿಕೆ ಅಡಚಣೆಯಂತಹ ನಾನಾ ರೀತಿಯ ತೊಂದರೆಗಳಿಗೆ ಧಾರ್ಮಿಕ ಪರಿಹಾರ ದೊರಕಿಸುವ ಉದ್ದೇಶ ಹೊಂದಿದೆ. ಹೆಚ್ಚಿನ ಮಾಹಿತಿಗೆ ದೂ. 80887 99540 ಸಂಪರ್ಕಿಸಿ ಎಂದರು.

ಗೋಷ್ಠಿಯಲ್ಲಿ ಸುರೇಶ್, ಅಶೋಕ್, ಉಷಾ ಮತ್ತಿತರರು ಉಪಸ್ಥಿತರಿದ್ದರು.

ವರಕೋಡು ಶ್ರೀ ಬೀರೇಶ್ವರ ಸ್ವಾಮಿ ಅದ್ದೂರಿ ಉತ್ಸವ

● 101 ಹೆಣ್ಣು ಮಕ್ಕಳಿಂದ ಕಳಸ, ಕಲಾ ತಂಡಗಳೊಂದಿಗೆ ಮೆರವಣಿಗೆ ● ಇಂದು ಮುಖ್ಯಮಂತ್ರಿಗಳಿಂದ ದೇವಾಲಯ ಉದ್ಘಾಟನೆ


ವರಕೋಡು ಗ್ರಾಮದ ಶ್ರೀ ಬೀರೇಶ್ವರಸ್ವಾಮಿ ದೇವಾಲಯದಲ್ಲಿ ಗುರುವಾರ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿರುವುದು.


ಪೂಜಾ ಮಹೋತ್ಸವದ ಅಂಗವಾಗಿ ಭಕ್ತರಿಗೆ ಪ್ರಸಾದ ವಿತರಿಸುತ್ತಿರುವುದು


ಮೈಸೂರು ತಾಲೂಕಿನ ವರಕೋಡು ಶ್ರೀ ಬೀರೇಶ್ವರ ಸ್ವಾಮಿ ದೇವಾಲಯದ ಮುಂದೆ ವೀರಮಕ್ಕಳು ಕುಣಿಯುತ್ತಿರುವುದು.

ಮೈಸೂರು, ಮಾ.12(ಎಂಟಿವೈ)– ಮೈಸೂರು ತಾಲೂಕಿನ ವರಕೋಡು ಶ್ರೀ ಬೀರೇಶ್ವರಸ್ವಾಮಿ ದೇವಾಲಯ ಪುನರ್ ಪ್ರತಿಷ್ಠಾಪನೆ, ಕುಂಭಾ ಭಿಷೇಕದ ಪೂಜಾ ಮಹೋತ್ಸವದ ಅಂಗವಾಗಿ ಗುರುವಾರ ಕಳಸಹೊತ್ತ ನೂರೊಂದು ಹೆಣ್ಣು ಮಕ್ಕಳೊಂದಿಗೆ ಗಡಿಗ್ರಾಮದ ಪೂಜೆ, ಬಸವನ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ವರಕೋಡು ಗ್ರಾಮದಲ್ಲಿದ್ದ ಹಳೆಯ ದೇವಾಲಯನ್ನು ಕೆಡವಿ ಹೊಸದಾಗಿ ಪುನರ್ ನಿರ್ಮಿಸಲಾಗಿದ್ದು, ಮಾ.10ರಿಂದ ವಿವಿಧ ಧಾರ್ಮಿಕ ಕಾರ್ಯ ಜರುಗುತ್ತಿವೆ. ಧಾರ್ಮಿಕ ಕಾರ್ಯದ ಮೂರನೇ ದಿನವಾದ ಗುರುವಾರ ಬೆಳಗ್ಗಿನಿಂದಲೇ ಅರ್ಚಕ ಗಣೇಶ್ ದೀಕ್ಷಿತ್ ನೇತೃತ್ವದಲ್ಲಿ ಪೂಜಾ ಕೈಂಕರ್ಯ ಜರುಗಿತು.

ಬಳಿಕ ಬೆಳಗ್ಗೆ 11 ಗಂಟೆಗೆ ದೇವಾಲಯದಿಂದ 3 ಕಿಮಿ ದೂರದಲ್ಲಿರುವ ವರಕೋಡಿನ ಪುರಾತನ ಕಲ್ಯಾಣಿಯಿಂದ ಮೂಡಲಹುಂಡಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ ಗ್ರಾಮದ 101 ಚಿಕ್ಕ ಚಿಕ್ಕ ಹೆಣ್ಣು ಮಕ್ಕಳಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿದ ಕಳಸವನ್ನು ಹೊರಿಸಿ ಮಜ್ಜನದ ಮೆರವಣಿಗೆ ನಡೆಸಲಾಯಿತು.

ಹಾಲರವಿ ಮೆರವಣಿಗೆಯಲ್ಲಿ ದುದ್ದಗೆರೆ, ತಾಯೂರು, ಸಿದ್ದರಾಮನಹುಂಡಿ, ಕಾಳಿಸಿದ್ದನಹುಂಡಿ, ಬಿದರಹಳ್ಳಿಹುಂಡಿ, ಅಹಲ್ಯಗಡಿ ಗ್ರಾಮದ ದೇವರಕೂಟ, ಪೂಜೆ, ಬಸವ ಹಾಗೂ ವೀರಮಕ್ಕಳು ಪಾಲ್ಗೊಂಡಿದ್ದರು. ಇದರೊಂದಿಗೆ ಖೇಲು ಬಸವ ದೇವರ ಮೇಲೆ ಮಜ್ಜನ, ನಂದಿ ಧ್ವಜ, ಪೂಜಾ ಕುಣಿತ, ಬಸವ ಸತ್ತಿಗೆ ಸೂರಿಪಾನಿ, ಕಂಸಾಳೆ, ಗೊಂಬೆ ಕುಣಿತ, ಪೂಜಾ ಕುಣಿತ, ಎರವರ ಕುಣಿತ, ತಮಟೆ ವಾದನ, ಮಂಗಳ ವಾದ್ಯ, ನಗಾರಿ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಜಾತ್ರಾ ಮೆರಗು ಹೆಚ್ಚಿಸಿದವು. ನಂತರ ಬೀರೇಶ್ವರ ದೇವಾಲಯದಲ್ಲಿ ವಿವಿಧ ಹೋಮ ನೆರವೇರಿಸಲಾಯಿತು.

ಪೂಜಾ ಮಹೋತ್ಸವದ ಅಂಗವಾಗಿ ಬೆಳಗ್ಗೆ 11 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ದೇವಾಲಯಕ್ಕೆ ಬರುವ ಭಕ್ತರಿಗೆ ನಿರಂತರವಾಗಿ ಪ್ರಸಾದ ವಿತರಣೆ ಮಾಡಲಾಯಿತು. ಮೈಸೂರು, ಬೆಂಗಳೂರು, ಶಿವಮೊಗ್ಗ, ದಾವಣಗೆರೆ ಸೇರಿದಂತೆ ವಿವಿಧೆಡೆ ಭಕ್ತರು ದೇವಾಲಯಕ್ಕೆ ಆಗಮಿಸಿದ್ದು, ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಿದ್ದಾರೆ.

ರಾತ್ರಿ 8ರಿಂದ ಮೂಡಲಹುಂಡಿಯ ಸಂಗೊಳ್ಳಿ ರಾಯಣ್ಣ ಕೃಪಾಪೋಷಿತ ಕಲಾ ಮಂಡಳಿ ವತಿಯಿಂದ 'ದಕ್ಷಯಜ್ಞ' ಅಥವಾ 'ಭೃಗು ಮುನಿಯ ಗರ್ವಭಂಗ' ಪೌರಾಣಿಕ ನಾಟಕ ಪ್ರದರ್ಶನ ಜರುಗಿತು. ವಿವಿಧೆಡೆಯಿಂದ ಬಂದು ದೇವಾಲಯದ ಆವರಣದಲ್ಲಿ ಬೀಡು ಬಿಟ್ಟಿದ್ದ ಅಪಾರ ಸಂಖ್ಯೆಯ ಭಕ್ತರು ಪೌರಾಣಿಕ ನಾಟಕ ವೀಕ್ಷಿಸಿ ಸಂಭ್ರಮಿಸಿದರು.

ಮಾ.13ರಂದು ಮುಂಜಾನೆ 5.10 ರಿಂದ 6.10ರೊಳಗೆ ಸಲ್ಲುವ ಬ್ರಾಹ್ಮಿ ಮುಹೂರ್ತದಲ್ಲಿ ಬೀರೇಶ್ವರಸ್ವಾಮಿ ಲಿಂಗ ಪ್ರತಿಷ್ಠಾಪನೆ, ಕುಂಭ ಕಳಸ ಪ್ರತಿಷ್ಠಾಪನೆ, ಕುಂಭಾಭಿಷೇಕ ನೆರವೇರಲಿದೆ. ಶುಕ್ರವಾರ ಬೆಳಗ್ಗೆ 11.40ಕ್ಕೆ ಕಾಗಿನೆಲೆ ಮಹಾಸಂಸ್ಥಾನದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೂತನ ದೇವಾಲಯ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವ ಭೈರತಿ ಸುರೇಶ್, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ನಡೆಯಲಿದೆ. ಮಾ.14ರಂದು ಬೆಳಗ್ಗೆ 9 ಗಂಟೆಗೆ ಕೂಟ ವಿಸರ್ಜನೆಯಾಗಲಿದೆ.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಮೂಡಲಹುಂಡಿ ಎಂ.ಟಿ.ರವಿಕುಮಾರ್, ಮುದ್ರಾಮೇಗೌಡ, ಮುಖಂಡರಾದ ಶಿವನಂಜೇಗೌಡ, ಶಿವಣ್ಣ, ಸ್ವಾಮಿ, ಬೀರಪ್ಪ, ಬಸವರಾಜು, ಉಮೇಶ್, ಮಹದೇವ್, ಬಸವಣ್ಣ, ಮಲ್ಲರಾಜನುಂಡಿ ರವಿ ಹಾಗೂ ಸುತ್ತಮುತ್ತಲಿನ ಐದು ಗ್ರಾಮಗಳ ಗಡಿಯ ಯಜಮಾನರು, ಮುಖಂಡರು, ಅಪಾರ ಸಂಖ್ಯೆಯ ಭಕ್ತಾದಿಗಳು ಪಾಲ್ಗೊಂಡಿದ್ದರು.

ಮಾ.16ಕ್ಕೆ ಡಿ.ಸಾಲುಂಡಿಯಲ್ಲಿ ಅಕ್ರಮ ಮದ್ಯ ಮಾರಾಟದ ವಿರುದ್ಧ ಪ್ರತಿಭಟನೆ


ಡಿ.ಸಾಲುಂಡಿಯಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿರುವ ಸಂಬಂಧ ರೈತ ಘಟಕದ ಪದಾಧಿಕಾರಿಗಳು ಸಭೆ ನಡೆಸಿದರು.

ಮೈಸೂರು, ಮಾ. 12– ಮೈಸೂರು ತಾಲೂಕಿನ ಡಿ. ಸಾಲುಂಡಿ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರು, ಅಕ್ಕಪಕ್ಕದ ಮನೆಯವರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಸಂಬಂಧ ಕರ್ನಾಟಕ ರಾಜ್ಯ ರೈತ ಸಂಘ, ಡಿ. ಸಾಲುಂಡಿ ಘಟಕದ ಪದಾಧಿಕಾರಿಗಳು ಕಳೆದ 15 ದಿನಗಳ ಹಿಂದೆಯೇ ಅಬಕಾರಿ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಜಯಪುರ ಪೊಲೀಸ್ ಠಾಣೆ ಅಧಿಕಾರಿಗಳಿಗೆ ದೂರು ಸಲ್ಲಿಸಲಾಗಿತ್ತು. ಆದರೂ ಇದರ ಬಗ್ಗೆ ಯಾವುದೇ ಅಧಿಕಾರಿಗಳು ಕ್ರಮ ಕೈಗೊಳ್ಳಲಿಲ್ಲ. ಈ ಸಂಬಂಧ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆ ನಡೆಸಿ ಚರ್ಚಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ಮರಂಕಯ್ಯ, ಜಿಲ್ಲಾ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಸಾಲುಂಡಿ ಬಸವರಾಜು, ಗ್ರಾಮ ಘಟಕದ ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಮಾಲೇಗೌಡ, ಉಪಾಧ್ಯಕ್ಷ ಚಿಕ್ಕಣ್ಣ, ಬಿ.ಜಿ. ಬಸವರಾಜು, ಎನ್.ಡಿ. ಬಸವರಾಜು, ಶಂಕರ್, ಜೆ. ಬಸವರಾಜು, ಯಶ್ವಂತ್‌ಕುಮಾರ್, ಮನು, ಭಾಸ್ಕರ್ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದು, ಮಾ.16ರಂದು ಜಯಪುರ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು.

ಮೈಸೂರಿನ ವಿದ್ಯಾರ್ಥಿಗಳು ನಿರ್ಮಿತ ದೇಶದ ಮೊದಲ ಎಐ ಗಣಿತ ವೇದಿಕೆ ಲೋಕಾರ್ಪಣೆ

ಮೈಸೂರು, ಮಾ.12(ಜಿಎ)–ಮೈಸೂರಿನ ಲರ್ನರ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ವತಿಯಿಂದ ಶಿಕ್ಷಣ ಸಂಸ್ಥೆಯ ಲರ್ನರ್ಸ್ ಡಿಜಿಟಲ್ ವಿದ್ಯಾರ್ಥಿ ಇಂಟರ್ನ್‌ಗಳು ನಿರ್ಮಿತ ದೇಶದ ಮೊದಲ ಕೃತಕ ಬುದ್ಧಿಮತ್ತೆಯ ಗಣಿತ ವೇದಿಕೆ ಲೋಕಾರ್ಪಣೆ ಸಮಾರಂಭ ಮಾ.14 ರಂದು ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ ಎಂದು ವ್ಯವಸ್ಥಾಪಕ ಕೇಶವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೇದಿಕೆಗೆ ಸ್ಕಿಲ್ 100 ಎಂದು ಹೆಸರಿಡಲಾಗಿದ್ದು, ಒಂದನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಗಣಿತ ಕಲಿಕೆಗೆ ಸಹಕಾರಿಯಾಗಲಿದೆ. ಬಿಡುಗಡೆ ಕಾರ್ಯಕ್ರಮದಲ್ಲಿ ಚಿಕಾಗೋ ಟಿಸಿಎಸ್‌ನ ಮರಿಯದಾಸ್, ನಿವೃತ್ತ ಅಧ್ಯಾಪಕ ಡಾ.ಕೆ.ವಿಜಯಕುಮಾರ್ ಉಪಸ್ಥಿತರಿರಲಿದ್ದಾರೆ ಎಂದರು.

ಈ ವೇದಿಕೆಯು ಎಐ ಮಾರ್ಗದರ್ಶಿ, ಹಂತ ಹಂತದ ಸಮಸ್ಯೆ ಪರಿಹಾರ, ಅಳವಡಿಕೆಯ ಅಭ್ಯಾಸ, ತಕ್ಷಣದ ಪ್ರತಿಕ್ರಿಯೆ ಮೂಲಕ ಗಣಿತ ಪ್ರಾವೀಣ್ಯತೆ ಗಳಿಸಿಕೊಳ್ಳುವುದನ್ನು ಒಳಗೊಂಡಂತೆ ವಿನ್ಯಾಸಗೊಂಡಿದೆ. ಅಂದಿನ ಕಾರ್ಯಕ್ರಮಕ್ಕೆ ಆಗಮಿಸುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಪರೀಕ್ಷೆ ಹಾಗೂ ತಿಳಿವಳಿಕೆ ಕಾರ್ಯಕ್ರಮ ಮೂಲಕ ಲಾಗಿನ್ ಐಡಿ, ಪಾಸ್‌ವರ್ಡ್ ನೀಡಲಾಗುವುದು. ಇದನ್ನು ಬಳಸಿಕೊಂಡು ಕುತೂಹಲದಾಯಕವಾಗುವ ರೀತಿಯಲ್ಲಿ ತಮ್ಮ ಗಣಿತ ಕಲಿಕೆಯಲ್ಲಿ ತೊಡಗಿಸಿಕೊಳ್ಳಬಹುದಾಗಿದೆ. ಇದು ಶೈಕ್ಷಣಿಕ ಗುಣಮಟ್ಟ ಸುಧಾರಣೆಗೂ ನೆರವಾಗಲಿದೆ ಎಂದರು. ಇಂಟರ್ನ್‌ಗಳಾದ ಹೇಮಶ್ರೀ, ಹಾರ್ದಿಕ್, ಅಭಿನವ್ ಇದ್ದರು.

ಹಳೇ ಕೆಸರೆಯ ಘನತ್ಯಾಜ್ಯ ಘಟಕಕ್ಕೆ ಬೆಂಕಿ



ಮೈಸೂರು,ಮಾ.12(ಪಿಎಂ)– ಹಳೇ ಕೆಸರೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಗುರುವಾರ ಸಂಜೆ ಬೆಂಕಿ ಧಗದಗಿಸಿದೆ.

ಸದರಿ ಘಟಕದ ಹಿಂಭಾಗದಲ್ಲಿ ಒಣ ಹುಲ್ಲಿಗೆ ಯಾರೋ ಹಾಕಿದ್ದ ಬೆಂಕಿಯು ಇಲ್ಲಿನ ತ್ಯಾಜ್ಯಕ್ಕೂ ಹರಡಿದೆ. ಪರಿಣಾಮ ಭಾರೀ ಹೊಗೆಯೊಂದಿಗೆ ಘಟಕದಲ್ಲಿದ್ದ ಪೇಪರ್, ಪ್ಲಾಸ್ಟಿಕ್ ಸೇರಿದಂತೆ ಇನ್ನಿತರೆ ತ್ಯಾಜ್ಯವು ಅಗ್ನಿಗಾಹುತಿಯಾಗಿದೆ. ಸುಮಾರು 500 ಟನ್‌ನಷ್ಟು ತ್ಯಾಜ್ಯದ ಪೈಕಿ ಸಾಕಷ್ಟು ತ್ಯಾಜ್ಯ ಸುಟ್ಟು ಕರಕಲಾಗಿದೆ.

ಪ್ಲಾಸ್ಟಿಕ್ ತ್ಯಾಜ್ಯದಿಂದ ಬೆಂಕಿ ಜ್ವಾಲೆ ಹೆಚ್ಚಾಗಿತ್ತು. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಮೇಶ್ ನೇತೃತ್ವದಲ್ಲಿ 30 ಮಂದಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ನಾಲ್ಕು ಅಗ್ನಿಶಾಮಕ ವಾಹನಗಳು ಹಾಗೂ ಜೆಸಿಬಿಯೊಂದಿಗೆ ಸಂಜೆಯಿಂದ ತಡರಾತ್ರಿಯವರೆಗೂ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಲಾಯಿತು. ಅದೃಷ್ಟವಶಾತ್ ಯಾರಿಗೂ ಯಾವುದೇ ಅಪಾಯವಾಗಿಲ್ಲ.

ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ



ಮೈಸೂರು,ಮಾ.12(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾ. 13ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಗ್ಗೆ 11ಕ್ಕೆ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ನಿರ್ಗಮಿಸುವ ಅವರು, 11.40ಕ್ಕೆ ವರುಣ ಹೋಬಳಿಯ ವರಕೋಡು ಗ್ರಾಮದ ಹೆಲಿಪ್ಯಾಡ್‌ಗೆ ಆಗಮಿಸಲಿದ್ದಾರೆ.

ಬಳಿಕ ಇಲ್ಲಿ ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ವತಿಯಿಂದ ಆಯೋಜಿಸಿರುವ ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣ, ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಮಹಾದ್ವಾರ ಪೂಜಾ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿರುವ ಅವರು, ಮಧ್ಯಾಹ್ನ 2ಕ್ಕೆ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ

ಸಿಲಿಂಡರ್ ಅಭಾವ: ಸೌದೆಗಾಗಿ ಮರಗಳ ಹನನದ ಭೀತಿ; ಕಟ್ಟೆಚ್ಚರಕ್ಕೆ ಅರಣ್ಯ ಸಚಿವರ ಸೂಚನೆ



ಬೆಂಗಳೂರು, ಮಾ.13– ಎಲ್‌ಪಿಜಿ ಸಿಲಿಂಡರ್ ಅಭಾವದಿಂದ ಸೌದೆಗೆ ಬೇಡಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮರಗಳ ಹನನದ ಭೀತಿ ಎದುರಾಗಿದೆ.

ಈ ಹಿನ್ನೆಲೆಯಲ್ಲಿ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಕಾಡು, ಕಾಡಂಚು ಸೇರಿದಂತೆ ಸರ್ಕಾರಿ ಭೂಮಿಯಲ್ಲಿ ಮರಗಳ ಅಕ್ರಮ ಕಡಿತಲೆ ಆಗದಂತೆ ಕಟ್ಟೆಚ್ಚರ ವಹಿಸಲು ಸೂಚಿಸಿದ್ದಾರೆ. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಿಗೆ ಲಿಖಿತ ಸೂಚನೆ ನೀಡಿರುವ ಸಚಿವರು, ಸಿಲಿಂಡರ್ ಅಭಾವದ ಬಿಸಿ ಕರ್ನಾಟಕಕ್ಕೂ ತಟ್ಟಿದ್ದು ಹೋಟೆಲ್, ರೆಸಾರ್ಟ್, ಹೋಂ ಸ್ಟೇಗಳಿಗೆ ವಾಣಿಜ್ಯ ಸಿಲಿಂಡರ್ ದೊರಕದೆ ಸಮಸ್ಯೆ ಆಗಿದ್ದರೆ, ಗೃಹ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲೂ ವ್ಯತ್ಯಯ ಆಗಿರುವುದರಿಂದ ಸೌದೆಗಾಗಿ ಅಕ್ರಮ ಮರ ಕಡಿತಲೆ ಆಗದಂತೆ ಗಸ್ತು, ನಿಗಾ ಹೆಚ್ಚಿಸಲು ಆದೇಶಿಸಿದ್ದಾರೆ.

ಅರಣ್ಯ ಇಲಾಖೆಯ ಎಲ್ಲಾ ವೃತ್ತದ ಎಲ್ಲಾ ವಲಯಗಳಲ್ಲೂ ಸೂಕ್ತ ಗಸ್ತು ಮತ್ತು ಮುಂಜಾಗರೂಕತೆ ಕ್ರಮ ಕೈಗೊಳ್ಳಲು ಸೂಚಿಸಿರುವ ಅವರು ಒಂದೊಮ್ಮೆ ಅರಣ್ಯ, ಸರ್ಕಾರಿ ಜಮೀನಿನಲ್ಲಿ ಅಕ್ರಮ ಮರ ಕಡಿತಲೆ ಆದರೆ ಸಂಬಂಧಿತ ವಲಯದ ಅಧಿಕಾರಿ, ಸಿಬ್ಬಂದಿಯನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ದೇಶ – ವಿದೇಶ

ಕಲಬೆರಕೆ ಹಾಲು ಬಳಕೆ; 13 ಮಂದಿ ಸಾವು!



ಆಂಧ್ರಪ್ರದೇಶ: ಕಲಬೆರಿಕೆಯಾಗಿದ್ದ ಹಾಲು ಕುಡಿದ ಪರಿಣಾಮ 13 ಜನ ಮೃತಪಟ್ಟಿದ್ದು, 11 ಜನ ಗಂಭೀರ ಸ್ಥಿತಿಯಲ್ಲಿರುವ ಘಟನೆ ಆಂಧ್ರಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯಲ್ಲಿ ವರದಿಯಾಗಿದೆ. ಕಳೆದ ಫೆ.22ರಂದು ಹಲವಾರು ವೃದ್ಧರು ವಾಂತಿ, ಹೊಟ್ಟೆನೋವು ಮತ್ತು ಮೂತ್ರಪಿಂಡದ ಕಾಯಿಲೆಗೆ ತುತ್ತಾಗಿದ್ದರ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಿದ ವೇಳೆ ಈ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದೆ. ಘಟನೆಯ ನಂತರ ಹಾಲಿನ ಮಾದರಿಗಳನ್ನು ವಿವರವಾದ ಪರೀಕ್ಷೆಗೆ ಕಳುಹಿಸಿದಾಗ ಅದರಲ್ಲಿ ಹಾನಿಕಾರಕ ರಾಸಾಯನಿಕಗಳು ಪತ್ತೆಯಾಗಿದ್ದು, ಹಾಲು ಕಲುಷಿತಗೊಂಡಿರುವುದು ದೃಢವಾಗಿದೆ. ಪೀಡಿತರ ರಕ್ತದಲ್ಲಿ ಯೂರಿಯಾ ಮತ್ತು ಸೀರಮ್ ಕ್ರಿಯೇಟಿನೈನ್ ಹೆಚ್ಚಾಗಿರುವುದು ಕಂಡುಬಂದಿದ್ದು, ಇದು ಕಲಬೆರಿಕೆಯಾದ ಹಾಲನ್ನು ಸೇವಿಸಿದಕ್ಕೆ ಸಾಕ್ಷಿಯಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೀಡಿತ ಪ್ರದೇಶಗಳಲ್ಲಿ ತುರ್ತು ವೈದ್ಯಕೀಯ ಶಿಬಿರಗಳನ್ನು ಸ್ಥಾಪಿಸಲಾಗಿದೆ. ವರಲಕ್ಷ್ಮಿ ಮಿಲ್ಕ್ ಡೈರಿಯಿಂದ ಸುಮಾರು 106 ಕುಟುಂಬಗಳಿಗೆ ಹಾಲು ಸರಬರಾಜು ಮಾಡಲಾಗಿರುವ ವಿಷಯ ಪ್ರಾಥಮಿಕ ವರದಿಯಲ್ಲಿ ತಿಳಿದ ಕೂಡಲೇ ಪೂರೈಕೆಯನ್ನು ತಕ್ಷಣವೇ ನಿಲ್ಲಿಸಿ, ಮಾಲೀಕನನ್ನು ವಶಕ್ಕೆ ಪಡೆಯಲಾಗಿದೆ. ಘಟನೆ ಹಿನ್ನೆಯಲ್ಲಿ ಹಾಲು ಆಧಾರಿತ ಉತ್ಪನ್ನಗಳನ್ನು ಮಾರಾಟ ಮಾಡುವ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಆಹಾರ ಸುರಕ್ಷತಾ ತಂಡಗಳು ರಾಜ್ಯಾದ್ಯಂತ ತಪಾಸಣೆ ನಡೆಸಿವೆ.

'ಸೇಫ್‌ಸೀ ವಿಷ್ಣು' ತೈಲ ಟ್ಯಾಂಕರ್ ಮೇಲೆ ಇರಾನ್ ದಾಳಿ: ಭಾರತೀಯ ಸಾವು



ನ್ಯೂಯಾರ್ಕ್: ಇರಾಕ್ ಬಳಿ ಸ್ಫೋಟಕಗಳನ್ನು ತುಂಬಿದ ದೋಣಿಯನ್ನು ಅಮೆರಿಕದ ಮಾಲೀಕತ್ವ ಹೊಂದಿರುವ ತೈಲ ಟ್ಯಾಂಕರ್‌ಗೆ ಡಿಕ್ಕಿ ಹೊಡೆಸಿದ ಘಟನೆಯಲ್ಲಿ ಭಾರತೀಯ ಮೂಲದ ವ್ಯಕ್ತಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಬುಧವಾರ ಇರಾಕ್‌ನ ಖೋರ್ ಅಲ್ ಜುಬೈರ್ ಬಂದರಿನ ಬಳಿ ಅಮೆರಿಕ ಒಡೆತನದ ಮತ್ತು ಮಾರ್ಷಲ್ ಐಲ್ಯಾಂಡ್ ಧ್ವಜ ಹೊಂದಿರುವ 'ಸೇಫ್‌ಸೀ ವಿಷ್ಣು' ತೈಲ ಟ್ಯಾಂಕರ್ ಮೇಲೆ ಇರಾನ್ ಆತ್ಮಾಹುತಿ ದಾಳಿ ನಡೆಸಿದೆ. ಘಟನೆಯಲ್ಲಿ ಒಬ್ಬ ಭಾರತೀಯ ಪ್ರಜೆ ಮೃತಪಟ್ಟಿದ್ದು, ಇತರೆ 27 ಸಿಬ್ಬಂದಿಯನ್ನು ರಕ್ಷಿಸಿ ಬಸ್ರಾಕ್ಕೆ ಕರೆದೊಯ್ಯಲಾಗಿದೆ ಎಂದು ಮೂಲಗಳು ತಿಳಿಸಿವೆ. ಸದ್ಯ ಮೃತನ ಹೆಸರನ್ನು ಗೌಪ್ಯವಾಗಿಡಲಾಗಿದೆ. 228.6 ಮೀಟರ್ ಉದ್ದ ಮತ್ತು 32.57 ಮೀಟರ್ ಅಗಲವಿರುವ 'ಸೇಫ್‌ಸೀ ವಿಷ್ಣು' 2007ರಲ್ಲಿ ನಿರ್ಮಿಸಲಾದ ಕಚ್ಚಾ ತೈಲ ಟ್ಯಾಂಕರ್ ಆಗಿದ್ದು, ಪ್ರಸ್ತುತ ಮಾರ್ಷಲ್ ಐಲ್ಯಾಂಡ್ ಧ್ವಜದ ಅಡಿಯಲ್ಲಿ ಸಂಚರಿಸುತ್ತಿದೆ. ಈ ಘಟನೆಯಿಂದ ಆಘಾತಕ್ಕೊಳಗಾಗಿರುವುದಾಗಿ ಸೇಫ್‌ಸೀ ಕಂಪನಿಯ ಆಪ್ತ ಮೂಲಗಳು ತಿಳಿಸಿವೆ.

ಭಾರತ ಸರ್ಕಾರವು ಈ ದಾಳಿಯನ್ನು ಖಂಡಿಸಬೇಕು ಮತ್ತು ಈ ಪ್ರದೇಶದಲ್ಲಿ ಸಾಗುವ ಹಡಗುಗಳಲ್ಲಿರುವ ಸಿಬ್ಬಂದಿಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಮೂಸೆವಾಲಾ ಹತ್ಯೆ ಆರೋಪಿಗಳಿಗೆ ಜಾಮೀನು




ನವದೆಹಲಿ: ಪಂಜಾಬಿ ಗಾಯಕ ಹಾಗೂ ರಾಜಕಾರಣಿ ಸಿದ್ದು ಮೂಸೆವಾಲಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಆರೋಪಿಗಳಾದ ಪವನ್ ಬಿಷ್ಣೋಯ್ ಮತ್ತು ಜಗ್ತಾರ್ ಸಿಂಗ್‌ಗೆ ಸುಪ್ರೀಂಕೋರ್ಟ್ ಜಾಮೀನು ನೀಡಿದೆ.

ಪ್ರಸಿದ್ಧ ರ್‍ಯಾಪ್ ಹಾಡುಗಾರ ಹಾಗೂ ಉದಯೋನ್ಮುಖ ರಾಜಕಾರಣಿ ಶುಭದೀಪ್ ಸಿಂಗ್ ಸಿಧು ಅಲಿಯಾಸ್ ಸಿಧು ಮೂಸ್ ವಾಲಾ ಅವರಿಗೆ ನೀಡಲಾಗಿದ್ದ ಭದ್ರತೆಯನ್ನು ಹಿಂತೆಗೆದುಕೊಂಡ ಮರುದಿನವೇ ಅಂದರೆ 2022ರ ಮೇ 29ರಂದು ಪಂಜಾಬ್‌ನ ಮಾನ್ಸಾ ಜಿಲ್ಲೆಯ ಜವಾಹರ್ಕೆ ಗ್ರಾಮದಲ್ಲಿ ಗುಂಡಿಕ್ಕಿ ಅವರನ್ನು ಕೊಲ್ಲಲಾಯಿತು.

ತನ್ನ ಇಬ್ಬರು ಸಹಾಯಕರೊಂದಿಗೆ ತಮ್ಮ ವಾಹನದಲ್ಲಿ ತೆರಳುತ್ತಿದ್ದಾಗ ದಾಳಿ ಮಾಡಿದ ಆಗಂತುಕರು 19 ಸುತ್ತು ಗುಂಡು ಹಾರಿಸಿ ಮೂಸೆವಾಲಾನನ್ನು ಹತ್ಯೆ ಮಾಡಿದರು. ಘಟನೆ ಬೆನ್ನಲ್ಲೇ ಲಾರೆನ್ಸ್ ಬಿಷ್ಣೋಯ್ ಸಿಂಡಿಕೇಟ್‌ನೊಂದಿಗೆ ಸಂಪರ್ಕ ಹೊಂದಿರುವ ಕೆನಡಾ ಮೂಲದ ಗೋಲ್ಡಿ ಬ್ರಾರ್, ಸಾಮಾಜಿಕ ಮಾಧ್ಯಮದ ಮೂಲಕ ಈ ಕೊಲೆ ಜವಾಬ್ದಾರಿಯನ್ನು ವಹಿಸಿಕೊಂಡರು. 2021ರಲ್ಲಿ ತಮ್ಮ ಗ್ಯಾಂಗ್‌ನ ವಿಕ್ಕಿ ಮಿದ್ದುಖೇರಾ ಅವರ ಕೊಲೆಯನ್ನು ಸಿದ್ದು ಮಾಡಿಸಿದ್ದು, ಆ ಕೊಲೆಯ ಸೇಡಿನ ರೂಪದಲ್ಲಿ ಈ ಕೊಲೆಯನ್ನು ಮಾಡಲಾಗಿದೆ ಎಂದು ಬ್ರಾರ್ ಹೇಳಿಕೆ ನೀಡಿದರು.

ವೈಮಾನಿಕ ದಾಳಿ; ಕುವೈತ್‌ನ ವಸತಿ ಕಟ್ಟಡ ಛಿದ್ರ



ಕುವೈತ್: ಇರಾನ್ ವಿರುದ್ಧದ ಇಸ್ರೇಲ್–ಅಮೆರಿಕ ಯುದ್ಧ 13 ದಿನಕ್ಕೆ ಕಾಲಿಟ್ಟಿರುವಂತೆ ಪರ್ಷಿಯನ್ ಕೊಲ್ಲಿಯ ಕರಾವಳಿಯಲ್ಲಿರುವ ಚಿಕ್ಕ ಹಾಗೂ ಶ್ರೀಮಂತ ಅರಬ್ ದೇಶದ ರಾಜಧಾನಿ ಕುವೈತ್‌ನ ವಸತಿ ಕಟ್ಟಡವೊಂದಕ್ಕೆ ಗುರುವಾರ ವೈಮಾನಿಕ ದಾಳಿ ನಡೆದಿದೆ. ಪರಿಣಾಮ ಭಾರಿ ಪ್ರಮಾಣದ ಸಾವು ನೋವು ಮತ್ತು ನಷ್ಟ ಉಂಟಾಗಿರುವುದಾಗಿ ವರದಿಯಾಗಿದೆ. ಇಂದು ಮುಂಜಾನೆ ದಕ್ಷಿಣ ಕುವೈತ್‌ನ ವಸತಿ ಕಟ್ಟಡವನ್ನು ಗುರಿಯಾಗಿಸಿಕೊಂಡು ಶತ್ರು ರಾಷ್ಟ್ರ ಡ್ರೋನ್ ದಾಳಿ ನಡೆಸಿದೆ. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದು, ಅವರಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ರಕ್ಷಣಾ ಸಚಿವಾಲಯ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ದಾಳಿಯಲ್ಲಿ ಕೆಲವರು ಸಾವನ್ನಪ್ಪಿರುವ ಜೊತೆಗೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದು, ಡ್ರೋನ್‌ನ ಮೂಲದ ಬಗ್ಗೆ ಅಧಿಕಾರಿಗಳು ಇನ್ನೂ ಹೆಚ್ಚಿನ ವಿವರಗಳನ್ನು ಬಿಡುಗಡೆ ಮಾಡಿಲ್ಲ. ಘಟನೆಯಲ್ಲಿ ಡಜನ್ ಗಟ್ಟಲೇ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ CBS ನ್ಯೂಸ್ ವರದಿ ಮಾಡಿದೆ.

ಅಗ್ನಿ ಅವಘಡ; 400 ಗುಡಿಸಲು ಭಸ್ಮ



ನವದೆಹಲಿ: ಇಲ್ಲಿನ ಉತ್ತಮ್‌ನಗರ, ಮಟಿಯಾಲಾ ಪ್ರದೇಶದ ಮೀನು ಮಾರುಕಟ್ಟೆ ಬಳಿ ಬುಧವಾರ ತಡರಾತ್ರಿ ಭೀಕರ ಅಗ್ನಿ ಅವಘಡ ಸಂಭವಿಸಿ, ಸುಮಾರು 400 ಗುಡಿಸಲುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ ಎಂದು ದೆಹಲಿ ಅಗ್ನಿಶಾಮಕ ಸೇವೆ ತಿಳಿಸಿದೆ. ಮೀನು ಮಾರುಕಟ್ಟೆ ಪ್ರದೇಶದಿಂದ ಆರಂಭವಾದ ಬೆಂಕಿ, ಗಾಳಿಯ ವೇಗಕ್ಕೆ ಕ್ಷಣಾರ್ಧದಲ್ಲಿ ಪಕ್ಕದ ಗುಡಿಸಲುಗಳಿಗೆ ವ್ಯಾಪಿಸಿತ್ತು. ಕಿಲೋ ಮೀಟರ್ ದೂರದವರೆಗೂ ಬೆಂಕಿಯ ಜ್ವಾಲೆ ಮತ್ತು ದಟ್ಟವಾದ ಹೊಗೆ ಆವರಿಸಿತ್ತು. ತಕ್ಷಣ ಸುಮಾರು 23 ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ಧಾವಿಸಿದವು. ಅಗ್ನಿಶಾಮಕ ಸಿಬ್ಬಂದಿ ಗಂಟೆಗಳ ಕಾಲ ಸತತ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾದರು. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಅಥವಾ ಗಂಭೀರ ಗಾಯಗಳಾದ ಬಗ್ಗೆ ವರದಿಯಾಗಿಲ್ಲ. ಗುಡಿಸಲುಗಳಲ್ಲಿದ್ದ ಬಟ್ಟೆಬರೆ, ಆಹಾರ ಪದಾರ್ಥಗಳು ಮತ್ತು ಅವರ ಸಣ್ಣಪುಟ್ಟ ಉಳಿತಾಯದ ಹಣ ಎಲ್ಲವೂ ಬೆಂಕಿಯ ಪಾಲಾಗಿದೆ. ನೂರಾರು ಕುಟುಂಬಗಳು ಈಗ ಬೀದಿಗೆ ಬಿದ್ದಿವೆ. ಬೆಂಕಿ ಅವಘಡಕ್ಕೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ. ಶಾರ್ಟ್ ಸರ್ಕ್ಯೂಟ್ ಅಥವಾ ಅಡುಗೆ ಮಾಡುವಾಗ ಸಿಡಿದ ಕಿಡಿಯಿಂದ ಈ ದುರಂತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ದೆಹಲಿ ಪೊಲೀಸರು ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಸಂತ್ರಸ್ತರಿಗೆ ತಾತ್ಕಾಲಿಕ ಆಶ್ರಯ ಮತ್ತು ಆಹಾರದ ವ್ಯವಸ್ಥೆ ಮಾಡಲು ಸ್ಥಳೀಯ ಆಡಳಿತ ಕ್ರಮ ವಹಿಸಿದೆ.

ಮೈಸೂರು ಮಿತ್ರ ಶುಕ್ರವಾರ 13 ಮಾರ್ಚ್ 2026

ಸಿದ್ದಾಪುರ ಬಳಿ ಕಾಡಾನೆ ದಾಳಿಗೆ ರೈತ ಬಲಿ

ರೈತರ ಆಕ್ರೋಶ, ಅಧಿಕಾರಿಗಳಿಗೆ ತರಾಟೆ



ಗಣಪತಿ

ಸಿದ್ದಾಪುರ, ಮಾ.12– ಕಾಡಾನೆ ದಾಳಿಗೆ ರೈತರೊಬ್ಬರು ಬಲಿಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಹೈಸ್ಕೂಲ್ ಪೈಸಾರಿ ವ್ಯಾಪ್ತಿಯ ಕಾಫಿ ತೋಟದಲ್ಲಿ ಸಂಭವಿಸಿದೆ.

ಚೌರಿರ ಕುಟುಂಬದ 49 ವರ್ಷ ಪ್ರಾಯದ ಗಣಪತಿ (ಗಪ್ಪು) ಎಂಬುವವರೇ ಆನೆ ದಾಳಿಗೆ ಬಲಿಯಾದ ದುರ್ದೈವಿ. ಕಾಫಿ ತೋಟ ನೋಡಲು ತೆರಳಿದ್ದ ಸಂದರ್ಭ ಕಾಡಾನೆ ಹಠಾತ್ ದಾಳಿ ನಡೆಸಿದ್ದು, ಘಟನೆ ಯಲ್ಲಿ ಗಣಪತಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ದಾಳಿ ನಡೆಸಿರುವ ಕಾಡಾನೆ ಕಾಫಿ ತೋಟದಲ್ಲಿ ಬೀಡುಬಿಟ್ಟಿದೆ. ಸುತ್ತಮುತ್ತಲ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕಾಡಾನೆ ಭೀತಿಯಿಂದ ಕೆಲಸ ಬಿಟ್ಟು ಮನೆಗೆ ವಾಪಸ್ ಬಂದಿದ್ದಾರೆ. ಕಳೆದ ಕೆಲ ದಿನಗಳಿಂದ ಈ ಭಾಗದಲ್ಲಿ ಕಾಡಾನೆ ಹಾವಳಿ ಮಿತಿಮೀರಿ, ಅರಣ್ಯ ಇಲಾಖೆ ಸಿಬ್ಬಂದಿಗಳು ಆನೆಗಳ ಹಾವಳಿ ಕಾಡಿಗಟ್ಟುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಸ್ಥಳೀಯರು ಆರೋಪಿಸಿದರು.

ಸ್ಥಳಕ್ಕೆ ಮಾಜಿ ಶಾಸಕರುಗಳಾದ ಅಪ್ಪಚ್ಚು ರಂಜನ್, ಕೆ.ಜಿ.ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ರವಿ ಕಾಳಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್, ಕಾರ್ಮಿಕ ಸಂಘಟನೆಯ ಮುಖಂಡ ಪಿ.ಆರ್.ಭರತ್, ರೈತ ಸಂಘದ ಮುಖಂಡರುಗಳು, ಬೆಳೆಗಾರರು ಸೇರಿದಂತೆ ಮತ್ತಿತರರು ಶವಾಗಾರದ ಎದುರು ಜಮಾಯಿಸಿ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾಡು ಪ್ರಾಣಿಗಳಾವಳಿಯಿಂದ ರೈತರು, ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು, ಸಾರ್ವ ಜನಿಕರು ನೆಮ್ಮದಿಯಾಗಿ ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ಬೇಜವಾಬ್ದಾರಿತನ ತೋರುವ ಮೂಲಕ ಕಾಡು ಪ್ರಾಣಿಗಳ ಹಾವಳಿಯನ್ನು ಶಾಶ್ವತ ವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಅಸಹಾಯಕತೆ ತೋರುತ್ತಿದ್ದಾರೆ ಎಂದು ಆರೋಪಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆನೆ ಕಂದಕ ಸೋಲಾರ್ ಬೇಲಿ ದುರಸ್ತಿಗೂ ಮುಂದಾಗದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ವೈಜ್ಞಾನಿಕವಾಗಿ ರೈಲ್ವೆ ಕಂಬಿಗಳನ್ನು ಅಳವಡಿಸದೆ ಇರುವುದರಿಂದ ರೈಲ್ವೆ ಕಂಬಿಗಳನ್ನು ಆನೆಗಳು ದಾಟಿ ತೋಟದತ್ತ ಬರುತ್ತಿವೆ. ನಿರಂತರ ಕೃಷಿ ಫಸಲು ನಾಶ ಮಾಡುವುದರ ಮೂಲಕ ಕಾಡು ಪ್ರಾಣಿಗಳು ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ರೈತರ ಕಾರ್ಮಿಕರ ನೆಮ್ಮದಿ ಕೆಡಿಸುತ್ತಿದೆ. ಜಿಲ್ಲೆಯಲ್ಲಿ ನಿರಂತರ ಹಲವು ಸಾವು ನೋವುಗಳು ಸಂಭವಿಸುತ್ತಿದೆ ಎಂದು ಆರೋಪಿಸಿದರು. ಅರಣ್ಯದಂಚಿನಲ್ಲಿ ವೈಜ್ಞಾನಿಕವಾಗಿ ಕಂಬಿಗಳನ್ನು ಅಳವಡಿಸ ಬೇಕು, ಸೋಲಾರ್ ಬೇಲಿಗಳನ್ನು ದುರಸ್ತಿಪಡಿಸಬೇಕು, ರೈತರ ಕೃಷಿ ಫಸಲು ನಷ್ಟಕ್ಕೆ ಸೂಕ್ತ ಪರಿಹಾರ ನೀಡಬೇಕು, ಕಾಡು ಪ್ರಾಣಿಗಳ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಒಂದು ಕೋಟಿ ರೂಪಾಯಿಗಳ ಪರಿಹಾರ ನೀಡಬೇಕು, ರೈತರು ಕಾರ್ಮಿಕರು ಬೆಳೆಗಾರಿಗೆ ಸೂಕ್ತ ರಕ್ಷಣೆ ನೀಡಬೇಕು ಸೇರಿದಂತೆ ಹಲವು ಬೇಡಿಕೆಗಳನ್ನು ಪ್ರತಿಭಟನಾ ಕಾರರು ಮುಂದಿಟ್ಟರು.



ಘಟನೆ ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಅರಣ್ಯ ಇಲಾಖೆ ಅಧಿಕಾರಿ ಸೋಮಣ್ ವೃತ್ತಿ ಮಾತನಾಡಿ ಅರಣ್ಯದಂಚಿನಲ್ಲಿ 7 ಕಿ.ಮೀ ರೈಲ್ವೆ ಕಂಬಿ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ಉಪಟಳ ನೀಡುತ್ತಿರುವ ಆನೆಗಳನ್ನು ಸೆರೆ ಹಿಡಿಯಲು ಅನುಮತಿ ಸಿಕ್ಕಿದ್ದು ಸದ್ಯದಲ್ಲೇ ಆನೆಗಳನ್ನು ಹಿಡಿದು ಸ್ಥಳಾಂತರ ಮಾಡಲಾಗುವುದು. ಕಾಡಾನೆಗಳ ಬಗ್ಗೆ ನಿಗಾವಹಿಸಲು ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು ಹಲವು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಶಾಸಕ ಎ.ಎಸ್.ಪೊನ್ನಣ್ಣ ಅವರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಹಾಗೂ ಸಿದ್ದಾಪುರ ವಲಯ ಅಧ್ಯಕ್ಷ ಪ್ರತೀಶ ಅವರಿಂದ ಮಾಹಿತಿ ಪಡೆದು ಮೃತ ವ್ಯಕ್ತಿಯ ಕುಟುಂಬದವರೊಂದಿಗೆ ದೂರವಾಣಿ ಮೂಲಕ ಸಾಂತ್ವನ ಹೇಳಿ ಸಂತಾಪ ಸೂಚಿಸಿದರಲ್ಲದೆ ಅಧಿಕಾರಿಗಳಿಗೆ ಇಂದಿನಿಂದಲೇ ಕಾಡಾನೆ ಸೆರೆ ಹಿಡಿಯಲು ಸೂಚನೆ ನೀಡಿದರು. ಕೊಡಗಿನಲ್ಲಿ ಕಾಡಾನೆಗಳ ಹಾವಳಿಯಿಂದ ಅಮಾಯಕ ಜೀವಗಳು ಬಲಿಯಾಗುತ್ತಿರುವ ಬಗ್ಗೆ ವಿರಾಜಪೇಟೆ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ವಿಧಾನಸಭಾ ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆದು ಕೊಡಗಿನಲ್ಲಿ ಕಾಡಾನೆ ಹಾಗೂ ವನ್ಯಪ್ರಾಣಿಗಳ ಹಾವಳಿ ಮಿತಿಮೀರಿದ್ದು ಕಾಡಾನೆಗಳ ಹಾವಳಿಗೆ ಮುಗ್ದ ಜೀವಗಳು ಬಲಿಯಾಗುತ್ತಿದ್ದು, ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಮಧ್ಯಪ್ರವೇಶ ಮಾಡಿ ಕೊಡಗಿನ ಜನರ ರಕ್ಷಣೆಗೆ ಮುಂದಾಗಬೇಕೆಂದು ಸರ್ಕಾರದ ಗಮನ ಸೆಳೆದರು.

ಮಾ.15 ರಂದು ಖಾದಿ ಬಟ್ಟೆ ಖರೀದಿಗೆ ಅವಕಾಶ

ಮಡಿಕೇರಿ ಮಾ.12– ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಸಂಸ್ಥೆಗಳು/ ನಿಗಮ /ಮಂಡಳಿ/ ಸ್ವಾಯತ್ತ ಸಂಸ್ಥೆಗಳು/ ವಿಶ್ವವಿದ್ಯಾಲಯಗಳ ಅಧಿಕಾರಿ/ನೌಕರರು ಸ್ವಯಂ ಪ್ರೇರಣೆಯಿಂದ ಪ್ರತಿ ತಿಂಗಳ ಮೊದಲ ಶನಿವಾರದಂದು ಖಾದಿ ಉಡುಪನ್ನು ಧರಿಸುವಂತೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿರುತ್ತಾರೆ. ಬೆಳಗ್ಗೆ 9.30 ರಿಂದ ಸಂಜೆ 5 ರವರೆಗೆ ಗಾಂಧಿ ಮೈದಾನದಲ್ಲಿ ತಾತ್ಕಾಲಿಕ ಖಾದಿ ಮಳಿಗೆಯನ್ನು ತೆರೆಯಲಾಗುತ್ತಿದೆ.

ಮುದ್ದಂಡ ಕಪ್‌ನ 1 ಕೋಟಿ ರೂ ಚೆಕ್ ವಿತರಣೆ




2025ರಲ್ಲಿ ನಡೆದ ಗಿನ್ನಿಸ್ ದಾಖಲೆ ಬರೆದಿದ್ದ ಮುದ್ದಂಡ ಕಪ್ ಕೊಡವ ಹಾಕಿ ನಮ್ಮೆಗೆ ಸರ್ಕಾರದಿಂದ ಬಿಡುಗಡೆಯಾದ 1 ಕೋಟಿ ರೂಗಳ ಅನುದಾನದ ಚೆಕ್ ಅನ್ನು ವಿರಾಜಪೇಟೆ ಕ್ಷೇತ್ರದ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ವಿಧಾನಸೌಧದಲ್ಲಿ ಮುದ್ದಂಡ ಕುಟುಂಬಸ್ಥರಿಗೆ ಹಸ್ತಾಂತರ ಮಾಡಿದರು. ಈ ಸಂದರ್ಭದಲ್ಲಿ ಕೊಡವ ಹಾಕಿ ಅಕಾಡಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ನಿರ್ದೇಶಕರಾದ ಕುಲ್ಲೇಟಿರ ಅರುಣ್ ಬೇಬ, ಕಲಿಯಂಡ ಸಂಪನ್ ಅಯ್ಯಪ್ಪ, ಮುಕ್ಕಾಟಿರ ಸೋಮಯ್ಯ, ಮುದ್ದಂಡ ರಿಷಿನ್, ಲೀನಾ ಪೂಣಚ್ಚ, ರಂಜಿತ್ ಪೊನ್ನಪ್ಪ, ಕಾವೇರಿ, ಫ್ಯಾನ್ಸಿ, ಆದರ್ಶ, ಅಶೋಕ್, ದಿವ್ಯ, ವಿನೀತ್, ಮುತ್ತಪ್ಪ, ವಾಣಿ ಮತ್ತಿತರರು ಉಪಸ್ಥಿತರಿದ್ದರು.

ಮಾ.17ರಿಂದ ಶ್ರೀ ಮುತ್ತಪ್ಪ ದೇವಸ್ಥಾನದ ತೆರೆ ಮಹೋತ್ಸವ

ವಿರಾಜಪೇಟೆ, ಮಾ.12– ಪಟ್ಟಣದ ಮೀನು ಪೇಟೆಯಲ್ಲಿರುವ ಚೈತನ್ಯ ಮಠಪುರ ಶ್ರೀ ಮುತ್ತಪ್ಪ ದೇವಸ್ಥಾನದ 82ನೇ ವರ್ಷದ ಶ್ರೀ ಮುತ್ತಪ್ಪ ತೆರೆ ಮಹೋತ್ಸವ ಮಾ. 17ರಿಂದ 19ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ.

ಮಾ, 17ರಂದು ಬೆಳಿಗ್ಗೆ 6 ಗಂಟೆಗೆ ಗಣಪತಿ ಹೋಮದೊಂದಿಗೆ ತೆರೆ ಮಹೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಬಳಿಕ 8–45 ಕ್ಕೆ ಧ್ವಜಾರೋಹಣ ನೆರವೇರಲಿದೆ. ಸಂಜೆ 5 ಗಂಟೆಗೆ ಮುತ್ತಪ್ಪ ವೆಳ್ಳಾಟಂ, 6 ಗಂಟೆಗೆ ನೂತನ ಭಜನಾ ಮಂದಿರ ಉದ್ಘಾಟನೆಯಾಗಲಿದ್ದು, ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಮಂಡೆಪಂಡ ಸುಜಾ ಕುಶಾಲಪ್ಪ ಭಾಗವಹಿಸಲಿದ್ದಾರೆ.

ಮಾ.18 ಬುಧವಾರ ಮಧ್ಯಾಹ್ನ 2 ಗಂಟೆಗೆ ದೇವರ ಮಲೆ ಇಳಿಸುವುದು, ಸಂಜೆ 5 ಗಂಟೆಗೆ ಶ್ರೀ ಮುತ್ತಪ್ಪ ವೆಳ್ಳಾಟ, ಸಂಜೆ 5.30ಕ್ಕೆ ಮೊದಕಲಶದೊಂದಿಗೆ ತಾಲಪೋಲಿ ಮೆರವಣಿಗೆ, ಕಾಳಿಂಗ ಕಲಾಸಮಿತಿಯವರ ಸಿಂಗಾರಿ ಮೇಳ ಹಾಗೂ ತತ್ವಮಸಿ ಸಹಸ್ರ ವೆಳಕಾಟ್ಟಂ, ಚಂಡೆಮೇಳದೊಂದಿಗೆ ಮಹಿಳೆಯರ ತಾಲಪ್ಪೊಲಿ ಮೆರವಣಿಗೆಯು ತೆಲುಗರ ಬೀದಿಯಿಂದ ಹೊರಟು, ಮುಖ್ಯ ಬೀದಿಗಾಗಿ 8 ಗಂಟೆಗೆ ಶ್ರೀ ಮುತ್ತಪ್ಪ ದೇವಸ್ಥಾನಕ್ಕೆ ತಲುಪಲಿದೆ. ಸಂಜೆ 6 ಗಂಟೆಯಿಂದ ಕುಟ್ಟಿಚಾತನ್, ಗುಳಿಗನ್, ವಸೂರಿಮಾಲ, ಪೋದಿ, ವಿಷ್ಣುಮೂರ್ತಿ ವೆಳ್ಳಾಟಂ ನಡೆಯಲಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶಾಸಕ ಎ.ಎಸ್. ಪೊನ್ನಣ್ಣ ಭಾಗವಹಿಸಲಿದ್ದಾರೆ. ರಾತ್ರಿ 8 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ.



ಅರುಣ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಪಾಲೂರು ಗ್ರಾಮದ ನಿವಾಸಿ ಮಂದನೆರವಂಡ ಪೂವಯ್ಯ ಅವರ ಪುತ್ರ ಅರುಣ (58) ಬುಧವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಗುರುವಾರ ಪಾಲೂರು ಗ್ರಾಮದಲ್ಲಿ ಜರುಗಿತು. ಮೃತರು ಅವಿವಾಹಿತ ರಾಗಿದ್ದು ತಂದೆ, ಸಹೋದರಿಯನ್ನು ಅಗಲಿದ್ದಾರೆ.

ಚಿನಕುರಳಿಯಲ್ಲಿ ಕೃಷ್ಣೋತ್ಸವ, ಹೆಣ್ಣು ಕರುಗಳ ಪ್ರದರ್ಶನ

ಚಿನಕುರಳಿ, ಮಾ.12– ಗ್ರಾಮದ ಶ್ರೀರಾಮೇಶ್ವರ ಸಮುದಾಯ ಭವನದ ಆವರಣದಲ್ಲಿ ಮನ್‌ಮುಲ್, ಕೆಎಂಎಫ್ ಹಾಗೂ ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸಹಯೋಗದಲ್ಲಿ ಕೃಷ್ಣೋತ್ಸವ, ತಾಲೂಕು ಮಟ್ಟದ ಹೆಣ್ಣು ಕರುಗಳ ಪ್ರದರ್ಶನ ಕಾರ್ಯಕ್ರಮ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಕೆಎಂಎಫ್ ನಿರ್ದೇಶಕ ಎನ್.ಅಪ್ಪಾಜಿಗೌಡ ಚಾಲನೆ ನೀಡಿದರು. ಪಾಂಡವಪುರ ತಾಲೂಕಿನಲ್ಲಿ ಇದೇ ಮೊದಲ ಬಾರಿಗೆ ಹೆಣ್ಣು ಕರುಗಳ ಪ್ರದರ್ಶನ ನಡೆಯುತ್ತಿರುವುದರಿಂದ 4 ಪೆಂಡಾಲ್‌ಗಳನ್ನು ಹಾಕಲಾಗಿತ್ತು. ಈ ವೇಳೆ ಕಾರ್ಯಕ್ರಮಕ್ಕೆ ತಮ್ಮ ಕರುಗಳೊಂದಿಗೆ ಆಗಮಿಸಿದ ರೈತರು ತಮ್ಮ ಹೆಸರು ನೋಂದಾಯಿಸಿಕೊಂಡು ಆಯೋಜಕರಿಂದ ಟ್ಯಾಗ್ ಹಾಗೂ ಪ್ರಮಾಣ ಪತ್ರ ಪಡೆದು ನಂತರ ಪೆಂಡಾಲ್‌ನಲ್ಲಿ ಕರುಗಳನ್ನು ಪ್ರದರ್ಶಿಸಿದರು.

ಹೆಣ್ಣು ಕರುಗಳ ಪ್ರದರ್ಶನವನ್ನು ಕೆಎಂಫ್, ಜೆರ್ಸಿ, ದೇಶಿಯ ತಳಿ, ಹಳ್ಳಿಕಾರ್ ಹಾಗೂ ಎಮ್ಮೆ ಸೇರಿದಂತೆ 5 ವಿಭಾಗದಲ್ಲಿ ಆಯೋಜಿಸಲಾಗಿತ್ತು ಎಲ್ಲಾ ತಳಿಗಳಲ್ಲೂ 0–4 ತಿಂಗಳು, 4–8 ಹಾಗೂ 8–12 ತಿಂಗಳ ವಿಭಾಗದಲ್ಲಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪ್ರದರ್ಶನದಲ್ಲಿ ಹೆಚ್ಚಾಗಿ ಹೆಚ್‌ಎಫ್, ಜೆರ್ಸಿ ತಳಿಗಳು ಹೆಚ್ಚಾಗಿ ಭಾಗವಹಿಸಿದ್ದವು. ದೇಶಿಯ ತಳಿ, ಹಳ್ಳಿಕಾರ್ ಹಾಗೂ ಎಮ್ಮೆ ಕರುಗಳ ಸಂಖ್ಯೆ ಕಡಿಮೆ ಇದ್ದವು. ವಿಶೇಷವಾಗಿ ಮಲ್ನಾಡ್, ಗಿರ್ ಹಾಗೂ ಪುಂಗನೂರು ತಳಿಯ ಕರುಗಳು ಗಮನ ಸೆಳೆದವು.

ಮನ್‌ಮುಲ್ ಹಾಗೂ ಕೆಎಂಎಫ್‌ನಿಂದ ದೊರೆಯುವ ಸವಲತ್ತುಗಳು, ಪಶು ಆಹಾರ, ಬಿತ್ತನೆ ಬೀಜ, ಹಾಲು ಕರೆಯುವ ಯಂತ್ರ, ಮೇವು ಕತ್ತರಿಸುವ ಯಂತ್ರಗಳು, ರಕ್ಷಾ ವ್ಯಾಕ್ಸಿನ್, ಸಂಯೋಜಿತ ಹೈನುಗಾರಿಕೆ ವಿಧಾನ, ಖನಿಜ ಮಿಶ್ರಣ ಹಾಗೂ ಸಿಹಿ ತಿಂಡಿ ತಿನಿಸು, ತಂಪು ಪಾನೀಯ, ಐಸ್ ಕ್ರೀಂ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು.

ಈ ವೇಳೆ ತಾಲೂಕಿನ 212 ಹೆಣ್ಣು ಕರುಗಳು ಭಾಗವಹಿಸಿದ್ದವು. ನುರಿತ ಪಶು ವೈದ್ಯರು ಹಲವು ಮಾನದಂಡ ಅನುಸರಿಸಿ ಉತ್ತಮ ಹೆಣ್ಣು ಕರುಗಳನ್ನು ಆಯ್ಕೆ ಮಾಡಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲಾ ಹೆಣ್ಣು ಕರುಗಳಿಗೂ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ವೈಯುಕ್ತಿಕವಾಗಿ ಸಮಾಧಾನಕರ ಬಹುಮಾನ ವಿತರಿಸಿದರು.



ಕೃಷ್ಣೋತ್ಸವ, ತಾಲೂಕು ಮಟ್ಟದ ಹೆಣ್ಣು ಕರುಗಳ ಪ್ರದರ್ಶನಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಕೆಎಂಎಫ್ ನಿರ್ದೇಶಕ ಎನ್.ಅಪ್ಪಾಜಿಗೌಡ ಚಾಲನೆ ನೀಡಿದರು.

> ಇದೇ ಮೊದಲ ಬಾರಿಗೆ ಹೆಣ್ಣು ಕರುಗಳ ಪ್ರದರ್ಶನ ಏರ್ಪಡಿಸಲಾಗಿದೆ. ರೈತರು ಕರುಗಳನ್ನು ಉತ್ತಮವಾಗಿ ಸಾಕಾಣಿಕೆ ಮಾಡಿದ್ದಾರೆ. ಇಲ್ಲಿಗೆ ಬಂದಿರುವ ಕರುಗಳನ್ನು ನೋಡಿದರೆ ಖುಷಿಯಾಗುತ್ತದೆ. ಭಾಗವಹಿಸಿರುವ ಕರುಗಳ ಆಯ್ಕೆ ಪ್ರಕ್ರಿಯೆಯೂ ಪಾರದರ್ಶಕವಾಗಿ ನಡೆಯಬೇಕು.
> –ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ.

ಕೆಎಂಎಫ್ ನಿರ್ದೇಶಕ ಎನ್.ಅಪ್ಪಾಜಿಗೌಡ ಮಾತನಾಡಿ, ಹೈನುಗಾರಿಕೆ ಉತ್ತೇಜಿಸುವ ಉದ್ದೇಶದಿಂದ ಹೆಣ್ಣು ಕರುಗಳ ಪ್ರದರ್ಶನ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಬಹುಮಾನ ಪಡೆಯುವುದಕ್ಕಿಂತ ಮೊದಲು ಭಾಗವಹಿಸುವುದು ಮುಖ್ಯ ಸಿ.ಶಿವಕುಮಾರ್ ಅವರು ಮನ್‌ಮುಲ್ ನಿರ್ದೇಶಕರಾದ ಬಳಿಕ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಕೆಲಸ ಮಾಡುತ್ತಿದ್ದಾರೆ. ತಾಲೂಕಿನಲ್ಲಿ ಮನ್‌ಮುಲ್ ಉಪವ್ಯವಸ್ಥಾಪಕರ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ವಹಿಸಿದ್ದಾರೆ ಎಂದರು.

ಮನ್‌ಮುಲ್ ನಿರ್ದೇಶಕರಾದ ಎಂ.ಬಿ.ಹರೀಶ್, ಸಿ.ಶಿವಕುಮಾರ್ ಹಾಗೂ ಕೆ.ರವಿ, ಡಾ.ಮಂಜೇಶ್ ಮಾತನಾಡಿದರು. ಈ ವೇಳೆ ಮನ್‌ಮುಲ್ ಒಕ್ಕೂಟದ ಅಧ್ಯಕ್ಷ ಯು.ಸಿ.ಶಿವಕುಮಾರ್, ನಿರ್ದೇಶಕರಾದ ಲಕ್ಷ್ಮೀನಾರಾಯಣ, ಡಿ.ಕೃಷ್ಣೇಗೌಡ, ಸ್ವಾಮಿ, ಹರೀಶ್ ಬಾಬು, ನಾಮಿನಿ ಸದಸ್ಯ ವಿಶ್ವಾಸ್, ಸಹಕಾರ ನಿಬಂಧಕ ನಾಗಭೂಷಣ್, ಸಹಕಾರ ಒಕ್ಕೂಟದ ವಿಶೇಷ ಅಧಿಕಾರಿ ಅನಿತಾ, ಸಹಕಾರಿ ಯೂನಿಯನ್ ಸಿಇಓ ಸುರೇಶ್, ನೌಕರರ ಸಂಘದ ಅಧ್ಯಕ್ಷ ಶಿವಪ್ಪ, ಉಪವ್ಯವಸ್ಥಾಪಕ ಆರ್.ಪ್ರಸಾದ್ ಹಾಗೂ ಮಾರ್ಗ ವಿಸ್ತರಣಾಧಿಕಾರಿಗಳು ಇತರರಿದ್ದರು.

ಚಿರತೆ ದಾಳಿಗೆ ಮೇಕೆ ಬಲಿ

ಭಾರತೀನಗರ, ಮಾ.12– ಚಿರತೆ ದಾಳಿಗೆ ಮೇಕೆ ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಸಬ್ಬನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಗಿರಿಗೌಡ ಎಂಬುವರ ಜಮೀನಿನ ಬಳಿ ಚಿರತೆ ಕಾಣಿಸಿಕೊಂಡಿದ್ದು, ಜಮೀನಿನಲ್ಲಿ ಮೇಕೆ ಮೇಯಿಸುತ್ತಿದ್ದ ಲಕ್ಷ್ಮಮ್ಮ ಎಂಬಾಕೆ ಮೇಲೆ ಚಿರತೆ ದಾಳಿ ನಡೆಸಲು ಮುಂದಾಗಿದೆ. ಈ ವೇಳೆ ಆಕೆ ಪಾರಾಗಿದ್ದು, ಮೇಕೆ ಚಿರತೆ ದಾಳಿಗೆ ಬಲಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಬೋನಿಟ್ಟು ಚಿರತೆ ಸೆರೆ ಹಿಡಿಯುವುದಾಗಿ ಭರವಸೆ ನೀಡಿದ್ದಾರೆ.



ಅನುದಾನದ ಲೆಕ್ಕ ಜನ ಕೇಳಬೇಕೆ ಹೊರತು ಸಂಸದರಲ್ಲ

ಹೆಚ್‌ಡಿಕೆಗೆ ಜಿಲ್ಲಾ ಉಸ್ತುವಾರಿ ಸಚಿವರ ತಿರುಗೇಟು

ಮದ್ದೂರು, ಮಾ.12– ರಾಜ್ಯ ಸರ್ಕಾರ ಜಿಲ್ಲೆಗೆ ಬಿಡುಗಡೆಗೊಳಿಸಿರುವ ಅನುದಾನದ ಲೆಕ್ಕವನ್ನು ಜಿಲ್ಲೆ ಜನತೆ ಕೇಳಬೇಕೆ ಹೊರತು ಸಂಸದರಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ತಿರುಗೇಟು ನೀಡಿದರು.

ತಾಲೂಕಿನ ಸೋಮನಹಳ್ಳಿ ಬಳಿ 188 ಕೋಟಿ ರೂ. ವೆಚ್ಚದ 220 ಕೆವಿ ಸಬ್‌ಸ್ಟೇಷನ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಂಡ್ಯ ಜಿಲ್ಲೆಗೆ 10 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡಿದೆ. ಅದರ ಅಂಕಿ ಅಂಶಗಳನ್ನು ಇಲಾಖಾವಾರು ನೀಡುವಂತೆ ಜಿಲ್ಲೆ ಸಂಸದರು ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಲೆಕ್ಕ ಕೇಳಿದ್ದಾರೆ. ಆದರೆ ಲೆಕ್ಕವನ್ನು ಜಿಲ್ಲೆಯ ಜನತೆ ಕೇಳಬೇಕೆ ಹೊರತು ಅವರಲ್ಲ. ಅವರೇನು ಜಿಲ್ಲೆಯ ಮತದಾರರಲ್ಲ. ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡು ಜಿಲ್ಲೆಯ ಜನತೆ ಅವರಿಗೆ ಆಶೀರ್ವಾದ ಮಾಡಿದ್ದಾರೆ. ಜನರ ನಿರೀಕ್ಷೆ ಹುಸಿಯಾಗದಂತೆ ಕೇಂದ್ರ ಸಚಿವರು ಕೆಲಸ ಮಾಡಲಿ ಲೆಕ್ಕ ಕೊಡುವ ಸಮಯ ಬರುತ್ತದೆ. ಆಗ ಅಂಕಿ ಅಂಶಗಳ ಪ್ರಕಾರ ದಾಖಲೆ ಸಹಿತ ನೀಡಲಾಗುವುದು ಎಂದು ಕುಟುಕಿದರು.

ಕಳೆದ 3 ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಮೈಸೂರು ಹೊರತುಪಡಿಸಿ ಅತೀ ಹೆಚ್ಚು ಅನುದಾನ ಬಿಡುಗಡೆಯಾಗಿರುವುದು ಮಂಡ್ಯ ಜಿಲ್ಲೆಗೆ. ಸ್ವಾತಂತ್ರ್ಯ ಬಂದ ನಂತರ ತೂಬಿನಕೆರೆ ಬಳಿ ಮಾತ್ರ 220 ಕೆವಿ ಸಬ್‌ಸ್ಟೇಷನ್ ಮಾತ್ರ ಇತ್ತು. ನಂತರ ಕೆ.ಆರ್.ಪೇಟೆ, ಶ್ರೀರಂಗಪಟ್ಟಣ, ನಾಗಮಂಗಲದಲ್ಲಿತ್ತು ಮದ್ದೂರಿಗೂ 220ಕೆವಿ ಸಬ್‌ಸ್ಟೇಷನ್ ನಿರ್ಮಾಣ ಮಾಡಬೇಕೆಂದು 25 ವರ್ಷಗಳಿಂದ ಹೋರಾಟ ನಡೆಯುತ್ತಿತ್ತು. ಆದರೆ, ಶಾಸಕ ಉದಯ್ ಅವರ 2 ವರ್ಷಗಳ ನಿರಂತರ ಪ್ರಯತ್ನದಿಂದಾಗಿ ಇಂದು ಚಾಲನೆ ನೀಡಲಾಗುತ್ತಿದೆ ಎಂದರು.

ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿಲ್ಲ. ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೂ ಚಾಲನೆ ನೀಡುತ್ತಿದ್ದೇವೆ. ಕೆಆರ್‌ಎಸ್ ಜಲಾಶಯ ನಿರ್ಮಾಣಗೊಂಡ ನಂತರ ಮಾಜಿ ಸಚಿವ ನಾಗೇಗೌಡರ ಕಾಲದಲ್ಲಿ ಕೆಲವು ಭಾಗಗಳಲ್ಲಿ ನಾಲೆಗಳ ಆಧುನಿಕರಣ ಮಾಡಲಾಗಿತ್ತು. ಆನಂತರ ಯಾವುದೇ ಅಭಿವೃದ್ಧಿ ಕೆಲಸಗಳು ನಡೆದಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿಶ್ವೇಶ್ವರಯ್ಯ ನಾಲೆಗಳ ಆಧುನೀಕರಣ ಮಾಡಲಾಗುತ್ತಿದೆ. ಮೈಷುಗರ್ ಕಾರ್ಖಾನೆಗೆ 65 ಕೋಟಿ ರೂ. ವೆಚ್ಚದಲ್ಲಿ ಬಾಯ್ಲಿಂಗ್ ಹೌಸ್ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರಕಲಿದೆ. ಬಳಿಕ ಡಿಸ್ಟಿಲರಿ ವಿಭಾಗ ನಿರ್ಮಾಣ ಮಾಡಿದರೆ ಮೈಷುಗರ್ ಕಾರ್ಖಾನೆ ಯಾವುದೇ ಲೋಪದೋಷಗಳಿಲ್ಲದೆ ಕಾರ್ಯಾರಂಭ ಮಾಡಲಿದೆ ಎಂದರು.

ಶಾಸಕ ಕೆ.ಎಂ.ಉದಯ್, ಎಂಎಲ್‌ಸಿ ದಿನೇಶ್ ಗೂಳಿಗೌಡ, ಗ್ಯಾರಂಟಿ ಯೋಜನೆ ತಾಲೂಕು ಅಧ್ಯಕ್ಷ ಬಿ.ಬಸವರಾಜು, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಚಲುವರಾಜು, ನಿರ್ದೇಶಕ ಪಿ.ಸಂದರ್ಶ್, ಗ್ರಾಪಂ ಮಾಜಿ ಅಧ್ಯಕ್ಷ ಶಂಕರ್, ಗುತ್ತಿಗೆದಾರ ಶಿವಶಂಕರ್, ಮುಖಂಡ ರಘು, ಜಿಲ್ಲಾ ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮೋಹನ್ ಕುಮಾರ್, ರಾಜೀವ್, ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಮಹಿಳಾ ಘಟಕದ ಅಧ್ಯಕ್ಷೆ ಮಮತಾ, ಸೆಸ್ಕ್‌ನ ವೆಂಕಟೇಶ್, ಇಇಗಳಾದ ಕಿಶೋರ್, ಶಿವಕುಮಾರ್, ಕಿರಣ್ ಇದ್ದರು.



ಸಬ್‌ಸ್ಟೇಷನ್ ನಿರ್ಮಾಣ ಕಾಮಗಾರಿಗೆ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

> 220 ಕೆವಿ ಸಬ್‌ಸ್ಟೇಷನ್ ಯೋಜನೆಗೆ ಸರ್ಕಾರದ ಮಟ್ಟದಲ್ಲಿ ಹೋರಾಟ ಮಾಡಿ 188 ಕೋಟಿ ಅನುದಾನ ತಂದಿರುವುದು ಪ್ರಶಂಸನೀಯ. ಈ ಕಾಮಗಾರಿ ಪೂರ್ಣಗೊಂಡರೆ ಮದ್ದೂರು, ಶ್ರೀರಂಗಪಟ್ಟಣ, ನಾಗಮಂಗಲ, ಮಳವಳ್ಳಿ ತಾಲೂಕುಗಳಿಗೆ ಅನುಕೂಲವಾಗಲಿದೆ. ಆದ್ದರಿಂದ ರೈತರು ಹಾಗೂ ಜನತೆ ಪರವಾಗಿ ವೈಯಕ್ತಿಕವಾಗಿ ಕೆ.ಎಂ.ಉದಯ್‌ಗೆ ಅಭಿನಂದನೆ ಸಲ್ಲಿಸುತ್ತೇನೆ. –ರಮೇಶ್‌ಬಾಬು, ಶಾಸಕ.

ಒಳ ಮೀಸಲಾತಿ ಹೋರಾಟ ಬೆಂಬಲಿಸಿ ಚಾ.ನಗರ ಜಿಲ್ಲೆಯಿಂದ ತೆರಳಿದ ಮುಖಂಡರು

ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ

ಚಾಮರಾಜನಗರ: ಒಳಮೀಸಲಾತಿಯಿಲ್ಲದೆ ಉದ್ಯೋಗ ಭರ್ತಿ ಮಾಡುವುದು ಮಹಾದ್ರೋಹವೆಂದು ಖಂಡಿಸಿ ಒಳಮೀಸಲಾತಿ ಹೋರಾಟ ಸಮಿತಿ ವತಿಯಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಇಂದಿನಿಂದ ನಡೆಯುತ್ತಿರುವ ಬೃಹತ್ ಪ್ರತಿಭಟನೆಗೆ ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟ ಗೌರವಾಧ್ಯಕ್ಷ ಬಸವನಪುರ ರಾಜ ಶೇಖರ ಅವರ ನೇತೃತ್ವದಲ್ಲಿ ಸಮುದಾಯ ಮುಖಂಡರು ನಗರದಿಂದ ಬಸ್ಸಿನಲ್ಲಿ ತೆರಳಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಒಳ ಮೀಸಲಾತಿ ಜಾರಿಗೆ ಮಾಡಬೇಕು ಎಂದು ಘೋಷಣೆ ಕೂಗಿದರು.

ಹೋರಾಟದ ನೇತೃತ್ವ ವಹಿಸಿರುವ ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟ ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಮಾತನಾಡಿ, ಒಳಮೀಸಲಾತಿಯಿಲ್ಲದೆ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ಮಹಾದ್ರೋಹ ಖಂಡಿಸಿ ಒಳಮೀಸಲಾತಿ ಹೋರಾಟ ಸಮಿತಿಯಿಂದ ವತಿಯಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಇಂದಿನಿಂದ ನಡೆಯುತ್ತಿರುವ ಬೃಹತ್ ಪ್ರತಿಭಟನೆಗೆ ಜಿಲ್ಲೆಯಿಂದ ಸಾವಿರಕ್ಕೂ ಅಧಿಕ ಮುಖಂಡರು 20 ಬಸ್ಸಿನಲ್ಲಿ ಭಾಗವಹಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಡಾ.ಬಾಬು ಜಗಜೀವನ್ ರಾಮ್ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್. ಹೆಚ್.ನಾಗರಾಜ್, ಉಪಾಧ್ಯಕ್ಷರಾದ. ಹೆಚ್.ಮೂಡಳ್ಳಿ ಮೂರ್ತಿ, ಬ್ಯಾಂಕ್ ಬಸವರಾಜು ಜಿಲ್ಲಾ ಉಪಾಧ್ಯಕ್ಷರು ವೈ.ಎಸ್.ನಾಗರಾಜ್, ಪಾಪಣ್ಣ, ಬದನಗುಪ್ಪೆ ಮರಿಸ್ವಾಮಿ, ಯಜಮಾನ ಮಹದೇವಯ್ಯ, ಕೆಂಪಣ್ಣ, ಚನ್ನಬಸವಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಸಹ ಕಾರ್ಯದರ್ಶಿ ಶಿವಕುಮಾರ್ ರಾಮಸಮುದ್ರ. ಮುಖಂಡರಾದ ಯಜಮಾನ ಸಿದ್ದಪ್ಪಾಜಿ. ಅರಕಲವಾಡಿ ಮಹದೇವಯ್ಯ. ಕೆಸ್ತೂರುಮರಪ್ಪ, ವೆಲ್ಡಿಂಗ್ ಲಿಂಗರಾಜು, ಜಯಶೀಲ, ವೆಂಕಟಯ್ಯ ಯುವ ಮುಖಂಡರಾದ ಆರ್.ಎನ್. ಶಿವಣ್ಣ, ಸುಂದರ, ಡೈರಿ ಲಿಂಗರಾಜು. ಬಸವನಪುರ ಮಹದೇವಸ್ವಾಮಿ, ಅರಕಲ ವಾಡಿ ಸಿದ್ದರಾಜು, ರಾಜು ಸಿ. ಮಹದೇವಸ್ವಾಮಿ, ಮಹೇಶ, ಮೂಡಳ್ಳಿ ಶಂಕರ, ಜಯರಾಜು, ಬಸವನಪುರ ಸತೀಶ್, ಪ್ರಸನ್ನ, ರಾಜೇಶ, ಲಿಂಗರಾಜು, ಸುರೇಶ, ಶಿವಕುಮಾರ್, ಶಿವಕುಮಾರ್ ಇತರರು ಹಾಜರಿದ್ದರು.



ಬೆಂಗಳೂರು ಹೋರಾಟ ಬೆಂಬಲಿಸಿ ಪ್ರಯಾಣ ಬೆಳೆಸಿದ ಮುಖಂಡರು.

ಹಳೇ ಮೀಸಲಾತಿ ಮುಂದುವರಿಸುವಂತೆ ಒತ್ತಾಯಿಸಿ ಸಿಎಂಗೆ ಮನವಿ

ಚಾಮರಾಜನಗರ: ಪರಿಶಿಷ್ಟ ಜಾತಿಯ ಶೇ.15 ರಷ್ಟು ಮೀಸಲಾತಿಯಲ್ಲಿ ಒಳಮೀಸಲಾತಿ ಬೇಡ , ಹಳೆ ಮೀಸಲಾತಿಯನ್ನು ಮುಂದುವರಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಬಂಜಾರ, ಭೋವಿ, ಕೊರಚ ಮತ್ತು ಕೊರಮ ಸಮಾಜಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಒಳಮೀಸಲಾತಿ ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿ ಎಂದು ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ ಇದರಿಂದ ಎಲ್ಲ ಸವಲತ್ತುಗಳ ಎ.ಗುಂಪಿನ ಸಮುದಾಯಕ್ಕೆ ಸಿಗುತ್ತದೆ ಇದರಿಂದ ಬಿ ಮತ್ತು ಸಿ ಗುಂಪಿನ ಸಮುದಾಯಗಳಿಗೆ ಅನ್ಯಾಯ ಆಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರ ಒಳ ಮೀಸಲಾತಿ ಪರಿಗಣಿಸದೆ ಹಿಂದಿನ ಪರಿಶಿಷ್ಟ ಜಾತಿ ಶೇ.15ರ ಮೀಸಲಾತಿಯ ಮಾನದಂಡಗಳನ್ನು ಮಾಡುವ ಮೂಲಕ ಪ್ರವರ್ಗ ಬಿ. ಪ್ರವರ್ಗ ಸಿ ಗುಂಪಿನ ಸಮುದಾಯಕ್ಕೆ ನ್ಯಾಯ ಕೊಡಿಸಿಕೊಡಬೇಕು ಎಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಅಖಿಲ ಕರ್ನಾಟಕ ಬಂಜಾರ, ಭೋವಿ, ಕೊರಚ ಮತ್ತು ಕೊರಮ ಸಮಾಜಗಳ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಲಂಬಾಣಿ ಸೇವಾ ಸಂಘದ ಜಿಲ್ಲಾಧ್ಯಕ್ಷ ಶಿವಾಜಿ ಆರ್. ಮೆಘಾವತ್, ತಾ.ಪಂ.ಮಾಜಿ ಸದಸ್ಯ ಕುಮಾರ್ ನಾಯಕ್, ಕೊರಮ ಜನಾಂಗದ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀನಿವಾಸಮೂರ್ತಿ, ವೆಂಕಟೇಶ್ ನಾಯಕ್, ಬಾಲಾಜಿ, ಪಳನಿಸ್ವಾಮಿ, ಬಸವರಾಜು, ಜ್ಯೋತಿ, ಉಲ್ಲೇಶ್ ನಾಯಕ್, ನಾಗೇಶ್, ಉಮಾಶಂಕರ್, ವೆಂಕಟೇಶ್ ನಾಯಕ್, ಬಾಲಾಜಿ ನಾಯಕ್ ಇತರರು ಹಾಜರಿದ್ದರು.

ಗ್ಯಾಸ್ ದರ ಹೆಚ್ಚಳ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ತೊಲಗಲಿ ತೊಲಗಲಿ ಕೇಂದ್ರ ಬಿಜೆಪಿ ಸರ್ಕಾರ ತೊಲಗಲಿ ಘೋಷಣೆ ಕೂಗಿ ಆಕ್ರೋಶ

ಚಾಮರಾಜನಗರ: ಅಡುಗೆ ಅನಿಲ ಸಿಲಿಂಡರ್ ಬೆಲೆ ಹೆಚ್ಚಳ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಘಟಕದ ಕಾರ್ಯಕರ್ತರು, ಮುಖಂಡರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ. ಪಿ.ಮರಿಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ 'ತೊಲಗಲಿ ತೊಲಗಲಿ ಕೇಂದ್ರ ಬಿಜೆಪಿ ಸರ್ಕಾರ ತೊಲಗಲಿ' ಎಂದು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕಾಡಾ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಪಿ.ಮರಿಸ್ವಾಮಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ನಿರಂತರವಾಗಿ ಅಗತ್ಯವಸ್ತುಗಳ ಬೆಲೆ ಏರಿಕೆ ಮಾಡುತ್ತಾ ಬಂದಿದ್ದು ಯುದ್ಧದ ನೆಪದಲ್ಲಿ ಅಡುಗೆ ಅನಿಲ ಸಿಲಿಂಡರ್‌ಗೆ 60 ರೂ. ವಾಣಿಜ್ಯ ಸಿಲಿಂಡರ್ ಬೆಲೆಯನ್ನು 114.50ಕ್ಕೆ ಹೆಚ್ಚಳ ಮಾಡುವ ಮೂಲಕ ಜನತೆಗೆ ತೊಂದರೆ ಮಾಡಿದ್ದಾರೆ ಎಂದು ಆರೋಪಿಸಿದರು.

'ಬೆಲೆ ಹೆಚ್ಚಳ ಖಂಡಿಸಿ ಜನಸಾಮಾನ್ಯರ ಪರವಾಗಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದ್ದು, ದೇಶದ ಉದ್ದಗಲದಲ್ಲಿಯೂ ವ್ಯಾಪಕವಾಗಿ ಖಂಡಿಸಲಾಗುತ್ತಿದೆ. ಇನ್ನಾದರೂ ಸಿಲಿಂಡರ್ ಬೆಲೆ ಕಡಿಮೆ ಮಾಡಬೇಕು' ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಚೂಡಾ ಅಧ್ಯಕ್ಷ ಮಹಮ್ಮದ್‌ಅಸ್ಗರ್, ಎಪಿಎಂಸಿ ಅಧ್ಯಕ್ಷ ಗುರುಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಮಧುಸೂದನ್, ಜಿಲ್ಲಾ ಸಾಮಾಜಿಕ ಜಾಲತಾಣ ಅಧ್ಯಕ್ಷ ನಾಗೇಂದ್ರ ಎಸ್, ಯುವ ಕಾಂಗ್ರೆಸ್ ಅಧ್ಯಕ್ಷ ಸಿ. ಯೋಗೇಂದ್ರ, ಪ್ರಧಾನ ಕಾರ್ಯದರ್ಶಿ ಸಚಿನ್, ಟೌನ್ ಅಧ್ಯಕ್ಷ ಅಕ್ಷಯ್ ಕುಮಾರ್, ಎನ್‌ಎಸ್‌ಯುಐ ಉಪಾಧ್ಯಕ್ಷ ಮುತ್ತು, ಶಶಾಂಕ್, ಸಂಜು, ನವೀನ್, ದರ್ಶನ, ಪ್ರದೀಪ್, ಕುದೇರು ಲಿಂಗಣ್ಣ, ಸೋಮಣ್ಣ, ಚಿನ್ನಮ್ಮ, ಸೈಯದ್‌ರಫೀ, ಗುರುಸ್ವಾಮಿ, ತೋಟೇಶ್, ಚಂದ್ರು ಸೋಮೇಶ್, ಚೇತನ್, ನಾಗಯ್ಯ, ಪ್ರಕಾಶ್, ಬಸವರಾಜು, ನಾಗೇಂದ್ರ ರೇವಣ್ಣ, ಸೋಮೇಶ್, ನಾಗರಾಜು, ಪ್ರಸನ್ನ, ಕುಮಾರ್, ಸ್ವಾಮಿ, ಗೌಡಹಳ್ಳಿ ರಾಜೇಶ್ ಇತರರು ಭಾಗವಹಿಸಿದ್ದರು.



ಗ್ಯಾಸ್ ಬೆಲೆ ಹೆಚ್ಚಳ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಘಟಕದ ವತಿಯಿಂದ ಚಾ.ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಚಾಕುವಿನಿಂದ ಚುಚ್ಚಿ ಕೊಲೆ: ಆರೋಪಿ ಸೆರೆ




ಆರೋಪಿ ಅಜಯ್

ಗುಂಡ್ಲುಪೇಟೆ ಮಾ.12– ಪಟ್ಟಣದ ದೊಡ್ಡಕೆರೆಯಂಗಳದಲ್ಲಿ ಬುಧವಾರ ಸಂಜೆ ಕತ್ತು ಸೀಳಿದ ಸ್ಥಿತಿಯಲ್ಲಿ ಸಿಕ್ಕಿದ ವ್ಯಕ್ತಿಯ ಗುರುತು ಪತ್ತೆಹಚ್ಚಿರುವ ಪೊಲೀಸರು 24 ಗಂಟೆಯೊಳಗೆ ಆರೋಪಿಯನ್ನು ಬಂಧಿಸಿದ್ದಾರೆ.

ಘಟನೆ ವಿವರ: ತಾಲೂಕಿನ ಕೂತನೂರು ಗ್ರಾಮದ ನಂಜುಂಡಸ್ವಾಮಿ(22) ಎಂಬಾತನೇ ಕೊಲೆಯಾದ ದುರ್ದೈವಿ. ಈತನ ಮೃತದೇಹ ಬುಧವಾರ ಸಂಜೆ ಪತ್ತೆಯಾದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಎಸ್ಪಿ ಮುತ್ತುರಾಜ್ ಹಾಗೂ ಡಿವೈಎಸ್‌ಪಿ ಸ್ನೇಹರಾಜ್ ಭೇಟಿ ನೀಡಿ ಪರಿಶೀಲಿಸಿದರು. ಸ್ಥಳದಲ್ಲಿ ಪೊಲೀಸ್ ಶ್ವಾನ ದಳದ ನೆರವು ಹಾಗೂ ಮೃತನ ಮೊಬೈಲ್ ಕಾಲ್ ಲಿಸ್ಟ್ ಆಧಾರದ ಮೇಲೆ ಅದೇ ಗ್ರಾಮದ ಅಜಯ್ @ ಪ್ರಮೋದ್ ಎಂಬಾತ ನನ್ನು ಬಂಧಿಸಲಾಗಿದೆ. ಆದರೆ ಘಟನೆ ನಂತರ ಮೊಬೈಲ್ ಆಫ್ ಮಾಡಿ ಮೈಸೂರಿನ ಕಡೆಗೆ ತೆರಳುತ್ತಿರುವ ಖಚಿತ ಮಾಹಿತಿ ಮೇರೆಗೆ ನಂಜನಗೂಡು ಸಮೀಪ ವಶಕ್ಕೆ ಪಡೆದರು. ಪದೇ ಪದೇ ದುಡ್ಡು ಕೇಳುತ್ತಿದ್ದ. ಕುಡಿದ ಮತ್ತಿನಲ್ಲಿ ಹೊಡೆಯಲು ಬಂದಾಗ ಚಾಕುವಿನಿಂದ ಚುಚ್ಚಿದ್ದಾಗಿ ಆರೋಪಿ ಹೇಳಿದ್ದಾನೆ. ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕಡಲ್‌ಕೋಟೆ' ಕಡಲಕಿನಾರೆಯ
ಗ್ಯಾಂಗ್‌ಸ್ಟರ್ ಕಥೆ



ಕರಾವಳಿ ಪ್ರದೇಶದಲ್ಲಿ ನಡೆಯೋ ಗ್ಯಾಂಗ್‌ಸ್ಟರ್ ಕಥೆಯನ್ನು ರಂಜಿತ್ ಕುಮಾರ್‌ಗೌಡ ಅವರು ಕಡಲ್‌ಕೋಟೆ ಚಿತ್ರದ ಮೂಲಕ ಹೇಳ ಹೊರಟಿದ್ದಾರೆ. ಧರ್ಮೇಂದ್ರ ನಿರ್ಮಿಸುತ್ತಿರುವ ಈ ಚಿತ್ರದ ಮುಹೂರ್ತ ಸುರತ್ಕಲ್‌ನ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ನೆರವೇರಿತು. ಈ ಚಿತ್ರದಲ್ಲಿ ವಸಿಷ್ಠಸಿಂಹ ನಾಯಕನಾಗಿ ನಟಿಸುತ್ತಿದ್ದಾರೆ.

ಚಿತ್ರದ ಕಂಟೆಂಟ್ ಕುರಿತು ಮಾತನಾಡಿದ ನಿರ್ದೇಶಕರು, ಮನುಷ್ಯ ದುಡ್ಡಿನ ಹಿಂದೆ ಹೋದಾಗ, ಅವನ ಜೀವನದಲ್ಲಿ ಏನೆಲ್ಲಾ ನಡೆದುಹೋಗುತ್ತದೆ ಎಂದು ಈ ಚಿತ್ರದಲ್ಲಿ ತೋರಿಸುತ್ತಿದ್ದೇವೆ. ಹಾರ್ಬರ್‌ನಲ್ಲಿ ನಡೆಯುವ ಶೋಷಣೆ ಮತ್ತು ಸಂಘರ್ಷ, ಇದರ ನಡುವೆ ಬೆಂಕಿಯಲ್ಲಿ ಅರಳಿದ ಹೂವು ಎನ್ನುವ ಹಾಗೆ ನಾಯಕ ಹೇಗೆ ಎದ್ದು ಬರುತ್ತಾನೆ ಎಂದು ಈ ಚಿತ್ರದಲ್ಲಿ ಹೇಳುತ್ತಿದ್ದೇವೆ. ಇದೊಂದು ಪಕ್ಕಾ ಕಮರ್ಷಿಯಲ್ ಚಿತ್ರ. ಒಂದಷ್ಟು ನೈಜ ಘಟನೆಗಳನ್ನಾಧರಿಸಿ ಈ ಕಥೆ ಮಾಡಿದ್ದೇವೆ. ಉಡುಪಿ, ಸುರತ್ಕಲ್, ಮಂಗಳೂರು ಹಾರ್ಬರ್ ಸುತ್ತಮುತ್ತ 65 ದಿನಗಳ ಕಾಲ ಚಿತ್ರೀಕರಣ ಮಾಡುವ ಯೋಜನೆಯಿದೆ ಎಂದರು.

ನಾಯಕ ವಸಿಷ್ಠಸಿಂಹ ಮಾತನಾಡಿ, ನಿರ್ದೇಶಕರು ಪ್ರತಿ ಪಾತ್ರವನ್ನೂ ಅಚ್ಚುಕಟ್ಟಾಗಿ ಬರೆದಿದ್ದಾರೆ. ಅವರ ಉತ್ತಮ ಬರವಣಿಗೆಯೇ ನಾನೀ ಪಾತ್ರ ಒಪ್ಪಲು ಕಾರಣ. ಕರಾವಳಿ ಭಾಗದಲ್ಲಿ ನಡೆದ ಹಲವಾರು ಘಟನೆಗಳನ್ನಾಧರಿಸಿ ಈ ಸ್ಕ್ರಿಪ್ಟ್ ಮಾಡಿದ್ದಾರೆ. ಈ ಕಥೆ ಹೆಚ್ಚು ನೈಜವಾಗಿದೆ ಮತ್ತು ಮನಸ್ಸಿಗೆ ಬಹಳ ಹತ್ತಿರವಾಗುವಂತಿದೆ. ಗ್ಯಾಂಗ್‌ಸ್ಟರ್ ಕಥೆಯಾದರೂ, ಚಿತ್ರದಲ್ಲಿ ಒಳ್ಳೆಯ ಮೌಲ್ಯಗಳಿವೆ. ಬಹಳ ದಿನಗಳ ನಂತರ ನಾನು ಮಾಸ್ ಪಾತ್ರ ಮಾಡುತ್ತಿದ್ದೇನೆ. ರವಿಶಂಕರ್ ಜೊತೆ ಮೂರನೇ ಚಿತ್ರ ಎಂದರು.

ನಿರ್ಮಾಪಕ ಧರ್ಮೇಂದ್ರ ಮಾತನಾಡಿ ನಾನು ನೋಡಿದ ಮತ್ತು ಕೇಳಿದ ಘಟನೆಗಳನ್ನು, ನಿರ್ದೇಶಕ ರಂಜಿತ್ ಅವರಿಗೆ ಹೇಳಿದಾಗ ಈ ಕಥೆ ರೂಪುಗೊಂಡಿತು. ನಮ್ಮ ಚಿತ್ರತಂಡದಲ್ಲಿ ಅದ್ಭುತವಾದ ತಾರಾಬಳಗವಿದೆ. ಮುಂದೆ ಇನ್ನಷ್ಟು ಉತ್ತಮ ಚಿತ್ರಗಳನ್ನು ನಿರ್ಮಿಸುವ ಆಸೆಯಿದೆ ಎಂದರು.

ನಟ ರವಿಶಂಕರ್ ಈ ಚಿತ್ರದಲ್ಲಿ ಒಬ್ಬ ಸೂತ್ರಧಾರನ ಪಾತ್ರ ಮಾಡುತ್ತಿದ್ದಾರಂತೆ. ನನ್ನ ಪಾತ್ರದ ಮೂಲಕ ಇಡೀ ಚಿತ್ರದ ಕಥೆ ಮುಂದುವರೆಯುತ್ತದೆ. ನನಗೆ ಇನ್ನೊಂದು ಒಳ್ಳೆಯ ಚಿತ್ರ ಇದಾಗುತ್ತದೆ ಎಂಬ ನಂಬಿಕೆಯಿದೆ ಎಂದರು. ನಾಯಕಿಯಗಿ ಸುಷ್ಮಿತಾಭಟ್ ಅಲ್ಲದೆ ಅಚ್ಯುತ್‌ಕುಮಾರ್ ಶಶಾಂಕ್ ಶೇಷಗಿರಿ ಅವರ ಸಂಗೀತ, ವೀನಸ್ ನಾಗರಾಜಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.





ಸರ್ಸೇ ನಿನ್ನ ಸೆರಗಾ... 'ಕೆಡಿ' ಹೊಸ ಹಾಡು

ಸಾಕಷ್ಟು ಕುತೂಹಲ ಹಾಗೂ ನಿರೀಕ್ಷೆ ಹುಟ್ಟು ಹಾಕಿರುವ ಬಿಗ್ ಸ್ಟಾರ್‌ಕಾಸ್ಟ್ ಒಳಗೊಂಡ ಚಿತ್ರ ಕೆಡಿ. ಧ್ರುವ ಸರ್ಜಾ, ಜೋಗಿ ಪ್ರೇಮ್ ಕಾಂಬಿನೇಶನ್‌ನಲ್ಲಿ ಮೂಡಿ ಬಂದಿರುವ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಚಿತ್ರವನ್ನು ಕೆ.ವಿ.ಎನ್. ಪ್ರೊಡಕ್ಷನ್ಸ್ ಬಿಗ್‌ಬಜೆಟ್‌ನಲ್ಲಿ ನಿರ್ಮಿಸಿದೆ.

'ಕೆಡಿ' ಚಿತ್ರ ಏ.30ರಂದು ದೇಶಾದ್ಯಂತ ತೆರೆ ಕಾಣಲಿದ್ದು, ಈ ಚಿತ್ರದ ಮತ್ತೊಂದು ಹಾಡು ಮಾ.14ರಂದು ಬಿಡುಗಡೆಯಾಗುತ್ತಿದೆ, ಸರ್ಸೇ ನಿನ್ನ ಸೆರಗಾ ಸರ್ಸೇ.. ಎಂಬ ಕ್ಯಾಚಿ ಲೈನುಗಳಿರೋ ಈ ಹಾಡು ಕನ್ನಡ, ಹಿಂದಿ, ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ರಿಲೀಸಾಗುತ್ತಿದೆ.

ಈಗಾಗಲೇ 'ಕೆಡಿ' ಚಿತ್ರದ ಶಿವಶಿವ ಹಾಡಿನ ಲಿರಿಕಲ್ ವಿಡಿಯೋ ಎಲ್ಲೆಡೆ ವೈರಲ್ ಆಗಿದ್ದು, ಈ ಹಾಡಿಗೆ ಪ್ರೇಮ್ ಹಾಗೂ ಕೈಲಾಶ್‌ಖೇರ್ ದನಿಯಾಗಿದ್ದಾರೆ. ಇದರ ಜತೆಗೆ ಚಿತ್ರದ ಮತ್ತೊಂದು ಹಾಡು ಆಕಾಶ ಭೂಮಿ ಸುತ್ತಿ, ಏಳೇಳ ಬೆಟ್ಟ ಹತ್ತಿ ಎಂಬ ಸಾಹಿತ್ಯ ಒಳಗೊಂಡಿದ್ದು ಕೇಳಲು ತುಂಬಾ ಸೊಗಸಾಗಿದೆ, ಈ ಹಾಡಿಗೂ ಸಹ ನಿರ್ದೇಶಕ ಪ್ರೇಮ್ ಅವರೇ ದನಿಯಾಗಿದ್ದು, ಮಂಜುನಾಥ್ ಬಿ.ಎಸ್. ಅವರು ಸಾಹಿತ್ಯ ರಚಿಸಿದ್ದಾರೆ. ಕೆಡಿ ಚಿತ್ರದ 6 ಸುಂದರ ಹಾಡುಗಳಿಗೆ ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ಶಿವ ಶಿವ ಹಾಡಲ್ಲಿ ಶಿವನ ವೈಭವೀಕರಣವನ್ನು ಗ್ರಾಫಿಕ್ ಮೂಲಕ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಆಕಾಶ ಭೂಮಿ ಹಾಡಲ್ಲಿ ಸಹೋದರ ಬಾಂಧವ್ಯದ ಕುರಿತಂತೆ ಹೇಳುತ್ತ ಅಣ್ತಮ್ಮ ಜೋಡೆತ್ತು ಕಣೋ ಎಂಬ ಪದ ಬಳಸಲಾಗಿದೆ. ಈ ಚಿತ್ರದಲ್ಲಿ ದ್ರುವಸರ್ಜಾ ಜತೆ ನಾಯಕಿಯಾಗಿ ರೀಶ್ಮಾ ನಾಣಯ್ಯ ನಟಿಸಿದ್ದಾರೆ, 1970-75ರಲ್ಲಿ ನಡೆದ ನೈಜ ಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರದಲ್ಲಿದೆ. ಕೆಡಿ ಚಿತ್ರಕ್ಕೆ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಇದೆ. ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಸಂಜಯ್ ದತ್ ಅಲ್ಲದೆ ಶಿಲ್ಪಾ ಶೆಟ್ಟಿ, ನೋರಾ ಫತೇಹಿ ಸೇರಿದಂತೆ ಬಾಲಿವುಡ್‌ನ ಅನೇಕ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ.

ಮನೆಯವರೆಲ್ಲ ಖುಷಿಯಿಂದಿದ್ದರೆ ಅದೇ 'ಪ್ರೇಮದ ಊರು'



ರಾಷ್ಟ್ರಪ್ರಶಸ್ತಿ ವಿಜೇತ ಅಕ್ಷಿ ಚಿತ್ರದ ನಿರ್ದೇಶಕ ಮನೋಜ್ ಕುಮಾರ್ ಇದೀಗ ಪ್ರೇಮದ ಊರಲಿ ಎಂಬ ಮ್ಯೂಸಿಕಲ್ ಲವ್‌ಸ್ಟೋರಿ ಹೇಳಹೊರಟಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆಯಾಯಿತು, . ಈ ಚಿತ್ರದಲ್ಲಿ ಇರುವುದೆಲ್ಲವ ಬಿಟ್ಟು, ಹೊಂದಿಸಿ ಬರೆಯಿರಿ ಖ್ಯಾತಿಯ ನಟ ಶ್ರೀಮಹದೇವ್ ನಾಯಕನಾಗಿ ನಟಿಸಿದ್ದು, ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ನಾಯಕಿಯರ ಪಾತ್ರ ನಿರ್ವಹಿಸಿದ್ದಾರೆ. ನಾಯಕನ ತಂದೆಯಾಗಿ ರಂಗಾಯಣ ರಘು ಕಾಣಿಸಿಕೊಂಡಿದ್ದಾರೆ.

ನಿರ್ದೇಶಕ ಮನೋಜ್‌ಕುಮಾರ್ ಮಾತನಾಡಿ, 'ಪ್ರೇಮದ ಊರಲಿ' ಇದೊಂದು ಅಪ್ಪಟ ಮ್ಯೂಸಿಕಲ್ ಲವ್ ಸ್ಟೋರಿಯಾಗಿದ್ದು, ಹಿನ್ನೆಲೆ ಸಂಗೀತ ಅದ್ಭುತವಾಗಿದೆ. ರಂಗಾಯಣ ರಘು ಅವರು ಇಡೀ ಸಿನಿಮಾಗೆ ದೊಡ್ಡ ಶಕ್ತಿಯಾಗಿ ನಿಂತಿದ್ದಾರೆ. ಅವರೊಂದು ವಿಶಿಷ್ಟ ಪಾತ್ರ ನಿರ್ವಹಿಸಿದ್ದಾರೆ. ಹಾಸನದಲ್ಲಿ ಸದಾ ಮಳೆಬರುವ ಲೊಕೇಶನ್‌ನಲ್ಲಿ ಈ ಚಿತ್ರದ ಶೂಟಿಂಗ್ ಮಾಡಿದ್ದೇವೆ. ನಾಯಕ ಶ್ರೀರಾಮ್ ಚಿತ್ರಕ್ಕೆ ಸಾಕಷ್ಟು ಶ್ರಮ ಹಾಕಿದ್ದಾರೆ. ನಾಯಕಿಯರು ಕೂಡ ಅದ್ಭುತವಾಗಿ ನಟಿಸಿದ್ದಾರೆ. ಇದು ನಾಗಣ್ಣ ಹಾಗೂ ಸಂತುವಿನ ಪುಟ್ಟ ಲೋಕ. ಊರು ಅಂದರೆ ಸಾವಿರ ಮನೆಗಳು, ನೂರು ಮನೆಗಳು ಇರಬೇಕು ಎಂಬುದಿಲ್ಲ. ಒಂದು ಮನೆಯಲ್ಲಿ ಎಲ್ಲರೂ ಲವಲವಿಕೆಯಿಂದ, ಖುಷಿಯಿಂದ, ಪ್ರೀತಿಯಿಂದ ಇದ್ದರೆ, ಅದೇ ನಮಗೆ ದೊಡ್ಡ ಊರು. ಅದೇ ಪ್ರೇಮದ ಊರಲಿ ಎಂದು ಚಿತ್ರದ ಕಂಟೆಂಟ್ ಬಗ್ಗೆ ಸಂಕ್ಷಿಪ್ತವಾಗಿ ಹೇಳಿಕೊಂಡರು.

ರಂಗಾಯಣ ರಘು ಮಾತನಾಡುತ್ತ, ತಪ್ಪುಗಳನ್ನು ಮಾಡ್ತಾ ಹೋಗಿ ಜೀವನದಲ್ಲಿ ಪಾಠ ಕಲಿಯೋ ವ್ಯಕ್ತಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನಗೆ ಮುಂಚಿನಿಂದಲೂ ಹಳ್ಳಿಯ ಕಥೆಗಳು ಎಂದರೆ ತುಂಬಾ ಇಷ್ಟ, ಡೈರೆಕ್ಟರ್ ಬಂದು ಕಥೆ ಹೇಳಿದಾಗ ತುಂಬಾನೇ ಇಷ್ಟವಾಯ್ತು. ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು.


'ಪ್ರೇಮದ ಊರಲಿ' ಚಿತ್ರವನ್ನು ವೆನಿಲ್ಲಾ ಎಂಟರ್‌ಟೈನ್ಮೆಂಟ್ಸ್, ಜಾನಕಮ್ಮ ಪ್ರೊಡಕ್ಷನ್ ಅಡಿ ಮಮತಾ ದೇವೇಂದ್ರ, ಪ್ರಶಾಂತ್ ಹಾಗೂ ರಮೇಶ್ ಸೇರಿ ನಿರ್ಮಾಣ ಮಾಡಿದ್ದಾರೆ. ಸುನಾದ ಗೌತಮ್ ಅವರ ಸಂಗೀತ ನಿರ್ದೇಶನ, ರಾಜ್ಕಾಂತ್ ಎಸ್.ಕೆ. ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.



ಸಿನಿಪದಬಂಧ-618



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1. ಪೂಜ್ಯ ವ್ಯಕ್ತಿಗಳಿಗೆ ಸಲ್ಲಿಸುವ ಸೇವೆಗೆ ವಿಷ್ಣುವರ್ಧನ್ - ಗೀತಾ ಅಭಿನಯವಿದೆ 4
3. ಶಂಕರ್‌ನಾಗ್ - ಆರತಿಯ ಪರಿಶುದ್ಧ ಪ್ರೀತಿ 5
5. ರವಿಚಂದ್ರನ್ ಕುಂಚ ಹಿಡಿದ ಚಿತ್ರಕಾರ 4
6. ಬಾಮೈದನ ಜೊತೆ ಬಂದವನು 2
7. ಸದಾಶಿವ _ _ _ _ 4
9. ಗಣೇಶ ಸುಬ್ರಮಣ್ಯ ಚಿತ್ರದ ನಾಯಕಿ 3
10. ಅಂಬಿ, ದೇವು ಬಾಗಿಲ ಬಳಿ ಸಮರ ಸಾರಿದ್ದಾರೆ 3
14. ತಣ್ಣನೆ ಗಾಳಿಯಲ್ಲಿ ಕಾಡೆಲ್ಲ ಅಲೆದು ಬಂದ ಗೆಲುವಿನ ಕೇಸರಿ 4
15. ಪ್ರಭಾಕರ್ ಅಭಿನಯದಲ್ಲಿ ಬಲವಿದೆ 2
16. ಮಣ್ಣಿನ ಮಗ ಚಿತ್ರದ ನಿರ್ದೇಶಕ 4
18. ಡಾ. ರಾಜ್‌ಕುಮಾರ್, ವಾಣಿವಿಶ್ವನಾಥ್, ಮಹಾಲಕ್ಷ್ಮಿ ಅಭಿನಯದ ಚಿತ್ರ 5
19. ಮುತ್ತಿನ ಹಾರ ಧರಿಸಿದ ನಟಿ 4

ಮೇಲಿನಿಂದ ಕೆಳಕ್ಕೆ

1. ನಮ್ಮ ಸಂಸಾರ ಸಂತೋಷದ ಕಡಲು ಇದ್ದಂತೆ ಅಲ್ಲವೇ.... 6
2. _ _ ಪಿಶಾಚಿ 2
3. ಭುಜಂಗಯ್ಯನ ದಶಾವತಾರ ಚಿತ್ರದ ನಾಯಕಿ 5
4. ಅಂಬರೀಷ್ ಅಭಿನಯದಲ್ಲಿ ಋತುವೊಂದು ಪುನಃ ಆಗಮಿಸಿದೆ 5
5. ಮಾಲಾಶ್ರೀ 'ಸ್ವಪ್ನದರಸಿ' 6
8. ತ್ರಿಲೋಕ ಸಂಚಾರಿ ಗೆಲುವು ಕಂಡಿದ್ದಾನೆ 6
11. ದುಡ್ಡು, ಜೇನಿನೊಂದಿಗೆ ಗ್ರಹ ಸೇರಿಕೊಂಡಿದೆ 6
12. ಗಗನದಿ ಉರಿದ ಜ್ಯೋತಿ 5
13. ಅನಂತ್ ನಾಗ್ - ವನಿತಾವಾಸು ಅಭಿನಯಕ್ಕೆ ಜನಾರ್ಧನ್ ನಿರ್ದೇಶಕ 4
17. ಈ ಚಿತ್ರಕ್ಕೆ ಅತಿಯಾದ ಬಾಯಾರಿಕೆಯಾಗಿದೆ 2

ಸಿನಿ ಪದಬಂಧ 617ರ ಉತ್ತರ

ಮುಂ	ಗಾ	ರು	ಮ	ಳೆ		ಜೂ		ಮೇ	ಘ	ಶ್ರೀ
ಗಾ			ಲ			ನ್		ಘ		
ರಿ		ಮಾ	ಯ	ದಂ	ತ	ಮ	ಳೆ	ಬಂ	ತ	ಣ್ಣ
ನ	ದಿ		ಮಾ			ಳೆ		ತು		
ಮಿಂ		ಮಾ	ರು	ತ				ಮೇ		ಅ
ಚು	ಮಿಂ		ತ		ಸಿ		ಮೇ	ಘ	ಮಾ	ಲೆ
					ಡಿ				ನ್ಯೂ	
	ಕ	ರಿ	ಮು	ಗಿ	ಲು		ಬೆ		ನ್	
	ರಾ						ಳ್ಳಿ		ರಾ	
	ವ		ಚ	ಲಿ	ಸು	ವ	ಮೋ	ಡ	ಗ	ಳು
ಸು	ಳಿ	ಗಾ	ಳಿ		ಳಿ		ಡ			

ವಿಜೇತರು: ಅಜೀಷ್ಮ, ನಂ.2642, ಪಂಪಾಪತಿ ರಸ್ತೆ, ಜಯನಗರ, ಮೈಸೂರು-17

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ದರ್ಶನ್ ಕಥೆಯಲ್ಲ ಈ 'ಬಾಸ್'!

ನಂಜುಂಡಿ ಕಲ್ಯಾಣ', 'ನಟ್ವರ್‌ಲಾಲ್' ಖ್ಯಾತಿಯ ತನುಷ್ ಶಿವಣ್ಣ ಅಭಿನಯಿಸಿರುವ, 2024-25ರಲ್ಲಿ ನಡೆದ ನೈಜ ಘಟನೆಯನ್ನಾಧರಿಸಿ ನಿರ್ಮಾಣವಾದ ಚಿತ್ರ 'ಬಾಸ್'. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆಯಾಯಿತು. ಅವರ ನಿರ್ದೇಶನದ ಈ ಚಿತ್ರದಲ್ಲಿ ಪಾಯಲ್ ಚಂಗಪ್ಪ, ಮೋನಿಕಾಗೌಡ ನಾಯಕಿಯರಾಗಿ ನಟಿಸಿದ್ದಾರೆ. ಈ ಸಂದರ್ಭದಲ್ಲಿ ನಿರ್ದೇಶಕ ವಿ.ಲವ ಮಾತನಾಡುತ್ತ 2024-25ರ ಸಮಯದಲ್ಲಿ ನಡೆದ ನೈಜ ಕ್ರೈಮ್ ಘಟನೆಯ ಪ್ರೇರಣೆಯಿಂದ ತಯಾರಾದ ಚಿತ್ರ. ವೃತ್ತಿಯಲ್ಲಿ ವಕೀಲ, ಈ ಚಿತ್ರದಲ್ಲಿ ಒಬ್ಬ ಸಿನಿಮಾ ಸೆಲೆಬ್ರಿಟಿಯ ಜೀವನದಲ್ಲಿ ನಡೆದ ಕ್ರೈಂ ಕಥೆಯನ್ನು ಹೇಳುತ್ತಿದ್ದೇನೆ. ನಾಯಕ ತನುಶ್ ಇದರಲ್ಲಿ ಒಬ್ಬ ಸ್ಟಾರ್ ನಟ, ಆತ ಒಂದು ಕೊಲೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಾಗ ನಡೆಯುವ ಕಥೆಯಿದು. ಇದನ್ನು ನಿರ್ದಿಷ್ಟವಾಗಿ ದರ್ಶನ್ ಅವರ ಕೇಸ್‌ಗೆ ಸಂಬಂಧಪಟ್ಟ ಕಥೆ ಎಂದು ಹೇಳಲು ಸಾಧ್ಯವಿಲ್ಲ. ಆ ಹೋಲಿಕೆಯಿರಬಹುದಷ್ಟೇ, ಇಂಥ ಸಾಕಷ್ಟು ಘಟನೆಗಳು ನಮ್ಮ ಸುತ್ತ ನಡೆಯುತ್ತಿರುತ್ತವೆ, ಸದ್ಯದಲ್ಲೇ ಟ್ರೈಲರ್ ಬಿಡುಗಡೆ ಮಾಡಲಿದ್ದು, ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರೋ ಯೋಜನೆಯಿದೆ ಎಂದರು.

ನಾಯಕ ನಟ ತನುಷ್ ಮಾತನಾಡಿ ನಾನು ಒಬ್ಬ ಸ್ಟಾರ್‌ನಟನ ಪಾತ್ರ ಮಾಡಿದ್ದೇನೆ. ಅವರ ಜೀವನದಲ್ಲಿ ಅನಿರೀಕ್ಷಿತವಾಗಿ ಏನೇನೆಲ್ಲಾ ನಡೆದುಹೋಗುತ್ತೆ ಎಂಬುದನ್ನು 'ಬಾಸ್' ಚಿತ್ರದಲ್ಲಿ ತೋರಿಸಲಾಗಿದೆ. 'ಬಾಸ್' ಅಂತ ಹೆಸರಿಟ್ಟ ಕೂಡಲೇ ಇದು ದರ್ಶನ್ ಅವರ ಕಥೆಯೇ ಎಂದು ಹೇಳಲಾಗದು. ಇದೊಂದು ಮರ್ಡರ್ ಮಿಸ್ಟ್ರಿ ಕಥೆ. ಕ್ರೈಂ, ಥ್ರಿಲ್ಲರ್‌ಗೆ ಏನೆಲ್ಲಾ ಬೇಕೋ ಅದೆಲ್ಲವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ, ಯಾರಿಗೂ ಹರ್ಟ್ ಮಾಡಬೇಕು ಎಂದು ಈ ಚಿತ್ರ ಮಾಡಿಲ್ಲ, ಚಿತ್ರದ ಪ್ರತಿಸೀನ್ ಪ್ರೇಕ್ಷಕರಲ್ಲಿ ಕ್ಯೂರಿಯಾಸಿಟಿ ಮೂಡಿಸುತ್ತಾ ಸಾಗುತ್ತದೆ ಎಂದು ಹೇಳಿದರು. ಸಿರಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿ ನಿರ್ಮಾಣವಾದ ಈ ಚಿತ್ರಕ್ಕೆ 'ಸತ್ಯಮೇವ ಜಯತೇ' ಅಡಿಬರಹವಿದೆ. ಈ ಚಿತ್ರಕ್ಕೆ ಶರತ್ ಅವರ ಛಾಯಾಗ್ರಹಣ, ದೇವಿ ಸುರೇಶ್ ಅವರ ಸಂಗೀತ ಸಂಯೋಜನೆಯಿದ್ದು, ಪ್ರಮುಖ ತಾರಾಗಣದಲ್ಲಿ ಡಾಕ್ಟರ್ ವಿಜಯಶ್ರೀ, ಸುಜನೀಷ್ ಶೆಟ್ಟಿ, ವಿರೇನ್ ಕೇಶವ, ಮಹೇಶ್, ಭೀಷ್ಮ ರಾಮಯ್ಯ ಇತರರು ಅಭಿನಯಿಸಿದ್ದಾರೆ.



ಮಹಾಕಾಳಿಪುತ್ರ ರೈತನಿಂದ ಸೈನಿಕನವರೆಗೆ ಸಾಗೋ ಕಥೆ...



ಹಿಂದಿನ ಕಾಲದಲ್ಲಿ ರೈತರು ಪ್ರಾಮಾಣಿಕವಾಗಿ ನಿಯತ್ತಿನಿಂದ ದುಡಿದು ದೇಶಕ್ಕೆ ಅನ್ನ ಹಾಕ್ತಿದ್ದರು. ಇವತ್ತು ಆ ರೈತ ಬೆಳೆದ ಬೆಳೆಗೆ ಸಿಗಬೇಕಾದ ಬೆಲೆ ಸಿಗ್ತಿಲ್ಲ. ಮಣ್ಣನ್ನು ನಂಬಿ ದುಡಿಯುವ ರೈತನಿಂದ ಹಿಡಿದು ದೇಶ ಕಾಯೋ ಸೈನಿಕನಿಗೆ ಲಿಂಕ್ ಕೊಟ್ಟು ಮಾಡಿರುವ ಚಿತ್ರ 'ಮಹಾಕಾಳಿಪುತ್ರ.' ಗಿರೀಶ್ ಎಸ್.ಎಂ. ಅವರ ನಿರ್ಮಾಣ ನಿರ್ದೇಶನದ ಜತೆ ನಾಯಕನಾಗೂ ನಟಿಸುತ್ತಿರುವ ಈ ಚಿತ್ರದ ಟೈಟಲ್ ಬಿಡುಗಡೆ ಸಮಾರಂಭ ನಡೆಯಿತು. ಗಿರೀಶ್‌ಗೌಡ ಚಿತ್ರಕಥೆ ಬರೆದು ಸಹ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಗಿರೀಶ್ ನಾನೊಬ್ಬ ರೈತನಾಗಿದ್ದು, ರೈತನ ಬಗ್ಗೆಯೇ ಸಿನಿಮಾ ಮಾಡುತ್ತಿದ್ದೇನೆ. 'ಮಹಾಕಾಳಿಪುತ್ರ' ಎಂದರೆ ದೈವದ ಆರಾಧಕ, ರೈತರು ಪ್ರತಿದಿನ ದೇವಿಯ ಪೂಜೆ ಮಾಡಿಕೊಂಡೇ ತಮ್ಮ ಕಾಯಕಕ್ಕೆ ಹೊರಡುತ್ತಿದ್ದರು. ಆ ರೈತನನ್ನು ದೇವಿ ಪುತ್ರ ಅಂತ ಚಿತ್ರದಲ್ಲಿ ತೋರಿಸ್ತಿದ್ದೇವೆ. ರೈತರ ಬಗ್ಗೆ ಒಂದೊಳ್ಳೆ ಮೆಸೇಜ್ ಇಟ್ಕೊಂಡು ಈ ಸಿನಿಮಾ ಮಾಡ್ತಿದ್ದೇವೆ. ರೈತ ಆಗ, ಈಗಲೂ ವ್ಯವಸಾಯ ಮಾಡ್ತಿದ್ದಾರೆ. ಆದರೆ ಶೈಲಿ ಬದಲಾಗಿದೆ. ಎತ್ತುಗಳನ್ನು ಶೋಕಿಗೋಸ್ಕರ ಸಾಕೋದಲ್ಲ. ವ್ಯವಸಾಯಕ್ಕೋಸ್ಕರ ಸಾಕಿ ನಂತರ ಅವನ್ನು ರೇಸ್‌ಗೂ ಬಳಸಬಹುದು ಅಂತ ತೋರಿಸಿದ್ದೇವೆ. ನಮ್ಮ ಚಿತ್ರದಲ್ಲೂ ರೇಸ್ ಇರುತ್ತದೆ. ರೈತರ ಬಗ್ಗೆ ಈವರೆಗೆ ಬಂದ ಎಲ್ಲಾ ಸಿನಿಮಾಗಳಿಗಿಂತ ಇದು ಬೇರೆಯದೇ ಆಗಿರುತ್ತದೆ. ಇದೇ ತಿಂಗಳ 15ರಿಂದ ಆರಂಭಿಸಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡುತ್ತಿದ್ದೇವೆ, ಇದು ಪ್ಯಾನ್ ಇಂಡಿಯಾ ಚಿತ್ರವಾಗಿರುವುದರಿಂದ ಬೇರೆ, ಬೇರೆ ಭಾಷೆಯ ಕಲಾವಿದರೂ ಸಹ ಚಿತ್ರದಲ್ಲಿ ನಟಿಸುತ್ತಿದ್ದಾರೆ ಎಂದರು.

ಗಿರೀಶ್‌ಗೌಡ ಮಾತನಾಡಿ ಇದು ನಮ್ಮ ಮಣ್ಣಿನ ಕಥೆ. ಇದೇ ಮಣ್ಣು ಹೇಗೆ ಆರ್ಮಿಗೆ ಸೇರುತ್ತೆ, ನಮ್ಮ ಮಣ್ಣಿಂದ ಗನ್ ಪೌಡರ್ ಕೂಡ ಮಾಡಬಹುದು. ಅದರ ಮೈನಿಂಗ್‌ನ ಸಣ್ಣ ಹಿನ್ನಲೆ ಇಟ್ಕೊಂಡು ಮಾಡುತ್ತಿರುವ ಚಿತ್ರವಿದು, ನಮ್ಮಮಣ್ಣಿನ ಬೆಲೆ ಏನು ಅಂತ ಚಿತ್ರದಲ್ಲಿ ತೋರಿಸ್ತಿದ್ದೇವೆ. ಮಂಡ್ಯ, ಮದ್ದೂರು ಸುತ್ತಮುತ್ತ ನಡೆಯೋ ಕಥೆಯಿದು. ರಾಹುಲ್ ವಸ್ತಾರ ಅವರ ಮ್ಯೂಸಿಕ್, ಕೀರ್ತನ್ ಪೂಜಾರಿ ಅವರ ಕ್ಯಾಮರಾ ವರ್ಕ್ ಈ ಚಿತ್ರಕ್ಕಿದೆ ಎಂದರು.

ಮಹದೇಶ್ವರಸ್ವಾಮಿ ಈ ಭಾಗದ ಜನರ ಆರಾಧ್ಯ ದೈವ

ದೇವಾಲಯ ಲೋಕಾರ್ಪಣೆಯಲ್ಲಿ ಸುತ್ತೂರುಶ್ರೀ ಅಭಿಪ್ರಾಯ

ನಂಜನಗೂಡು, ಮಾ.12– ಮಹದೇಶ್ವರಸ್ವಾಮಿ ಅವರು ಈ ಭಾಗದ ಜನರ ಆರಾಧ್ಯ ದೈವ. ಅಲ್ಲದೇ ಲಕ್ಷಾಂತರ ಕುಟುಂಬಗಳ ಮನೆ ದೇವರು. ಮಹದೇಶ್ವರಸ್ವಾಮಿಯವರ ಮೇಲೆ ಜನಪದರು ಹೆಚ್ಚಿನ ಸಾಹಿತ್ಯ ರಚಿಸಿದ್ದಾರೆ ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಹಂಡುವಿನಹಳ್ಳಿಯಲ್ಲಿ ಗುರುವಾರ ಮಹದೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ಮಹದೇಶ್ವರರು ಉತ್ತರದಿಂದ ಹೊರಟು ನಮ್ಮ ಭಾಗದಲ್ಲಿ ಹೆಚ್ಚಾಗಿ ಸಂಚರಿಸಿ ತಮ್ಮ ಪವಾಡಗಳ ಮೂಲಕ ಜನಮನದಲ್ಲಿ ನೆಲೆಸಿದ್ದಾರೆ. ಕರ್ನಾಟಕ, ತಮಿಳುನಾಡು ಭಾಗದಲ್ಲಿ ಲಕ್ಷಾಂತರ ಮಹದೇಶ್ವರಸ್ವಾಮಿ ಭಕ್ತರಿದ್ದಾರೆ. ಅಲ್ಲದೇ ಮಹದೇಶ್ವರರನ್ನು ಸುತ್ತಿಸುವ ಜಾನಪದ ಸಾಹಿತ್ಯ ಎಲ್ಲರ ಮನೆ ಮಾತಾಗಿದೆ. ಈ ಸಾಹಿತ್ಯ ಬರೆದು, ಓದಿ ಕಲಿತ ಸಾಹಿತ್ಯವಲ್ಲ. ಜನಪದರ ಬಾಯಿಯಿಂದ ಕೇಳಿ ಕಲಿತ ಸಾಹಿತ್ಯ. ಹೀಗಾಗಿ ಎಲ್ಲಾ ಮಡಿವಂತಿಕೆಗಳನ್ನು ಮೀರಿ ಮಹದೇಶ್ವರ ಸ್ವಾಮಿ ಹಳ್ಳಿಗಾಡಿನ ಜನರ ಮೆಚ್ಚಿನ ದೈವವಾಗಿದ್ದಾರೆ. ಕಾಡು–ಮೇಡುಗಳಲ್ಲಿ ಸಂಚರಿಸಿ ಪ್ರಕೃತಿಯಲ್ಲಿ ಲೀನವಾಗಿ ಆನಂದಿಸಿದ ಮಹದೇಶ್ವರರು ಕಾಡಿನ ಸಂಸ್ಕೃತಿಗೆ ಹೊಂದಿಕೊಂಡು ಮನೆ ಮನೆಯ ದೇವರಾದರು ಎಂದರು.

ತಾಲೂಕಿನ ಹಂಡುವಿನಹಳ್ಳಿ ಗ್ರಾಮಸ್ಥರು ತಮ್ಮ ಮೆಚ್ಚಿನ ಮಹದೇಶ್ವರಸ್ವಾಮಿ ದೇವಾಲಯವನ್ನು 1.5 ಕೋಟಿ ರೂ. ವೆಚ್ಚದಲ್ಲಿ ಸುಂದರವಾಗಿ ನಿರ್ಮಿಸುವ ಮೂಲಕ ಭಕ್ತಿಭಾವ ಮೆರೆದಿದ್ದಾರೆ ಎಂದರು.

ಮಹದೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ ಅಂಗವಾಗಿ ಬುಧವಾರ ಶ್ರೀವಿಶ್ವವಸು ನಾಮ ಸಂವತ್ಸರದಲ್ಲಿ ಬೆಳಗ್ಗೆ 5 ಗಂಟೆಗೆ ಅಗ್ರತೀರ್ಥ ಸಂಗ್ರಹ, ಆಲಯ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹನಾಂದಿ, ವಾಸ್ತು ಪೂಜೆ ಹಾಗೂ ದೇವತಾಕಾರ್ಯಗಳನ್ನು ನಡೆಸಲಾಯಿತು. ಬೆಳಗ್ಗೆ 9.30ಕ್ಕೆ ಗಂಗಾತಟದಿಂದ ಪೂರ್ಣಕುಂಭ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ವೀರಗಾಸೆ, ನಂದಿಧ್ವಜ ಮುಂತಾದ ವಿವಿಧ ಜಾನಪದ ತಂಡಗಳೊಂದಿಗೆ ಸ್ವಾಮಿಯ ಉತ್ಸವಮೂರ್ತಿ ಮೆರವಣಿಗೆ ನಡೆಸಲಾಯಿತು.

ಗುರುವಾರ ನಡೆದ ಧಾರ್ಮಿಕ ಸಭೆಯಲ್ಲಿ ದೇವನೂರಿನ ಮಹಾಂತ ಸ್ವಾಮೀಜಿ, ವಾಟಾಳು ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಬರಡನಪುರದ ಪರಶಿವಮೂರ್ತಿ ಸ್ವಾಮೀಜಿ, ಶ್ರೀಗುರು ಕಂಬಳೀಶ್ವರ ಮಠದ ಇಮ್ಮಡಿ ಸಿದ್ದಲಿಂಗ ಸ್ವಾಮೀಜಿ, ನಾಗರಾಜೇಂದ್ರ ಸ್ವಾಮೀಜಿ, ಕಮತೇ ಮಹದೇಶ್ವರ ಬೆಟ್ಟದ ಮಹಾಂತ ದೇಶಿಕೇಂದ್ರ ಸ್ವಾಮೀಜಿ, ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಗೌಡಿಕೆ ನಾಗಪ್ಪ, ವಿಶ್ವಾರಾಧ್ಯ, ಸಾಹಿತಿ ಮು.ನಾ.ರಮೇಶ, ಶಿವಾರ್ಚಕ ನಾಗೇಂದ್ರ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು.

> **“ನಮ್ಮ ಭಾಗದ ಮಠಗಳು ಭಕ್ತರ ಅಭಿಷ್ಠೆ ಈಡೇರಿಸುವ ಮೂಲಕ ಜನರ ಹೃದಯಕ್ಕೆ ಹತ್ತಿರವಾಗಿವೆ. ಸುತ್ತೂರು ಶ್ರೀಮಠ ಅನ್ನ, ಅಕ್ಷರ, ದಾಸೋಹದ ಜೊತೆಗೆ ಆರೋಗ್ಯ ಕ್ಷೇತ್ರದಲ್ಲೂ ಸೇವೆಯಲ್ಲಿ ತೊಡಗಿದೆ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಆಳುವ ಸರ್ಕಾರಗಳ ಮನವೊಲಿಸಿ ನದಿ ಮೂಲದಿಂದ ಕೆರೆಗಳನ್ನು ತುಂಬಿಸುವ ಕಾರ್ಯ ನಡೆಸುವ ಮೂಲಕ ಜನರ ನೀರಿನ ಭವಣೆ ನಿವಾರಿಸಿದ್ದಾರೆ. ಜೊತೆಗೆ ಈ ಭಾಗದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರಗಳು ಕೈಗೊಳ್ಳಲು ಸ್ವಾಮೀಜಿ ಪ್ರೇರಣೆ ನೀಡಿದ್ದಾರೆ. ಭಕ್ತಿ ಹರಿಯುವ ಜಲದಂತಿರಬೇಕು. ಆ ಮೂಲಕ ದೇವರ ಸಾಕ್ಷಾತ್ಕಾರ ಮಾಡಿಕೊಳ್ಳಬಹುದಾಗಿದೆ. – ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಮುಡುಕನಪುರ.**

ಹಿಂದಿನ ಮೀಸಲಾತಿಯನ್ನೇ ಮುಂದುವರೆಸಲು ಆಗ್ರಹ

ತಿ.ನರಸೀಪುರ, ಮಾ.12– ಒಳ ಮೀಸಲಾತಿ ಜಾರಿಗೆ ನ್ಯಾ.ನಾಗಮೋಹನ್ ದಾಸ್ ವರದಿ ಲೋಪಗಳನ್ನು ಸರಿಪಡಿಸುವ ವರೆಗೆ ಈ ಹಿಂದಿನ ಮೀಸಲಾತಿಯನ್ನೇ ಮುಂದುವರೆಸಿ, ಉದ್ಯೋಗ ನೇಮಕಾತಿ ಮಾಡಿಕೊಳ್ಳಬೇಕು ಎಂದು ಬಲಗೈ ಸಮುದಾಯದ ಒಕ್ಕೂಟದ ತಾಲೂಕು ಅಧ್ಯಕ್ಷ ಚೌಹಳ್ಳಿ ಜಯರಾಮು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.



ರಾಜ್ಯದ ಪರಿಶಿಷ್ಟ 101 ಜಾತಿಗಳ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರು ಸಿದ್ದಪಡಿಸಿರುವ ಒಳ ಮೀಸಲಾತಿ ಸಮೀಕ್ಷೆ ವರದಿ ಅವೈಜ್ಞಾನಿಕವಾಗಿದೆ. ಅಸಮರ್ಪಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರಿಂದ ಮೂಲ ನಿವಾಸಿಗಳಾದ ಆದಿ ದ್ರಾವಿಡ, ಆದಿ ಕರ್ನಾಟಕ ಮತ್ತು ಆದಿ ಆಂಧ್ರ ಪಂಗಡಗಳಿಗೆ ಸೇರಿದ ಬಲಗೈ 19 ಸಮುದಾಯಗಳಿಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಒಳ ಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕುವ ಮುನ್ನ ಹಾಗೂ ವರದಿಯಲ್ಲಿನ ಅಂಶಗಳನ್ನು ಕಾಯ್ದೆಯಾಗಿ ರೂಪಿಸುವ ಮೊದಲೇ ಹಲವು ಇಲಾಖಾಧಿಕಾರಿಗಳು ಸರ್ಕಾರಿ ಸಂಸ್ಥೆಗಳಲ್ಲಿ ಒಳ ಮೀಸಲಾತಿ ಅನ್ವಯ ಪ.ಜಾತಿ ಪ್ರವರ್ಗ–ಎ, ಪ್ರವರ್ಗ–ಬಿ ಮತ್ತು ಪ್ರವರ್ಗ–ಸಿ ಗಳಡಿ ಮೀಸಲಾತಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರವರ್ಗ–ಎ (ಮಾದಿಗ ಸಂಬಂಧಿತ ಜಾತಿಗಳು) ಅವಕಾಶ ಕಲ್ಪಿಸಿರುವುದರಿಂದ ರೋಸ್ಟರ್ ಬಿಂದುವಿನಲ್ಲಿ ಗೊಂದಲ ಸೃಷ್ಟಿಯಾಗಿದೆ. ಆ ಮೂಲಕ ಸಂವಿಧಾನದ ಮೂಲ ಆಶಯಕ್ಕೆ ಸಾಮಾಜಿಕ ಹಾಗೂ ಔದ್ಯೋಗಿಕವಾಗಿ ಘೋರ ಅಪಚಾರವಾಗಿರುವುದು ಕಂಡು ಬಂದಿದೆ ಎಂದರು.

ಒಳ ಮೀಸಲಾತಿ ಸಂಬಂಧಿಸಿದಂತೆ ಕಾನೂನು ರೂಪಿಸಿ, ಜಾರಿಯಾಗುವವರೆಗೆ ಸರ್ಕಾರದ ಯಾವುದೇ ಇಲಾಖೆ, ಸಂಸ್ಥೆಗಳು ಹಾಗೂ ಶೈಕ್ಷಣಿಕ ವಿವಿಗಳಲ್ಲಿ ನಡೆಯುವ ನೇಮಕಾತಿ ಪ್ರಕ್ರಿಯೆ ತಡೆ ಹಿಡಿಯಬೇಕು. ಒಳ ಮೀಸಲಾತಿ ಗೊಂದಲಗಳ ಪರಿಹಾರವಾಗುವವರೆಗೆ ಈ ಹಿಂದಿನ ಮೀಸಲಾತಿ ನಿಯಮ 33ರಂತೆ ರೋಸ್ಟರ್ ಬಿಂದು ನಿಯಮ ಅಳವಡಿಸಿಕೊಂಡು ಮುಂದುವರಿಸಬೇಕು ಮತ್ತು ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಒಳಮೀಸಲಾತಿ ಅನ್ವಯ ಜಾತಿ ಪ್ರಮಾಣಪತ್ರವನ್ನು ಕಂದಾಯ ಇಲಾಖೆಯಿಂದ ಪಡೆದು ಪ್ರವೇಶಾತಿ ಪಡೆಯುವಂತೆ ಶಿಕ್ಷಣ ಸಂಸ್ಥೆಯ ಅಧಿಕಾರಿಗಳು ಒತ್ತಾಯ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ತೊಂದರೆ ಆಗುತ್ತಿದೆ. ಇದನ್ನು ಕೂಡ ತಡೆ ಹಿಡಿಯಲು ಸೂಕ್ತ ಕ್ರಮ ವಹಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಮಾ.17, ಆಯವ್ಯಯ ಪೂರ್ವಭಾವಿ ಸಭೆ



ತಿ.ನರಸೀಪುರ, ಮಾ.12– ಪಟ್ಟಣದ ಪುರಸಭೆ ಆಯವ್ಯಯದ ಪೂರ್ವಭಾವಿ ಸಮಾಲೋಚನಾ ಸಭೆ ಪುರಸಭೆ ಆಡಳಿತಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಆಶಪ್ಪ ಅವರ ಅಧ್ಯಕ್ಷತೆಯಲ್ಲಿ ಮಾ.17 ರಂದು ಬೆಳಗ್ಗೆ 11 ಗಂಟೆಗೆ ಪುರಸಭಾ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಭೆಯಲ್ಲಿ ತಿ.ನರಸೀಪುರ ಪುರಸಭೆ ವ್ಯಾಪ್ತಿಯ ನಾಗರಿಕರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ನಾಗರಿಕ ಸಂಘ ಸಂಸ್ಥೆಗಳು, ಪರಿಸರ ಕಾರ್ಯಕರ್ತರು ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳು/ಮುಖಂಡರು ಭಾಗವಹಿಸಿ ಪಟ್ಟಣದ ಅಭಿವೃದ್ಧಿಗಾಗಿ ತಮ್ಮ ಅಮೂಲ್ಯವಾದ ಅಭಿಪ್ರಾಯ/ಸಲಹೆಗಳನ್ನು ನೀಡುವಂತೆ ಮುಖ್ಯಾಧಿಕಾರಿ ಶ್ರೀನಿವಾಸ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಅರಣ್ಯ ನಾಶ ತಡೆ ಮೂಲಕ ಪ್ರಕೃತಿ ಉಳಿಸುವುದು ಅಗತ್ಯ

ದೊಡ್ಡ ಆಲದ ಮರದ 2ನೇ ವರ್ಷದ ಜಾತ್ರೆಯಲ್ಲಿ ವರ್ಷ ಹರೀಶ್‌ಗೌಡ

ಹುಣಸೂರು, ಮಾ.12– ಪ್ರಕೃತಿ ಉಳಿಸುವುದು ಪ್ರಸ್ತುತ ಅಗತ್ಯವಾಗಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕುಡಿನೀರು ಮುದ್ದನಹಳ್ಳಿಯಲ್ಲಿ ದೊಡ್ಡ ಆಲದಮರ ಜಾನಪದ ಜಾತ್ರಾ ಸಮಿತಿಯಿಂದ ಆಯೋಜಿಸಿದ್ದ ಕರ್ನಾಟಕದ ಎರಡನೇ ದೊಡ್ಡ ಆಲದ ಮರದ 2ನೇ ವರ್ಷದ ಜಾತ್ರೆಯನ್ನು ಗೋವುಗಳಿಗೆ ಪೂಜಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವು ನಿತ್ಯ ಉತ್ತಮವಾದ ಪರಿಸರವನ್ನು ನಾವೇ ನಾಶಪಡಿಸುತ್ತಿದ್ದೇವೆ. ಪ್ರಕೃತಿಯು ಮನುಷ್ಯನ ಜೀವನದ ಸ್ತಂಭವಾಗಿದ್ದು, ಉತ್ತಮ ಗಾಳಿ, ನೀರು, ಅರಣ್ಯ ನಾಶ ತಡೆಯುವುದರ ಮೂಲಕ ಪ್ರಕೃತಿ ಉಳಿಸಬೇಕಾಗಿದೆ ಎಂದರು.

ಕಾಂಗ್ರೆಸ್ ಮುಖಂಡ ರಾಜು ಮಾತನಾಡಿ, ನಾನು ಗ್ರಾಮದ ಈ ಮರದ ಕೆಳಗೆ ಆಡಿ ಬೆಳೆದವನು. ಆಲದ ಮರ ಇಷ್ಟು ದೊಡ್ಡ ಪ್ರಮಾಣದಲ್ಲಿರುವುದು ನಮ್ಮ ಪುಣ್ಯ. ನಾವು ಎಷ್ಟೇ ಹಣ ಖರ್ಚು ಮಾಡಿದರು ಇಂತಹ ಆಲದ ಮರ ಬೆಳೆಸಲು ಸಾಧ್ಯವಿಲ್ಲ. ಆಲದ ಮರ ಪ್ರಾಣಿ, ಪಕ್ಷಿಗಳಿಗೆ ಆಶ್ರಯ ತಾಣವಾಗುವುದರ ಜೊತೆಗೆ ನಮಗೆ ಉತ್ತಮ ಗಾಳಿ ನೀಡುತ್ತದೆ. ಅದಕ್ಕಾಗಿ ನಾವು–ನೀವು ಸೇರಿ ಸಮಾಜ ಸೇವಕರು, ರಾಜಕಾರಣಿಗಳು, ಸಂಘ ಸಂಸ್ಥೆಗಳ ಸಹಾಯ ಪಡೆದು ರಾಜ್ಯಕ್ಕೆ ಎರಡನೇ ಬೃಹತ್ ಆಲದ ಮರ ಸ್ಥಳವಾದ ಇದನ್ನು ಅಭಿವೃದ್ಧಿಗೊಳಿಸಬೇಕು ಎಂದರು.

ಆಲದ ಮರ ಸಮಿತಿ ಅಧ್ಯಕ್ಷ ಎಂ.ರವಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪರಿಸರವನ್ನು ವಿವಿಧ ಕಾರಣಗಳಿಂದ ನಾಶ ಮಾಡಲಾಗುತ್ತಿದೆ. ಜಾತ್ರೆ ಮೂಲಕ ಪರಿಸರ ಸಂರಕ್ಷಿಸಿ ಬೆಳಸಬೇಕು ಎಂಬ ಸಂಕಲ್ಪದೊಂದಿಗೆ ಜಾನಪದ ಜಾತ್ರೆ ಹಮ್ಮಿಕೊಂಡು ಬರಲಾಗುತ್ತಿದೆ. ಜನಪ್ರತಿನಿಧಿಗಳು ಸಂಘ ಸಂಸ್ಥೆಗಳು, ಕಾರ್ಪೊರೇಟ್ ಸಂಸ್ಥೆಗಳು, ಪರಿಸರ ಪ್ರೇಮಿಗಳು ಹಾಗೂ ಗ್ರಾಮದ ಯುವಕರು ಸಂಪೂರ್ಣ ಸಹಕಾರ ನೀಡಿದರೆ ಸಂರಕ್ಷಿತ ಪ್ರವಾಸಿ ತಾಣ ಮಾಡುವ ಧೃಡಸಂಕಲ್ಪ ಮಾಡಿದ್ದೇವೆ ಎಂದರು.

ವಿಜೃಂಭಿಸಿದ ಜಾನಪದ: ಇತಿಹಾಸ ಪ್ರಸಿದ್ಧ ರಾಜ್ಯದ 2ನೇ ದೊಡ್ಡ ಆಲದ ಮರದ ಜಾನಪದ ಜಾತ್ರಾ ಮಹೋತ್ಸವ ಜಾನಪದ ಕಲರವಗಳ ನಡುವೆ ವಿಜೃಂಭಿಸಿತು. ದೊಡ್ಡ ಆಲದ ಮರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಜಾತ್ರಾ ಮೆರವಣಿಗೆಯಲ್ಲಿ ವೀರಗಾಸೆ, ಪೂಜಾ ಕುಣಿತ, ಸುಗ್ಗಿ ಕುಣಿತ, ಡೊಳ್ಳುಕುಣಿತ, ಫಲಕ ಕುಣಿತ, ಪಟಕುಣಿತ, ಆದಿವಾಸಿ ನೃತ್ಯ, ವಿವಿಧ ಶಾಲಾ ಮಕ್ಕಳ ಸಾಂಸ್ಕೃತಿಕ ನೃತ್ಯದೊಂದಿಗೆ ಗ್ರಾಮದ ಹೆಬ್ಬಾಗಿಲಿನಿಂದ ಹೊರಟ ಜಾನಪದ ಕಲಾತಂಡಗಳ ಮೆರವಣಿಗೆ ಆಲದ ಮರದ ಆವರಣಕ್ಕೆ ಆಗಮಿಸಿ ಅಲ್ಲಿ ಕಲಾತಂಡಗಳು ಪ್ರದರ್ಶನ ನೀಡಿ ಜಾತ್ರೆಗೆ ಕಳೆ ಕಟ್ಟಿದರು. ಅಲ್ಲದೇ ಜಾನಪದ ಕಲಾವಿದರು ಜಾನಪದ ಗೀತೆ, ನೃತ್ಯಗಳ ಮೂಲಕ ಮನರಂಜಿಸಿದರು.

ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ವಿಎಸ್‌ಎಸ್ ಪ್ರಾಂಶುಪಾಲ ಶಿವಕುಮಾರ್, ಗಾಯಕ ಮೋಹನ್ ಕುಮಾರ್, ಸಿ.ಜೆ.ಗಂಗಾಧರ್, ಮಂಜೇಗೌಡ, ಸುರೇಂದ್ರ, ಸತೀಶ ಪಾಪಣ್ಣ, ನಂದೀಶ್ ಸೇರಿದಂತೆ ಗ್ರಾಮದ ಮುಖಂಡರು ಭಾಗವಹಿಸಿದ್ದರು.



ಕಾರ್ಯಕ್ರಮವನ್ನು ವರ್ಷ ಹರೀಶ್‌ಗೌಡ ಉದ್ಘಾಟಿಸಿದರು.

ವಿಜೃಂಭಣೆಯ ಶ್ರೀಮಸಣಿಕಮ್ಮ ಬ್ರಹ್ಮ ರಥೋತ್ಸವ

ಪಿರಿಯಾಪಟ್ಟಣ, ಮಾ.12– ತಾಲೂಕಿನ ಶಕ್ತಿದೇವತೆ ಶ್ರೀಮಸಣಿಕಮ್ಮನವರ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ಅಮ್ಮನವರಿಗೆ ಅಭಿಷೇಕ, ಹೋಮ ಹವನ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಈ ವೇಳೆ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಇಷ್ಟಾರ್ಥ ಈಡೇರಿಸುವಂತೆ ಪ್ರಾರ್ಥಿಸಿದರು. ದೇವಿ ಉತ್ಸವ ಮೂರ್ತಿಯನ್ನು ಮಂಗಳ ವಾದ್ಯದೊಂದಿಗೆ ಭಕ್ತರು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿ, ಬಳಿಕ ವಿವಿಧ ಹೂಗಳಿಂದ ಅಲಂಕಾರಗೊಂಡ ರಥದಲ್ಲಿ ಪ್ರತಿ ಷ್ಠಾಪಿಸಲಾಯಿತು. ಬಳಿಕ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ಸಾವಿರಾರು ಭಕ್ತರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು ದೇವಿಗೆ ಜೈಕಾರ ಹಾಕುತ್ತ ರಥ ಎಳೆಯುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಈ ವೇಳೆ ಭಕ್ತರು ರಥಕ್ಕೆ ಹಣ್ಣು ಜವನ ಎಸೆದು ಭಕ್ತಿ ಸಮರ್ಪಿಸಿದರು.

ಭಕ್ತರಿಗೆ ಪಟ್ಟಣದ ವಿವಿಧ ಸಂಘ ಸಂಸ್ಥೆಗಳು ಪ್ರಸಾದ, ಪಾನಕ, ಮಜ್ಜಿಗೆ ವಿತರಿಸಿದರು. ಅಲ್ಲದೇ ವಾಹನ ದಟ್ಟಣೆ ನಿಯಂತ್ರಿಸಲು ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಂಡಿದ್ದರು. ಈ ವೇಳೆ ಅರ್ಚಕರು, ಭಕ್ತರು, ಅಧಿಕಾರಿಗಳು, ಜನಪ್ರತಿನಿಧಿಗಳು ಇತರರಿದ್ದರು.



ಪಿ.ಪಟ್ಟಣದಲ್ಲಿ ಶ್ರೀಮಸಣಿಕಮ್ಮನವರ ಬ್ರಹ್ಮ ರಥೋತ್ಸವ ನಡೆಯಿತು.

ಮೂರನೇ ಪುಟದಿಂದ

ಮತ್ತೆ ಬಂದೇ ಬಿಡ್ತು ಸೌದೆ ಒಲೆ ಕಾಲ...!

ಮಾಂಸಹಾರಿ ಹೋಟೆಲ್‌ನವರು ಪೂರ್ಣ ಪ್ರಮಾಣದಲ್ಲಿ ಸೌದೆ ಒಲೆಯನ್ನೇ ಅವಲಂಭಿಸಿದ್ದಾರೆ. ಇಡೀ ದಿನದ ಆಹಾರವನ್ನು ಸೌದೆ ಒಲೆಯಿಂದಲೇ ತಯಾರಿಸುತ್ತಿದ್ದಾರೆ.

ಇದರಿಂದ ಈ ತನಕ ಅಷ್ಟಾಗಿ ಬೇಡಿಕೆ ಇಲ್ಲದ ಸೌದೆಗೆ ಈಗ ಹೆಚ್ಚಿನ ಬೇಡಿಕೆ ಬಂದಿದೆ. ಮಾಂಸಹಾರಿ ಹೋಟೆಲ್ ನವರು ಸೌದೆಯನ್ನು ಹೆಚ್ಚಾಗಿ ಖರೀದಿ ಮಾಡುತ್ತಿದ್ದಾರೆ. ಈ ಕುರಿತು ಪ್ರತಿಕ್ರಿಯೆ ನೀಡಿದ ಮೈಸೂರಿನ ಜಯನಗರದ ಶ್ರೀ ಕಬ್ಬಾಳಮ್ಮ ಸೌದೆ ಡಿಪೋವಿನ ಸುಧೀಂದ್ರ ಅವರು, ಮಾಂಸಹಾರಿ ಹೋಟೆಲ್‌ನವರು ಮಾತ್ರ ಸೌದೆಯನ್ನು ಸ್ವಲ್ಪ ಹೆಚ್ಚಾಗಿ ಖರೀದಿ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಎಲ್‌ಪಿಜಿ ಸಿಲಿಂಡರ್ ಇದ್ದರೂ ಕೆಲವು ಮಾಂಸಹಾರಿ ಹೋಟೆಲ್‌ನವರು ಸೌದೆ ಒಲೆಯಲ್ಲೆ ಅಡುಗೆ ತಯಾರಿಸುತ್ತಿದ್ದಾರೆ ಎಂದರು. ಅಂತ್ಯಕ್ರಿಯೆಗೆ ಅನಿಲ ಚಿತಾಗಾರ ವಿದ್ದರೂ ಸಂಪ್ರದಾಯಸ್ಥ ಕುಟುಂಬದವರು ಸೌದೆಯಿಂದಲೇ ಅಂತ್ಯಕ್ರಿಯೆ ನಡೆಸಲು ಬಯಸುತ್ತಾರೆ. ಇದನ್ನು ಹೊರತುಪಡಿಸಿ ಯಾರೂ ಸೌದೆ ಖರೀದಿ ಮಾಡುವುದಿಲ್ಲ ಎಂದು ಸುರೇಂದ್ರ ತಿಳಿಸಿದರು.

ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ ಸೌದೆ ಒಲೆಯಲ್ಲಿ ಆಹಾರ ತಯಾರಿಸಿ ಎಂದು ಮೈಸೂರಿನ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಕಳೆದ ವಾರವೇ ಹೋಟೆಲ್ ಮಾಲೀಕರಿಗೆ ಕರೆ ಕೊಟ್ಟಿದ್ದರು.

ಆದರೆ ಶೇಕಡ 98ರಷ್ಟು ಹೋಟೆಲ್‌ನಲ್ಲಿ ಸೌದೆ ಒಲೆ ವ್ಯವಸ್ಥೆಯೇ ಇಲ್ಲ. ಇದರಿಂದ ಇವರು ವಾಣಿಜ್ಯ ಬಳಕೆಯ ಸಿಲಿಂಡರ್ ಮೇಲೆಯೇ ಅವಲಂಭಿತರಾಗಿದ್ದಾರೆ. ಯುದ್ಧದ ಪರಿಣಾಮ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತವಾದರೆ ಅನಿವಾರ್ಯವಾಗಿ ಸೌದೆ ಒಲೆಯಲ್ಲಿ ಆಹಾರ ತಯಾರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕಿದೆ.

> **ಇಂಡಕ್ಷನ್ ಸ್ಟವ್‌ಗೆ ಕೃತಕ ಅಭಾವ ಸೃಷ್ಟಿ ಸಾಧ್ಯತೆ!**
>
> **ಇಂಡಕ್ಷನ್ ಸ್ಟವ್‌ಗೆ ಬಾರೀ ಬೇಡಿಕೆ ಇರುವ ಹಿನ್ನೆಲೆಯಲ್ಲಿ ಇದರ ಬೆಲೆ ಕೂಡ ಹೆಚ್ಚಾಗುವ ಸಾಧ್ಯತೆ ಇದೆ. ಭಾರೀ ಬೇಡಿಕೆ ಇರುವ ಹಿನ್ನೆಲೆಯಲ್ಲಿ ಇದರ ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ಅದರ ಬೆಲೆ ಹೆಚ್ಚಳ ಮಾಡುವ ಸಾಧ್ಯತೆಯೂ ಇದೆ. ಮುಂದೆ ಇವು ಸಿಗುವುದಿಲ್ಲ ಎಂಬ ಆತಂಕ ದಿಂದ ಜನರು ಖರೀದಿಗೆ ಮುಗಿ ಬೀಳುತ್ತಿದ್ದಾರೆ. ಇಂಡಕ್ಷನ್ ಸ್ಟವ್‌ಗೆ ಈ ಮಟ್ಟಿಗೆ ಬೇಡಿಕೆ ಬರುತ್ತದೆ ಎಂದು ಕಂಪನಿಗಳು ನಿರೀಕ್ಷೆ ಕೂಡ ಮಾಡಿರಲಿಲ್ಲ. ಆದರೆ ಈಗಿನ ಬೇಡಿಕೆ ನೋಡಿ ಕಂಪನಿಗಳು ಸ್ಟವ್ ತಯಾರಿಕೆ ಹೆಚ್ಚಳ ಮಾಡಬಹುದು.**

ದಿನ ಕಳೆದಂತೆ ಇಂಡಕ್ಷನ್ ಸ್ಟವ್‌ಗೆ ಭಾರೀ ಬೇಡಿಕೆ

ಅಡುಗೆ ಅನಿಲ್ (ಎಲ್‌ಪಿಜಿ ಸಿಲಿಂ ಡರ್) ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜನ ಪರ್ಯಾಯ ಮಾರ್ಗದ ಮೊರೆ ಹೋಗಿದ್ದಾರೆ. ದಿನ ಕಳೆದಂತೆ ಇಂಡಕ್ಷನ್ ಸ್ಟವ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಒಂದು ಸಿಲಿಂಡರ್ ಇರುವ ಬಹಳಷ್ಟು ಮಂದಿ ಇಂಡಕ್ಷನ್ ಸ್ಟವ್ ಖರೀದಿಸುತ್ತಿದ್ದಾರೆ. ಎರಡು ಸಿಲಿಂಡರ್‌ವುಳ್ಳವರು ಕೂಡ ಮುಂಜಾಗ್ರತಾ ಕ್ರಮವಾಗಿ ಇಂಡಕ್ಷನ್ ಸ್ಟವ್ ಖರೀದಿ ಮಾಡುತ್ತಿದ್ದಾರೆ. ಹಾಗಾಗಿ ಮೈಸೂರಿನ ಎಲೆಕ್ಟ್ರಾನಿಕ್ ಅಂಗಡಿಗಳಲ್ಲಿ ಇವುಗಳ ಮಾರಾಟ ಬಲು ಜೋರಾಗಿದೆ.

ಬೇಡಿಕೆ ಹೆಚ್ಚಿದೆ: ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮೈಸೂರಿನ ಯುವರಾಜ ಹೋಮ್ ಅಪ್ಲೈಯನ್ಸ್ ಮಾಲೀಕ ಕೃಷ್ಣ, ಕಳೆದ ಮೂರು ದಿನ ಗಳಿಂದ ಇಂಡಕ್ಷನ್ ಸ್ಟವ್ ಮಾರಾಟ ಹೆಚ್ಚಾಗಿದೆ. ಈ ಮೊದಲ ಪ್ರತಿ ತಿಂಗಳು ಸರಾಸರಿ 10 ರಿಂದ 15 ಸ್ಟವ್ ಮಾರಾಟ ಮಾಡುತ್ತಿದ್ದೆವು. ಆದರೆ ಕಳೆದ ಮೂರು ದಿನಗಳಿಂದ ಸುಮಾರು 25ಕ್ಕೂ ಹೆಚ್ಚು ಮಾರಾಟವಾಗಿವೆ ಎಂದು ತಿಳಿಸಿದರು. ಈ ಮೊದಲು ಈ ಸ್ಟವ್‌ಗೆ ಅಷ್ಟಾಗಿ ಬೇಡಿಕೆ ಇರಲಿಲ್ಲ ಆದರೆ ಈಗ ಭಾರೀ ಬೇಡಿಕೆ ಹಿನ್ನೆಲೆಯಲ್ಲಿ ಎಲೆಕ್ಟ್ರಾನಿಕ್ಸ್ ಅಂಗಡಿ ಮಾಲೀಕರು ಇಂಡಕ್ಷನ್ ಸ್ಟವ್ ಸ್ಟಾಕ್ ಇಡುತ್ತಿದ್ದಾರೆ.

ಸ್ಟಾಕ್ ಮಾಡುತ್ತಿದ್ದೇವೆ: ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಮೈಸೂರಿನ ಷರೀಷ್ ಸೇಲ್ಸ್ ಅಂಡ್ ಜನರಲ್ ಏಜೆನ್ಸಿ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಫೈಜಿ ಮೊಹಮ್ಮದ್ ಷರೀಫ್, ಗ್ರಾಹಕರ ಬೇಡಿಕೆ ಹಿನ್ನೆಲೆಯಲ್ಲಿ ಇಂಡಕ್ಷನ್ ಸ್ಟವ್ ಅನ್ನು ಹೆಚ್ಚಾಗಿ ಸ್ಟಾಕ್ ಮಾಡಿಕೊಳ್ಳುತ್ತಿದ್ದೇವೆ. ಒಂದು ಸ್ಟವ್‌ಗೆ 1,400 ರಿಂದ 3,500 ರೂಪಾಯಿವರೆಗೆ ಬೆಲೆ ಇದ್ದು, ಗ್ರಾಹಕರಿಂದ ತುಂಬಾ ಬೇಡಿಕೆ ಇದೆ.

ಸಾಮಾನ್ಯವಾಗಿ ಸ್ಟವ್‌ಗಳನ್ನು ಬ್ಯಾಚುಲರ್‌ಗಳು, ವಿದ್ಯಾರ್ಥಿಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುವವರು ಬಳಸುತ್ತಿದ್ದರು. ಆದರೆ ಮಧ್ಯಪ್ರಾಚ್ಯದ ಯುದ್ಧ ಉಲ್ಬಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ಜನರು ಮುಗಿ ಬೀಳುತ್ತಿದ್ದಾರೆ.

ಶೇ.150ರಷ್ಟು ಹೆಚ್ಚಳ: ಎಲ್‌ಪಿಜಿ ಸ್ಟವ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ವಾಗುತ್ತಿರುವ ಹಿನ್ನೆಲೆಯಲ್ಲಿ ಇಂಡಕ್ಷನ್ ಸ್ಟವ್‌ಗೆ ಬಹಳ ಬೇಡಿಕೆ ಇದೆ. ಇದರ ಮಾರಾಟ ಶೇಕಡ 150ರಷ್ಟು ಹೆಚ್ಚಾಗಿದೆ ಎಂದು ಮೈಸೂರಿನ ಶುಭಂ ಎಲೆಕ್ಟ್ರಾನಿಕ್ ಅಂಗಡಿ ಮುಖ್ಯ ವ್ಯವಹಾರ ಅಧಿಕಾರಿ ಎನ್.ಬೋರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೊಟ್ಟೆ ಬೆಲೆಯಲ್ಲಿ ಭಾರೀ ಇಳಿಕೆ

ಸೇರಿದಂತೆ ಇತರೆಡೆಯ ಕುಕ್ಕುಟೋದ್ಯಮದ ಮೇಲೆ ಪರಿಣಾಮ ಬೀರಿದೆ. ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ಇತರೆಡೆಯ ಕೋಳಿ ಫಾರಂಗಳಲ್ಲಿ ಪ್ರತಿ ದಿನ 30 ಲಕ್ಷ ಕೋಳಿ ಮೊಟ್ಟೆ ಉತ್ಪಾದನೆಯಾಗುತ್ತದೆ. ಇದರಲ್ಲಿ ಸ್ಥಳೀಯವಾಗಿ 20 ಲಕ್ಷ ಮೊಟ್ಟೆ ಮಾರಾಟವಾಗುತ್ತದೆ. ಆದರೆ ವಿದೇಶಗಳಿಗೆ ರಫ್ತು ಸ್ಥಗಿತವಾದ ಕಾರಣ ಕೋಳಿ ಮೊಟ್ಟೆ ಬೆಲೆಯಲ್ಲಿ ಇಳಿಕೆಯಾಗಿದೆ. ಈ ಮೊದಲು ಒಂದು ಕೋಳಿ ಮೊಟ್ಟೆ ಬೆಲೆ 7 ರೂ. ಇತ್ತು. ಆದರೆ ಈಗ ದಿಢೀರನೆ 4.70 ರೂಪಾಯಿಗೆ ಇಳಿಕೆಯಾಗಿದೆ. ಬೇಸಿಗೆಯಲ್ಲಿ ಕೋಳಿ ಮೊಟ್ಟೆ ಸೇವನೆ ಕಡಿಮೆ ಇರುವುದು ಕೂಡ ಬೆಲೆ ಇಳಿಕೆಗೆ ಮತ್ತೊಂದು ಕಾಣವಾಗಿದೆ.

ಯುದ್ಧ ಅಂತ್ಯ

ಪ್ರತೀಕಾರದ ಕ್ರಮದ ಒಂದು ಭಾಗವು ಈಗಾಗಲೇ ಪ್ರಾರಂಭವಾಗಿದೆ. ಆದರೆ ಅದು ಸಂಪೂರ್ಣವಾಗಿ ಪೂರ್ಣಗೊಳ್ಳುವವರೆಗೆ ಅದು ಇರಾನ್‌ನ ಆದ್ಯತೆಯಾಗಿ ಉಳಿಯುತ್ತದೆ ಎಂದರು. ತಮ್ಮ ಸಂದೇಶದಲ್ಲಿ ಮೊಜ್ತಬಾ ಖಮೇನಿ ಇರಾನ್‌ನ ಮಿಲಿಟರಿ ಕಾರ್ಯತಂತ್ರವು ಕೇವಲ ರಕ್ಷಣಾತ್ಮಕವಲ್ಲ ಎಂದು ಹೇಳಿದ್ದಾರೆ.

ಅಗತ್ಯವಿದ್ದರೆ, ಪ್ರಸ್ತುತ ಸಂಘರ್ಷದ ಸಮಯದಲ್ಲಿ ಇತರ ಮುಂಜಲು ತೆರೆಯಬಹುದು. ಇದು ಪ್ರದೇಶದಾದ್ಯಂತ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಬಹುದು ಎಂದು ಎಚ್ಚರಿಸಿದ್ದಾರೆ. ಇರಾನ್ ವಿರುದ್ಧ ದಾಳಿ ನಡೆಸಲಾಗುತ್ತಿರುವ ನೆರೆಯ ರಾಷ್ಟ್ರಗಳಲ್ಲಿರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ ಮುಂದುವರಿಸಲಿದೆ ಎಂದರು.

ಖಮೇನಿ ತಮ್ಮ ಹೇಳಿಕೆಯಲ್ಲಿ ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಒತ್ತಡವನ್ನು ಸಹ ಉಲ್ಲೇಖಿಸಿದ್ದಾರೆ. ಶತ್ರುಗಳ ಮೇಲೆ ಒತ್ತಡ ಹೇರಲು ಇದು ಪರಿಣಾಮಕಾರಿ ಮಾರ್ಗವಾಗಿದೆ. ಆದಾಗ್ಯೂ, ಇರಾನ್ ತನ್ನ ನೆರೆಹೊರೆಯವರೊಂದಿಗೆ ಸ್ನೇಹ ಸಂಬಂಧವನ್ನು ಕಾಪಾಡಿಕೊಳ್ಳಲು ಬಯಸುತ್ತದೆ ಎಂದರು. ಇದೇ ವೇಳೆ ಇರಾನ್‌ನ ಹೊಸ ಸರ್ವೋಚ್ಚ ನಾಯಕ, ಈ ಪ್ರದೇಶದಲ್ಲಿ ಸಕ್ರಿಯವಾಗಿ ಹೋರಾಡುತ್ತಿರುವವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಯೆಮೆನ್‌ನ ಹೌತಿ ಬಂಡು ಕೋರರು, ಲೆಬನಾನ್‌ನ ಹೆಜ್ಬೊಲ್ಲಾ ಮತ್ತು ಇರಾಕಿ ಮಿತ್ರ ಗುಂಪುಗಳನ್ನು ಉಲ್ಲೇಖಿಸಿ, ಅವರೆಲ್ಲರೂ ಇರಾನ್‌ನೊಂದಿಗೆ ನಿಂತಿದ್ದಾರೆ ಎಂದರು.

ಘೋಷಣೆ ಸಾಧ್ಯತೆ

ಇತರ ನಾಲ್ಕು ರಾಜ್ಯಗಳಾದ ಅಸ್ಸಾಂ, ತಮಿಳುನಾಡು, ಕೇರಳ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಯ ದಿನಾಂಕಗಳನ್ನು ಅದೇ ದಿನ ಪ್ರಕಟಿಸಲಿದೆ. ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಜೊತೆಗೆ, ಬಿಜೆಪಿ, ಸಿಪಿಐ(ಎಂ) ಮತ್ತು ಕಾಂಗ್ರೆಸ್ ಸೇರಿದಂತೆ ಹೆಚ್ಚಿನ ರಾಜಕೀಯ ಪಕ್ಷಗಳು, ಒಂದು ಹಂತದಲ್ಲಿ ಅಥವಾ ಗರಿಷ್ಠ ಎರಡು ಹಂತಗಳಲ್ಲಿ ಚುನಾವಣೆ ನಡೆಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಒತ್ತಾಯಿಸಿವೆ.

ರಾಜ್ಯದ ಎರಡು ಕ್ಷೇತ್ರಗಳ ಉಪ ಚುನಾವಣೆ: ಕೇಂದ್ರ ಚುನಾವಣಾ ಆಯೋಗವು ಐದು ರಾಜ್ಯಗಳ ವಿಧಾನಸಭೆ ಚುನಾವಣೆಯೊಂದಿಗೆ ರಾಜ್ಯದ ದಾವಣಗೆರೆ ದಕ್ಷಿಣ, ಬಾಗಲಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆಯ ದಿನಾಂಕವನ್ನು ಪ್ರಕಟಿಸುವ ಸಾಧ್ಯತೆ ಇದೆ.

ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ ಅವರ ನಿಧನದ ಬಳಿಕ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಮತ್ತು ವೈಎಸ್ ಮೇಟಿ ಅವರ ನಿಧನದ ಬಳಿಕ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ತೆರವಾಗಿವೆ. ಈ ಎರಡು ಕ್ಷೇತ್ರಗಳಿಗೆ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚುನಾವಣೆ ನಡೆಯಬಹುದು ಎನ್ನಲಾಗಿದೆ.

ಹೈಟೆನ್ಷನ್ ಲೈನ್ ಕೆಳಗಿನ ಫುಡ್ ಸ್ಟಾಲ್‌ಗಳು ನೆಲಸಮ

> **6 ಕೆಲ ದಿನಗಳ ಹಿಂದೆ ಇಲ್ಲಿನ ಫಾಸ್ಟ್ ಫುಡ್ ಸ್ಟಾಲ್‌ಗಳವರು ಲೋಡ್‌ಗಟ್ಟಲೆ ಮಣ್ಣು ತಂದು ಹಾಕಿ ಇಲ್ಲಿ ಜಾಗ ಸಮತಟ್ಟು ಮಾಡಿದರು. ಇದರಿಂದ ಹೈಟೆನ್ಷನ್ ಲೈನ್ ವೈರ್ ಅಂತರ ಕಡಿಮೆ ಆಗಿದ್ದಲ್ಲದೆ ಅನಾಹುತ ಸಂಭವಿಸುವಂತಿತ್ತು. ಅಲ್ಲದೆ ಇಲ್ಲಿನ ವ್ಯಾಪಾರಿಗಳು ತಳ್ಳುಗಾಡಿ, ಆಟೋ ಇಲ್ಲವೆ ಒಮ್ನಿಗಳಲ್ಲಿ ವ್ಯಾಪಾರ ಮಾಡುವವರಲ್ಲ. ಕನಿಷ್ಠ 20X30, ಗರಿಷ್ಠ 60X40 ಅಳತೆ ಸ್ಥಳದಲ್ಲಿ ಸ್ಟಾಲ್‌ಗಳ ನಿರ್ಮಿಸಿಕೊಂಡು ಮನ ಬಂದಂತೆ ವ್ಯಾಪಾರ ಮಾಡುತ್ತಿದ್ದರು. ಇಲ್ಲಿ ಸ್ವಚ್ಛತೆ ಎಂಬುದೂ ಇರಲಿಲ್ಲ. ವ್ಯಾಪಾರಿಗಳು ಹಾಗೂ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಪಾಲಿಕೆಯವರು ಈಗಲಾದರೂ ಸೂಕ್ತ ಕ್ರಮ ಕೈಗೊಂಡಿದ್ದಾರೆ. ನಗರದೆಲ್ಲೆಡೆ ಇಂತಹ ಅಪಾಯಕಾರಿ ಸ್ಥಳಗಳಲ್ಲಿರುವ ವ್ಯಾಪಾರ ವಹಿವಾಟನ್ನು ಸ್ಥಳಾಂತರಿಸುವುದು ಅತ್ಯವಶ್ಯ**
>
> – ರಾಜಪ್ಪ, ವಿಜಯನಗರ 2ನೇ ಹಂತ

ಪ್ರತಿಭಟನೆ, ಬಿಗುವಿನ ವಾತಾವರಣ: ತೆರವು ಕಾರ್ಯಾಚರಣೆಯ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ನೂರಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳು, ಯಾವುದೇ ಮುನ್ಸೂಚನೆ ನೀಡದೆ ತೆರವು ಮಾಡುತ್ತಿರುವುದು ಸರಿಯಲ್ಲ ಎಂದು ಉಪ ಆಯುಕ್ತ ಮಂಜು ನಾಥ್ ರೆಡ್ಡಿ, ಅಭಿವೃದ್ಧಿ ಅಧಿಕಾರಿ ಹಿತೇಂದ್ರ ಅವರ ಕಾರುಗಳನ್ನು ಅಡ್ಡಗಟ್ಟಿ ಪ್ರತಿಭಟನೆ ನಡೆಸಿದರಲ್ಲದೆ, ದಾಂಧಲೆ ನಡೆಸಿ ಆಕ್ರೋಶ ಹೊರಹಾಕಿದರು. ಇದರಿಂದ ಕೆಲಕಾಲ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

ಕೂಡಲೇ ಎಚ್ಚೆತ್ತ ವಿಜಯನಗರ ಠಾಣೆ ಪೊಲೀಸರು ಪ್ರತಿಭಟನಾ ನಿರತ ರಸ್ತೆ ಬದಿ ವ್ಯಾಪಾರಿಗಳನ್ನು ಚದುರಿಸಿ, ಪರಿಸ್ಥಿತಿ ನಿಯಂತ್ರಿಸುವ ಮೂಲಕ ತೆರವು ಕಾರ್ಯಾಚರಣೆ ಮುಂದುವರೆಸಲು ಅನುವು ಮಾಡಿ ಕೊಟ್ಟರು. ಅಲ್ಲದೆ ಬೀದಿ ಬದಿ ವ್ಯಾಪಾರಸ್ಥರಿಗೆ ತಮ್ಮ ತಮ್ಮ ಸ್ಟಾಲ್‌ಗಳಲ್ಲಿದ್ದ ವಸ್ತುಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಯಿತು.

ತೆರವು ಅನಿವಾರ್ಯ: ಹೈಟೆನ್ಷನ್ ವಿದ್ಯುತ್ ಮಾರ್ಗವಾಗಿರುವ ಕಾರಣ ಏನಾದರೂ ಅನಾಹುತ ಸಂಭವಿಸಬಹುದು ಎಂಬ ಚೆಸ್ಕಾಂ ಅಧಿಕಾರಿಗಳ ಎಚ್ಚರಿಕೆ, ರಸ್ತೆ ಬದಿಯಲ್ಲಿ ಅತಿಯಾದ ಪಾರ್ಕಿಂಗ್, ಅನೈರ್ಮಲ್ಯತೆ ಹೆಚ್ಚಳ ಹಾಗೂ ಅರಮನೆ ಬಳಿ ನಡೆದ ಹೀಲಿಯಂ ಬಲೂನ್ ಸಿಲಿಂಡರ್ ಸ್ಫೋಟದಿಂದಾದ ಅನಾಹುತದಂತೆ ಇಲ್ಲಿಯೂ ಏನಾದರೂ ಅನಾಹುತ ಸಂಭವಿಸಬಹುದೆಂಬ ಮುಂಜಾಗ್ರತೆಯಿಂದ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಪಾಲಿಕೆ ಉಪ ಆಯುಕ್ತ ಮಂಜುನಾಥ್ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಲ್ಲದೆ ದಿನೇ ದಿನೆ ಹೆಚ್ಚಾಗುತ್ತಿರುವ ಬೀದಿ ಬದಿ ವ್ಯಾಪಾರಿಗಳ ಫುಡ್ ಸ್ಟಾಲ್ ಗಳಿಂದ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ಅಡ್ಡಾದಿಡ್ಡಿ ಪಾರ್ಕಿಂಗ್ ಮಾಡುವುದು ಹೆಚ್ಚಾಗುತ್ತಿದೆ. ವಾಹನ ಸವಾರರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ನಡೆಸಿದ್ದೇವೆ ಎಂದರು.

ಬೇರೆ ಸ್ಥಳ ಗುರ್ತಿಸಿ, ಸೂಚನೆ: ತೆರವು ಕಾರ್ಯಾಚರಣೆಗೂ ಮುನ್ನ ನಗರ ಬೀದಿ ಬದಿ ವ್ಯಾಪಾರಸ್ಥರ ಕಮಿಟಿ ಸಭೆ ನಡೆಸಿ, ತೆರವು ಮಾಡುವ ವಿಷಯ ತಿಳಿಸಲಾಗಿತ್ತು. ಅಲ್ಲದೆ ವಿಜಯನಗರ ವಾಟರ್ ಟ್ಯಾಂಕ್ ಸಮೀಪದಲ್ಲೇ ಇರುವ 80 ಅಡಿ ರಸ್ತೆಯಲ್ಲಿ ಸ್ಥಳವೊಂದನ್ನು ಗುರ್ತಿಸಿ, ಸ್ಥಳಾಂತರವಾಗುವಂತೆ ತಿಳಿಸಲಾಗಿತ್ತು. ಜೊತೆಗೆ ಎರಡು ದಿನಕ್ಕೊಮ್ಮೆ ಮೈಕ್ ಮೂಲಕ ಪ್ರಕಟಣೆ ಹೊರಡಿಸಲಾಗಿತ್ತು. ಇಷ್ಟಾದರೂ ಬೀದಿ ಬದಿ ವ್ಯಾಪಾರಿಗಳು ಸ್ಥಳಾಂತರಗೊಳ್ಳದ ಹಿನ್ನಲೆಯಲ್ಲಿ ಅನಿವಾರ್ಯವಾಗಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಚಿಂತನೆ

ವರದಿಯಲ್ಲಿ ಬಿಪಿಎಲ್ ಕಾರ್ಡುಗಳನ್ನು ಪಡೆಯಲು ವಾರ್ಷಿಕ ಆದಾಯ ನೀತಿಯನ್ನು ಮೂರು ಲಕ್ಷ ರೂ.ಗಳಿಗೆ ಹೆಚ್ಚಿಸಬೇಕು ಎಂಬ ಶಿಫಾರಸ್ಸು ಇದೆ. ಅದನ್ನು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದರು. ಕೇಂದ್ರ ಸರ್ಕಾರದ ಮಾನದಂಡದ ಪ್ರಕಾರ ರಾಜ್ಯದಲ್ಲಿ 1.09 ಕೋಟಿ ಬಿಪಿಎಲ್ ಕಾರ್ಡ್‌ಗಳು ಇರಬೇಕು. ಆದರೆ ನಮ್ಮಲ್ಲಿ ಇನ್ನೂ 15–20 ಲಕ್ಷ ಹೆಚ್ಚಿವೆ. ಅವುಗಳಿಗೆ ರಾಜ್ಯ ಸರ್ಕಾರವೇ ಸ್ವಂತ ಖರ್ಚಿನಲ್ಲಿ ಪಡಿತರ ನೀಡುತ್ತಿದೆ ಎಂದು ಹೇಳಿದರು. ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಕಾರ್ಡ್‌ಗಳನ್ನು ಆದ್ಯತೆ ಕಾರ್ಡ್‌ಗಳು ಎಂದು ಪರಿಗಣಿಸಲಾಗಿದೆ. ಇವುಗಳನ್ನು ಪಡೆಯಲು 2017ರಲ್ಲಿ ಮಾನದಂಡಗಳನ್ನು ರೂಪಿಸಲಾಗಿದೆ ಎಂದರು.

ಶಾಸಕ ಶ್ರೀವತ್ಸ ಆಗ್ರಹ

ರೋಗರುಜಿನಿಗಳು ಇದ್ದರೆ ಬೇರೆ ಪ್ರಾಣಿಗಳಿಗೆ ತಗುಲುವ ಸಾಧ್ಯತೆ ಇರುತ್ತದೆ. ಹಾಗಾಗಿ, ಚಿತಾಗಾರ ವ್ಯವಸ್ಥೆಯೇ ಸೂಕ್ತ ಎಂದು ಇದೇ ವೇಳೆ ಅಭಿಪ್ರಾಯಿಸಿದರು.

ಪ್ರಾಣಿಜನ್ಯ ತ್ಯಾಜ್ಯ ಘಟಕವಿದೆ: ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರ ಪರವಾಗಿ ಪ್ರತಿಕ್ರಿಯಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಸಾಕುಪ್ರಾಣಿಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ರಾಯನಕೆರೆ ಪ್ರದೇಶದ ಸುಮಾರು 5 ಎಕರೆ ಜಾಗದಲ್ಲಿ ಪ್ರಾಣಿಜನ್ಯ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ ಮಾಡಲಾಗಿದೆ. ದೊಡ್ಡ ಪ್ರಾಣಿಗಳು ಸತ್ತರೆ ಪಾಲಿಕೆಯ ಟ್ರಾಕ್ಟರ್, ಟಿಪ್ಪರ್‌ಗಳ ಮೂಲಕ ಹಾಗೂ ಸಣ್ಣ ಪ್ರಾಣಿಗಳ ಕಳೇಬರವನ್ನು ಆಟೋ ಅಥವಾ ಟೆಂಪೋದಲ್ಲಿ ಸಾಗಿಸಲಾಗುತ್ತಿದೆ. ದೇಶದಲ್ಲಿ ಪ್ರಾಣಿಗಳಿಗೆ ಪ್ರತ್ಯೇಕ ಚಿತಾಗಾರ ಕಲ್ಪಿಸಿರುವುದನ್ನು ಎಲ್ಲಿಯೂ ಕೇಳಿಲ್ಲ. ಶಾಸಕರಾದ ಶ್ರೀವತ್ಸ ಅವರ ಮನವಿಯನ್ನು ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಬೇರೆಡೆಯಿಂದ ಭಾರತ ತಲುಪಿದೆ

ಅದರ ಪರಿಣಾಮಗಳನ್ನು ಎದುರಿಸಬೇಕಾಗಿದೆ ಎಂದು ಅವರು ಹೇಳಿದರು. ಸಂಸ್ಕರಣಾಗಾರಗಳು ಹೆಚ್ಚಿನ ಸಾಮರ್ಥ್ಯದ ಬಳಕೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಹಲವಾರು ಸಂದರ್ಭಗಳಲ್ಲಿ, ಅವು 100% ಮೀರುತ್ತಿವೆ. ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ, ಎಟಿಎಫ್ ಅಥವಾ ಇಂಧನ ತೈಲದ ಕೊರತೆಯಿಲ್ಲ. ಪೆಟ್ರೋಲ್, ಡೀಸೆಲ್, ವಿಮಾನಯಾನ, ಟರ್ಬೈನ್ ಇಂಧನ, ಸೀಮೆಎಣ್ಣೆ ಮತ್ತು ಇಂಧನ ತೈಲದ ಲಭ್ಯತೆಯನ್ನು ಸಂಪೂರ್ಣವಾಗಿ ಖಚಿತಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಭಾರತ ವರ್ಷಗಳಲ್ಲಿ ತನ್ನ ಕಚ್ಚಾ ತೈಲ ಆಮದು ಮೂಲಗಳನ್ನು ಗಮನಾರ್ಹವಾಗಿ ವೈವಿಧ್ಯಗೊಳಿಸಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಹಾದುಹೋಗುವ ಸಾಗಣೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿದೆ ಎಂದು ಪುರಿ ಹೇಳಿದರು. ಹಾರ್ಮುಜ್ ಪ್ರದೇಶದ ಹೊರತಾದ ಪ್ರದೇಶದಿಂದ ಕಚ್ಚಾ ತೈಲದ ಆಮದು ಸರಿಸುಮಾರು 70%ಕ್ಕೆ ಏರಿದೆ. ಸಂಘರ್ಷ ಪ್ರಾರಂಭವಾಗುವ ಮೊದಲು ಇದು 55% ರಷ್ಟಿತ್ತು. ಭಾರತದ ಮೂಲಗಳು 2006 ಮತ್ತು 2007 ರಲ್ಲಿ 27 ದೇಶಗಳಿಂದ ಬೆಳೆದಿವೆ. ಸತತ ವರ್ಷಗಳಲ್ಲಿ ನಿರಂತರ ನೀತಿಯ ಸುಧಾರಣೆಗಳ ಮೂಲಕ ನಿರ್ಮಿಸಲಾದ ಈ ರಚನಾತ್ಮಕ ವೈವಿಧ್ಯೀಕರಣ ಇತರ ರಾಷ್ಟ್ರಗಳು ತಮ್ಮನ್ನು ತಾವು ಕಂಡುಕೊಳ್ಳದ ಆಯ್ಕೆಗಳನ್ನು ನಮಗೆ ನೀಡಿದೆ.

ಸಂಸ್ಕರಣಾಗಾರಗಳು ಹೆಚ್ಚಿನ ಸಾಮರ್ಥ್ಯದ ಬಳಕೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಹಲವಾರು ಸಂದರ್ಭಗಳಲ್ಲಿ, ಅವು 100% ಮೀರಿವೆ. ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಎಟಿಎಫ್ ಅಥವಾ ಇಂಧನ ತೈಲದ ಕೊರತೆಯಿಲ್ಲ. ಪೆಟ್ರೋಲ್, ಡೀಸೆಲ್, ವಿಮಾನಯಾನ, ಟರ್ಬೈನ್ ಇಂಧನ, ಸೀಮೆಎಣ್ಣೆ ಮತ್ತು ಇಂಧನ ತೈಲದ ಲಭ್ಯತೆಯನ್ನು ಸಂಪೂರ್ಣವಾಗಿ ಖಚಿತಪಡಿಸಲಾಗಿದೆ. ದೇಶಾದ್ಯಂತ ಚಿಲ್ಲರೆ ಮಾರಾಟ ಮಳಿಗೆಗಳು ದಾಸ್ತಾನು ಮಾಡಲ್ಪಟ್ಟಿವೆ ಮತ್ತು ಈ ಉತ್ಪನ್ನಗಳಿಗೆ ಪೂರೈಕೆ ಸರಪಳಿಗಳು ಸಾಮಾನ್ಯವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಅವರು ಹೇಳಿದರು. ಪ್ರಧಾನ ಮಂತ್ರಿಯವರ ರಾಜತಾಂತ್ರಿಕ ಸಂಪರ್ಕದಿಂದಾಗಿ, ಭಾರತ ಹಾರ್ಮುಜ್ ಜಲಸಂಧಿ ತಲುಪಿಸಬಹುದಾದ ಕಚ್ಚಾ ತೈಲದ ಪ್ರಮಾಣವನ್ನು ಮೀರುವ ಕಚ್ಚಾ ತೈಲವನ್ನು ಅದೇ ಅವಧಿಯಲ್ಲಿ ಪಡೆದುಕೊಂಡಿದೆ ಎಂದು ಸಚಿವರು ಹೇಳಿದರು.

ಮೈಸೂರು ಮಿತ್ರ

ತೈಲ ಸರಬರಾಜು ಕಂಪನಿಗಳ ಜೊತೆ ಡಿಸಿ ಲಕ್ಷ್ಮಿಕಾಂತರೆಡ್ಡಿ ಸಭೆ

ಮೈಸೂರು ಜಿಲ್ಲೆಯಲ್ಲಿ ಗೃಹ ಬಳಕೆ ಸಿಲಿಂಡರ್ ಅಭಾವ ಇಲ್ಲ

● ಕಾಳಸಂತೆಯಲ್ಲಿ ಅಡುಗೆ ಅನಿಲ ಮಾರಾಟ ಮಾಡಿದರೆ ಕಠಿಣ ಕ್ರಮ ● ಹೋಟೆಲ್ ಸೇರಿ ವಾಣಿಜ್ಯ ವ್ಯವಹಾರಕ್ಕೆ ವಾಣಿಜ್ಯ ಅನಿಲ ಪೂರೈಕೆ ಸ್ಥಗಿತ ● ಆಸ್ಪತ್ರೆ, ಹಾಸ್ಟೆಲ್ ಸೇರಿ ಅಗತ್ಯ ಸೇವಾ ವಲಯಕ್ಕೆ ಪೂರೈಕೆ ವ್ಯವಸ್ಥೆ

ಮೈಸೂರು, ಮಾ.12(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಗೃಹ ಬಳಕೆಯ ಅಡುಗೆ ಅನಿಲ (ಎಲ್ ಪಿಜಿ ಸಿಲಿಂಡರ್) ಪೂರೈಕೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಸ್ಪಷ್ಟಪಡಿಸಿದ್ದಾರೆ.



ಮೈಸೂರು ಜಿಪಂ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ತೈಲ ಸರಬರಾಜು ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿದರು.

ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಿಲ್ಲದ ಕಾರಣ ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ತೈಲ ಸರಬರಾಜು ಕಂಪನಿಗಳಾದ ಎಚ್‌ಪಿಸಿಎಲ್, ಬಿಪಿಸಿಎಲ್, ಐಓಸಿಎಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾಹಿತಿ ಪಡೆದ ನಂತರ ಈ ಸ್ಪಷ್ಟನೆ ನೀಡಿದ್ದಾರೆ.

ಗೃಹ ಬಳಕೆಯ ಅನಿಲ ಕೊರತೆ ಉಂಟಾಗಬಹುದು ಎಂಬ ಆತಂಕದಿಂದ ಜನರು ಮುಂಗಡವಾಗಿ ಅಡುಗೆ ಅನಿಲ ಸಿಲಿಂಡರ್ ಬುಕ್ಕಿಂಗ್ ಮಾಡುತ್ತಿದ್ದಾರೆ. ಆದರೆ, ಜಿಲ್ಲೆಯಲ್ಲಿ ಸದ್ಯಕ್ಕೆ ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ತೊಂದರೆ ಆಗಿಲ್ಲ ಎಂದು ಖಚಿತಪಡಿಸಿದರು.

ಅಡುಗೆ ಅನಿಲವನ್ನು ಅಕ್ರಮವಾಗಿ ಸಂಗ್ರಹಿಸಿಡುವುದು ಅಥವಾ ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡು ಬಂದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ಲಕ್ಷ್ಮಿಕಾಂತರೆಡ್ಡಿ ಎಚ್ಚರಿಸಿದ್ದಾರೆ.

ವಾಣಿಜ್ಯ ಅಡುಗೆ ಅನಿಲ ಬಳಕೆಗೆ ಸಂಬಂಧಿಸಿದಂತೆ ಹೋಟೆಲ್, ರೆಸ್ಟೋರೆಂಟ್, ಕೈಗಾರಿಕೆ, ಕಲ್ಯಾಣ ಮಂಟಪಗಳಿಗೆ ಸದ್ಯಕ್ಕೆ ಅಡುಗೆ ಅನಿಲದ ಪೂರೈಕೆ ಸ್ಥಗಿತಗೊಳಿಸಲಾಗಿದೆ. ಆದರೆ ಆಸ್ಪತ್ರೆ, ಶಾಲೆ, ವಸತಿ ಶಾಲೆ, ವಿದ್ಯಾರ್ಥಿನಿಲಯ, ಅಂಗನವಾಡಿ, ಅನಾಥಾಶ್ರಮಗಳು ಸೇರಿದಂತೆ ಅಗತ್ಯ ಸೇವಾ ಸಂಸ್ಥೆಗಳಿಗೆ ಅಡುಗೆ ಅನಿಲದ ಕೊರತೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ತೈಲ ಸರಬರಾಜು ಕಂಪನಿಗಳಿಗೆ ಇದೇ ವೇಳೆ ಸೂಚಿಸಿದರು.

ಒಂದು ವೇಳೆ ಅಡುಗೆ ಅನಿಲ ಸಿಲಿಂಡರ್ ಸರಬರಾಜಿನಲ್ಲಿ ತೊಂದರೆಯಾದರೆ ತಕ್ಷಣ ಜಿಲ್ಲಾಡಳಿತದ ಗಮನಕ್ಕೆ ತರಬೇಕೆಂದು ಲಕ್ಷ್ಮಿಕಾಂತರೆಡ್ಡಿ, ತೈಲ ಸರಬರಾಜು ಕಂಪನಿಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಯುಕೇಶ್ ಕುಮಾರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಒಡಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನ್–2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಇಫ್ತಿಯಾರ್ ಕೂಟ



ಮೈಸೂರಿನ ಕೆ.ಆರ್.ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಇಫ್ತಿಯಾರ್ ಕೂಟ ಏರ್ಪಡಿಸಲಾಗಿತ್ತು.

ಮೈಸೂರು, ಮಾ.12– ಪವಿತ್ರ ರಂಜಾನ್ ಮಾಸದ ಹಿನ್ನೆಲೆಯಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮುಸ್ಲಿಂ ಬಾಂಧವರಿಗೆ ಇಫ್ತಿಯಾರ್ ಕೂಟ ಆಯೋಜಿಸಲಾಗಿತ್ತು.

ನಗರದ ಹಾರ್ಡ್ವಿಕ್ ಸಭಾಂಗಣದಲ್ಲಿ ಆಯೋಜಿಸಿದ್ದ ಇಫ್ತಿಯಾರ್ ಕೂಟದಲ್ಲಿ ಕಾಕರವಾಡಿ, ನಾಚನಹಳ್ಳಿ ಪಾಳ್ಯ, ವಿದ್ಯಾರಣ್ಯಪುರಂ, ಆದಾಂಖಾನ್ ಮಸೀದಿ, ನಂಜುಮಳಿಗೆ, ಸುಣ್ಣದಕೇರಿ, ರೆಹಮಾನೀಯ ಮೊಹಲ್ಲಾ, ನೂರಡಿ ರಸ್ತೆ ಮಸೀದಿ, ಫಿರ್ದೋಸ್ ಮಸೀದಿ ಸೇರಿದಂತೆ ಕೆ.ಆರ್.ಕ್ಷೇತ್ರದ ವಿವಿಧೆಡೆಯಿಂದ ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.

ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ಅಯೂಬ್ ಖಾನ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯರಾದ ಜಾಕೀರ್ ಪಾಷಾ, ಜೆ.ಗೋಪಿ, ಮುಖಂಡರಾದ ಮೈನುದ್ದೀನ್ ಪಾಷಾ, ಅಕ್ರಂ ಪಾಷ, ಮೊಹಮ್ಮದ್ ಶಾಹಿಲ್ ಖಾನ್ ಸಿದ್ದಖಿ, ಮೌಲಾನಾ ಆಸೀಫ್ ರಶಾದಿ, ಸೈಫ್, ಅನ್ಸಾರ್ ಪಾಷಾ, ಎಂ.ಸುನೀಲ್, ಜೋಗಿ ಮಹೇಶ್, ಪಟಾಕಿ ಮಂಜುನಾಥ್, ಸೇವಾದಳ ಘಟಕದ ಅಧ್ಯಕ್ಷ ಎಂ.ಕೆ ಅಶೋಕ್, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಡೈರಿ ವೆಂಕಟೇಶ್, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಮಹಮ್ಮದ್ ಫಾರೂಕ್, ಕಲೀಂ ಷರೀಫ್, ನಾಸೀರ್, ವಿಶ್ವನಾಥ್ (ವಿಶ್ವ)ಮತ್ತಿತರರು ಉಪಸ್ಥಿತರಿದ್ದರು.

ಅಡಿಕೆ ಕಳ್ಳತನ; ಮೂವರು ಖದೀಮರ ಬಂಧನ

8 ಲಕ್ಷದ ಅಡಿಕೆ, 2 ಲಕ್ಷ ನಗದು, 3 ಲಕ್ಷದ ಇತರೆ ಪದಾರ್ಥ ವಶಕ್ಕೆ

ಮೈಸೂರು, ಮಾ.12(ಎಂಕೆ)– ಗೋಡೌನ್‌ನಿಂದ ಅಡಿಕೆ ಕಳ್ಳತನ ಮಾಡಿದ್ದ ಮೂವರು ಕಳ್ಳರ ಬಂಧಿಸಿರುವ ಬೆಟ್ಟದಪುರ ಠಾಣೆ ಪೊಲೀಸರು, ಬಂಧಿತರಿಂದ 8 ಲಕ್ಷ ರೂ.ಮೌಲ್ಯದ ಅಡಿಕೆ, 2 ಲಕ್ಷ ರೂ.ನಗದು, 3 ಲಕ್ಷ ರೂ.ಮೌಲ್ಯದ ಬಟ್ಟೆಗಳು ಹಾಗೂ ಒಂದು ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದಾರೆ.



ಗೋಡೌನ್‌ನಿಂದ ಅಡಿಕೆ ಕಳ್ಳತನ ಮಾಡಿದ್ದ ಆರೋಪಿಗಳನ್ನು ಬಂಧಿಸಿದ ಬೆಟ್ಟದಪುರ ಠಾಣೆ ಪೊಲೀಸರ ತಂಡ.

ಸರಗೂರು ತಾಲೂಕು ಕೆ.ಬೆಳತ್ತೂರು ಗ್ರಾಮದ ನಿವಾಸಿ ಬಿ.ಕೆ.ವಿವೇಕ್, ಮೈಸೂರಿನ ನಜರ್‌ಬಾದ್‌ನ ಎಸ್.ಪ್ರಸನ್ನ, ರಾಘವೇಂದ್ರನಗರದ ರಾಜೇಶ ಬಂಧಿತ ಆರೋಪಿಗಳು. ಮಾ.2 ರಂದು ಬೆಟ್ಟದ ತುಂಗಾ ಗ್ರಾಮದ ಟಿ.ಆರ್.ಶ್ರೀನಾಥ್ ರಾಜೇ ಅರಸ್ ಎಂಬುವರು ತಮ್ಮ ಗೋಡೌನ್‌ನಲ್ಲಿಟ್ಟಿದ್ದ 15 ಕ್ವಿಂಟಾಲ್ ನಷ್ಟು ಅಡಿಕೆಯನ್ನು ಯಾರೋ ಕಳ್ಳತನ ಮಾಡಿರುವ ಕುರಿತು ಬೆಟ್ಟದಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಆರೋಪಿಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಬೆಟ್ಟದಪುರ ಪೊಲೀಸ್ ಠಾಣೆ, ಬೈಲಕುಪ್ಪೆ ಪೊಲೀಸ್ ಠಾಣೆ ಮತ್ತು ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ತಲಾ 1 ಪ್ರಕರಣ ಹಾಗೂ ಸಾಲಿಗ್ರಾಮ ಪೊಲೀಸ್ ಠಾಣೆ ವ್ಯಾಪ್ತಿಯ ಮೂರು ಪ್ರಕರಣ ಸೇರಿ ಒಟ್ಟು 06 ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ತಿಳಿದುಬಂದಿದೆ.

ಬಂಧಿತ ಆರೋಪಿಗಳಿಂದ 3 ಲಕ್ಷ ಬೆಲೆ ಬಾಳುವ ಕೆಎ–04 ಎಎ–0900ರ ಟಾಟಾ ಏಸ್ ಗೂಡ್ಸ್ ವಾಹನ, ಸುಮಾರು 3 ಲಕ್ಷ ಬೆಲೆ ಬಾಳುವ 3 ಚೀಲ ಬಟ್ಟೆಗಳು, 8 ಲಕ್ಷ ರೂ.ಮೌಲ್ಯದ ಅಡಿಕೆ ಹಾಗೂ 2 ಲಕ್ಷ ರೂ.ನಗದನ್ನು ವಶಕ್ಕೆ ಪಡೆದಿದ್ದಾರೆ.

ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿಗಳಾದ ಸಿ. ಮಲ್ಲಿಕ್, ಎಲ್. ನಾಗೇಶ್, ಹುಣಸೂರು ಉಪವಿಭಾಗದ ಡಿವೈಎಸ್‌ಪಿ ರವಿ ಮಾರ್ಗದರ್ಶನದಲ್ಲಿ ಬೈಲಕುಪ್ಪೆ ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್, ಪಿಎಸ್ಐ ಅಜಯ್ ಕುಮಾರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಎಎಸ್ಐ ಮಂಜುನಾಥ್, ಸಿಬ್ಬಂದಿಗಳಾದ ಪ್ರಭಾಕರ, ಅನಂತ.ಸಿ.ಆರ್, ಮಲ್ಲೇಶ, ಸತೀಶ ಕುಮಾರ್, ಪ್ರೇಮ್ ಕುಮಾರ್.ಎಸ್.ಡಿ, ಹರ್ಷ.ಎಸ್.ಎನ್, ಶಿವಪ್ಪ ಭಾಗವಹಿಸಿದ್ದರು.

ಸನ್ನಡತೆ ಆಧಾರದಲ್ಲಿ ಇಂದು 30 ಶಿಕ್ಷಾ ಬಂಧಿಗಳ ಬಿಡುಗಡೆ

ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಿಂದ

ಮೈಸೂರು ಕೇಂದ್ರ ಕಾರಾಗೃಹದಿಂದಲೂ ಒಬ್ಬರಿಗೆ ಬಿಡುಗಡೆ ಭಾಗ್ಯ

ಮೈಸೂರು,ಮಾ.12(ಪಿಎಂ)– ರಾಜ್ಯ ಸರ್ಕಾರದ ಆದೇಶದಂತೆ ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಿಂದ ನಾಳೆ (ಮಾ.13) ಸನ್ನಡತೆ ಆಧಾರದಲ್ಲಿ 30 ಜೀವಾವಧಿ ಶಿಕ್ಷಾ ಬಂಧಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಅಂತೆಯೇ ಮೈಸೂರು ಕೇಂದ್ರ ಕಾರಾಗೃಹದಿಂದ ಒಬ್ಬರಿಗೆ ಬಿಡುಗಡೆ ಭಾಗ್ಯ ಸಿಕ್ಕಿದೆ.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕು ಚಿಕ್ಕಮಾಲಾಪುರದ ಚಂದ್ರಮ್ಮ, ಮೈಸೂರು ಕೇಂದ್ರ ಕಾರಾಗೃಹದಿಂದ ಬಿಡುಗಡೆ ಆಗುವವರು. ಒಟ್ಟಾರೆ 31 ಜೀವಾವಧಿ ಶಿಕ್ಷಾ ಬಂದಿಗಳನ್ನು ಬಿಡುಗಡೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಪೈಕಿ ಮೈಸೂರು ಕೇಂದ್ರ ಕಾರಾಗೃಹದ ಎಲ್.ಎಸ್.ಪ್ರೇಮಕುಮಾರಿ ಪೆರೋಲ್ ರಜೆಯಲ್ಲಿದ್ದಾಗ ಮೃತಪಟ್ಟಿದ್ದಾರೆ. ಹಾಗಾಗಿ 30 ಮಂದಿ ಬಿಡುಗಡೆಯಾಗಲಿದ್ದಾರೆ.

ಭಾರತ ಸಂವಿಧಾನದ ಅನುಚ್ಛೇದ 161ರನ್ವಯ ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆಯ ಆಧಾರದಲ್ಲಿ ಅವಧಿ ಪೂರ್ವ ಬಿಡುಗಡೆಗೊಳಿಸಲು ರಾಜ್ಯಪಾಲರ ಅನುಮೋದನೆಯಂತೆ ರಾಜ್ಯ ಸರ್ಕಾರ ಆದೇಶಿಸಿದೆ. ಬೆಂಗಳೂರು ಕೇಂದ್ರ ಕಾರಾಗೃಹದಿಂದ 14, ಮೈಸೂರಿನಿಂದ ಇಬ್ಬರು (ಒಬ್ಬರು ಪೆರೋಲ್ ರಜೆಯಲ್ಲಿದ್ದಾಗ ಮೃತಪಟ್ಟಿದ್ದಾರೆ.), ಬೆಳಗಾವಿ–ಇಬ್ಬರು, ಕಲಬುರಗಿ–ಇಬ್ಬರು, ಶಿವಮೊಗ್ಗ–ಒಬ್ಬರು, ವಿಜಯಪುರ–ಐವರು, ಬಳ್ಳಾರಿ–ಮೂವರು, ಧಾರವಾಡ–ಒಬ್ಬರು ಹಾಗೂ ಶಿವಮೊಗ್ಗ ಮಹಿಳಾ ಕೇಂದ್ರ ಕಾರಾಗೃಹದಿಂದ ಒಬ್ಬರು ಸೇರಿದಂತೆ 31 ಶಿಕ್ಷಾ ಬಂದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಮಾ.13ರಂದು ಬೆಳಗ್ಗೆ 10 ಗಂಟೆಗೆ ಏಕಕಾಲದಲ್ಲಿ ಕೇಂದ್ರ ಕಾರಾಗೃಹಗಳಿಂದ ಬಿಡುಗಡೆ ಮಾಡಲಾಗುತ್ತಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ವಿ.ಶೇಷುಮೂರ್ತಿ, ನಮ್ಮ ಕಾರಾಗೃಹದಿಂದ ಚಂದ್ರಮ್ಮ ಎಂಬುವರು ಬಿಡುಗಡೆಯಾಗುತ್ತಿದ್ದಾರೆ. ನಮ್ಮಲ್ಲಿ ಇಬ್ಬರು ಬಂದಿಗಳಿಗೆ ಬಿಡುಗಡೆಗೆ ಅವಕಾಶ ಇತ್ತು. ಆದರೆ ಒಬ್ಬರು ಪೆರೋಲ್ ರಜೆಯಲ್ಲಿದ್ದಾಗ ಅನಾರೋಗ್ಯ ಕಾರಣ ನಿಧನರಾಗಿದ್ದಾರೆ ಎಂದು ತಿಳಿಸಿದರು.

ಮಾ.19ರವರೆಗೆ ಮೈಸೂರಲ್ಲಿ ರುದ್ರಾಕ್ಷಿ ಮೇಳ

ಮೈಸೂರು, ಮಾ.12– ನಗರದ ಜೆಎಸ್‌ಎಸ್ ಆಸ್ಪತ್ರೆ ಎದುರಿನ ಹೋಟೆಲ್ ಸಿಪಾಯ್ ಗ್ರಾಂಡೆ ಹೋಟೆಲ್ ಸಭಾಂಗಣದಲ್ಲಿ ಮಾ.19ರವರೆಗೆ ಅಪೂರ್ವ ಶಕ್ತಿಶಾಲಿ ರುದ್ರಾಕ್ಷಿ ಮೇಳ ಆಯೋಜಿಸಲಾಗಿದೆ.



ಹೈದರಾಬಾದ್ ಮೂಲದ ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆ ವತಿಯಿಂದ ಮಾ.11ರಿಂದಲೇ ನೇಪಾಳದ ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿದ್ದು, ಅತ್ಯಂತ ವಿರಳವಾದ ದುಂಡುಮುಖದ ಲಕ್ಷಾಂತರ ಮೌಲ್ಯದ ಏಕಮುಖ ರುದ್ರಾಕ್ಷಿಯನ್ನೂ ಕಾಣಬಹುದಾಗಿದೆ. ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ, ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ ವೇದಗಣಿತದ ಮೂಲಕ ಜನ್ಮರಾಶಿ ಆಧಾರದಲ್ಲಿ ತಿಳಿಸಿಕೊಡಲಾಗುವುದು. ಅಸಲಿ ಮತ್ತು ನಕಲಿ ರುದ್ರಾಕ್ಷಿಗಳ ಭಿನ್ನತೆ ಬಗ್ಗೆ ಮಾಹಿತಿ ನೀಡಲಾಗುವುದು. ಯಾರಿಗೆ ಎಷ್ಟು ಮುಖದ ರುದ್ರಾಕ್ಷಿ ಸೂಕ್ತ ಎಂದು ನಿರ್ಧರಿಸಿ, ಅಂತಹ ರುದ್ರಾಕ್ಷಿಯನ್ನೇ ನೀಡಲಾಗುವುದು. ರುದ್ರಾಕ್ಷಿ ಪ್ರದರ್ಶನ ಮತ್ತು ಮಾರಾಟ ಮಳಿಗೆಗೆ ಬೆಳಗ್ಗೆ 10.30ರಿಂದ ರಾತ್ರಿ 9ರವರೆಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗೆ 7097296666 ಸಂಪರ್ಕಿಸಬಹುದು ಎಂದು ಇಂಡಸ್–ನೇಪಾಳ ರುದ್ರಾಕ್ಷ ಸಂಸ್ಥೆಯ ನಿರ್ದೇಶಕ ಡಾ.ನರೇಂದ್ರ ಕಾಶಿರೆಡ್ಡಿ ತಿಳಿಸಿದ್ದಾರೆ.

ಗುಂಡ್ಲುಪೇಟೆಯ ಬರಗಿ ಗ್ರಾಮದಲ್ಲಿ ದೇವರ ವಿಗ್ರಹ ಕಳವು

ಗುಂಡ್ಲುಪೇಟೆ: ಇದುವರೆಗೂ ದೇವಾಲಯಗಳಲ್ಲಿ ಹುಂಡಿ ಹಣ ಚಿನ್ನಾಭರಣಗಳನ್ನು ಕದಿಯುತ್ತಿದ್ದ ಕಳ್ಳರು ಇದೀಗ ದೇವರ ವಿಗ್ರಹವನ್ನೇ ಕಳವು ಮಾಡಿರುವ ಘಟನೆ ಬರಗಿ ಗ್ರಾಮದಲ್ಲಿ ಸಂಭವಿಸಿದೆ.



ದೇವಾಲಯದ ಉದ್ಘಾಟನೆಯಾದ ಮೂರೇ ದಿನದಲ್ಲಿ ದೇವಾಲಯದ ಬೀಗ ಮುರಿದು ಒಳನುಗ್ಗಿರುವ ಕಳ್ಳರು, ಬೆಳ್ಳಿ ವಿಗ್ರಹ ಸಹಿತ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ಬೆಳಗ್ಗೆ ಗ್ರಾಮಸ್ಥರು ದೇವಸ್ಥಾನಕ್ಕೆ ಪೂಜೆಗೆ ತೆರಳಿದಾಗ ಕಳವು ಪ್ರಕರಣ ಬೆಳಕಿಗೆ ಬಂದಿದೆ. ಸುಮಾರು 15 ಗ್ರಾಂ ಚಿನ್ನ ಮತ್ತು 5ರಿಂದ 6 ಕೆಜಿಯಷ್ಟು ಬೆಳ್ಳಿ ಪದಾರ್ಥಗಳು ಕಳುವಾಗಿರುವುದಾಗಿ ಬರಗಿ ಗ್ರಾಮಸ್ಥರು ತಿಳಿಸಿದ್ದಾರೆ. ದೇವಸ್ಥಾನ ಲೋಕಾರ್ಪಣೆ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸೇರಿದಂತೆ ಹಲವು ಹರಗುರು ಚರಮೂರ್ತಿಗಳು ಭಾಗವಹಿಸಿದ್ದರು. ಜತೆಗೆ, ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಆ ವೇಳೆ ದೇವರಿಗೆ ಚಿನ್ನಾಭರಣ ಅಲಂಕಾರ ಮಾಡಲಾಗಿತ್ತು ಎನ್ನಲಾಗಿದೆ. ಇದಾದ ಮೂರೇ ದಿನಗಳಲ್ಲಿ ಕಳ್ಳತನ ನಡೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದಾರೆ. ಬೆರಳಚ್ಚು ತಜ್ಞರು ಸ್ಯಾಂಪಲ್ ಕಲೆಹಾಕಿದ್ದಾರೆ

ಇಂದು ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರ ಸಭೆ



ಮೈಸೂರು, ಮಾ.12– ಮಧ್ಯಪ್ರಾಚ್ಯದ ಯುದ್ಧದಿಂದಾಗಿ ಗ್ಯಾಸ್ ಸಿಲಿಂಡರ್ ಸರಬರಾಜಿನಲ್ಲಿ ಕೊರತೆಯುಂಟಾಗಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಬಳಕೆಗೆ ಅಗತ್ಯವಿರುವ ಗ್ಯಾಸ್ ಸಿಲಿಂಡರ್ ಸರಬರಾಜು ಮತ್ತು ದಾಸ್ತಾನು ಮೇಲ್ವಿಚಾರಣೆ ಮತ್ತು ಈ ಸಂಬಂಧ ಮಾಹಿತಿ ಸಂಗ್ರಹಿಸುವ ಸಂಬಂಧ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಮೈಸೂರು ನಗರ ಮತ್ತು ತಾಲೂಕಿನ ಎಲ್ಲಾ ಗ್ಯಾಸ್ ಏಜೆನ್ಸಿ ಮಾಲೀಕರ ಸಭೆಯನ್ನು ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ್ ಹಾಲ್‌ನಲ್ಲಿ ಶುಕ್ರವಾರ(ಮಾ.13) ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ.

ಫಾರೂಕ್ ಅಬ್ದುಲ್ಲಾ ಹತ್ಯೆ ಯತ್ನ; ಡಿಸಿಎಂಗೆ ಗಾಯ

ಜಮ್ಮು: ಜಮ್ಮುವಿನಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರ ಮೇಲೆ ಗುಂಡಿನ ದಾಳಿ ನಡೆದಿದೆ. ಅವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದು, ಭದ್ರತಾ ಸಿಬ್ಬಂದಿ ದಾಳಿಕೋರನನ್ನು ಬಂಧಿಸಿದ್ದಾರೆ.



ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಡಾ. ಫಾರೂಕ್ ಅಬ್ದುಲ್ಲಾ ಅವರ ಮೇಲೆ ಗುಂಡು ಹಾರಿಸಲಾಗಿದ್ದು, ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಬುಧವಾರ (ಮಾರ್ಚ್ 11) ಜಮ್ಮುವಿನ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ನಡೆದ ವಕೀಲರ ವಿವಾಹ ಸಮಾರಂಭದಲ್ಲಿ ಅಬ್ದುಲ್ಲಾ ಭಾಗವಹಿಸಿದ್ದರು.

ಗುಂಡಿನ ದಾಳಿ ನಡೆಸಿದ ಕಮಲ್ ಸಿಂಗ್ ಜಮ್ವಾಲ್ ಎಂಬಾತನನ್ನು ಭದ್ರತಾ ಸಿಬ್ಬಂದಿ ಬಂಧಿಸಿ ವಶಕ್ಕೆ ಪಡೆದಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಮತ್ತು ಫಾರೂಕ್ ಅಬ್ದುಲ್ಲಾ ಅವರ ಪುತ್ರ ಒಮರ್ ಅಬ್ದುಲ್ಲಾ, 'ದೇವರು ಕರುಣಾಮಯಿ. ನನ್ನ ತಂದೆ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಪ್ರಸ್ತುತ ದಾಳಿ ಮಾಡಿದ್ದೇಕೆ, ಯಾರು ಎಂಬ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೆ ಲೋಡ್ ಮಾಡಿದ ಪಿಸ್ತೂಲ್ ಹೊಂದಿದ್ದ ವ್ಯಕ್ತಿಯೊಬ್ಬರು ನನ್ನ ತಂದೆಯ ಹತ್ತಿರ ಬಂದು ಗುಂಡು ಹಾರಿಸಿದ್ದಾರೆ ಎಂಬುದು ತಿಳಿದು ಬಂದಿದೆ ಭದ್ರತಾ ತಂಡವು ಗುಂಡನ್ನು ತಡೆದು ಹತ್ಯೆಯ ಪ್ರಯತ್ನವನ್ನು ವಿಫಲಗೊಳಿಸಿದೆ.

ಫಾರೂಕ್ ಅಬ್ದುಲ್ಲಾ ಅವರಿಗೆ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ. ಅವರೊಂದಿಗೆ ಜಮ್ಮು ಮತ್ತು ಕಾಶ್ಮೀರ ಉಪ ಮುಖ್ಯಮಂತ್ರಿ ಸುರೀಂದರ್ ಚೌಧರಿ ಕೂಡ ಇದ್ದರು. ಚೌಧರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರಿಗೆ ವೈದ್ಯಕೀಯ ಚಿಕಿತ್ಸೆ ನೀಡಲಾಯಿತು.

ಬಂಡೀಪುರ, ನಾಗರಹೊಳೆಯಲ್ಲಿ ಷರತ್ತುಗಳನ್ವಯ ಸಫಾರಿ

● ಅರಣ್ಯ ಸಚಿವ ಈಶ್ವರ ಖಂಡ್ರೆ ಸಮರ್ಥನೆ ● ವನ್ಯಜೀವಿ– ಮಾನವ ಸಂಘರ್ಷ ತಡೆಗೆ ಎಲ್ಲಾ ಕ್ರಮ
● ಹುಲಿಗಳ ಸಂಖ್ಯೆ ಗಣನೀಯ ಏರಿಕೆ ● ವನ್ಯಜೀವಿಗಳ ಸಂಖ್ಯೆ ಹೆಚ್ಚುತ್ತಿದೆ; ಅರಣ್ಯದ ಮಿತಿ ಕ್ಷೀಣಿಸುತ್ತಿದೆ

ಬೆಂಗಳೂರು, ಮಾ.12(ಕೆಎಂಶಿ)– ಬಂಡೀಪುರ ಮತ್ತು ನಾಗರಹೊಳೆಯಲ್ಲಿನ ಸಫಾರಿಯನ್ನು ಮತ್ತೆ ಷರತ್ತು ಬದ್ಧವಾಗಿ ಪುನಾರಂಭ ಮಾಡಿರುವುದನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸಮರ್ಥಿಸಿಕೊಂಡಿದ್ದಾರೆ.



ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸಫಾರಿಯನ್ನು ಏಕಾಏಕಿ ನಿಲ್ಲಿಸಲಿಲ್ಲ. ಕಳೆದ ನವೆಂಬರ್ ತಿಂಗಳಲ್ಲಿ 15 ದಿನಗಳ ಅಂತರದಲ್ಲಿ ಮೂರು ಅಮೂಲ್ಯ ಜೀವಹಾನಿ ಆಗಿತ್ತು, ಒಬ್ಬರು ಶಾಶ್ವತವಾಗಿ ಅಂಗವಿಕಲರಾದರು, ಹುಲಿಗಳು ಕಾಡಿನಿಂದ ಹೊರಗೆ ಬಂದು ದಾಳಿ ಮಾಡುತ್ತಿದ್ದವು. ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಯಿತು ಎಂದು ಸ್ಪಷ್ಟಪಡಿಸಿದರು.

ನವೆಂಬರ್‌ನಲ್ಲಿ ತಾವು ಚಾಮರಾಜನಗರದಲ್ಲಿ ಈ ಸಂಬಂಧ ಸಭೆ ನಡೆಸಿದಾಗ ಹಲವು ರೈತ ಸಂಘಟನೆಗಳು ಸಫಾರಿ ರಾತ್ರಿಯವರೆಗೂ ನಡೆಯುತ್ತಿದೆ. ಹೆಚ್ಚಿನ ವಾಹನಗಳ ಸಂಚಾರ ಇದೆ. ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ ಇದರಿಂದ ವಿಚಲಿತವಾಗಿ ವನ್ಯಜೀವಿಗಳು ಕಾಡಿನಿಂದ ಹೊರಬರುತ್ತಿದ್ದು ಸಫಾರಿ ನಿಲ್ಲಿಸಬೇಕು ಎಂದು ಆಗ್ರಹಿಸಿದ್ದರು

ಒಂದು ವಾರದ ಅಂತರದಲ್ಲಿ ಮತ್ತೊಂದು ಹುಲಿ ದಾಳಿ ನಡೆದು ವ್ಯಕ್ತಿಯೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಸಫಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಸಿಬ್ಬಂದಿ ಮತ್ತು ವಾಹನವನ್ನು ಕಾಡಿನಂಚಿನ ಗ್ರಾಮದಲ್ಲಿ ನಿಗಾ ಇಡಲು ಬಳಸಲಾಯಿತು ಎಂದು ತಿಳಿಸಿದರು.

ಬಂಡೀಪುರದಲ್ಲಿ 314 ಕಿ.ಮೀ. ಗಡಿ ಇದೆ. ಅದರಲ್ಲಿ 100 ಕಿಮೀ ಗಡಿ ಹೆಚ್ಚಿನ ಸಂಘರ್ಷ ಪ್ರದೇಶವಾಗಿದೆ. ಆ ಪ್ರದೇಶದಲ್ಲಿ 25 ಕಳ್ಳಬೇಟೆ ನಿಗ್ರಹ ಶಿಬಿರ ಸ್ಥಾಪಿಸಿ, ಸಿಬ್ಬಂದಿ ನೇಮಿಸಿ ಅವರಿಂದ 14 ಗಂಟೆ ಗಸ್ತು ಹಾಕಲು ಸೂಚಿಸಲಾಯಿತು. ಸಮಗ್ರ ಕಮಾಂಡ್ ಸೆಂಟರ್ ಕಾರ್ಯಾರಂಭ ಮಾಡಿಸಲಾಯಿತು. ಮುಂದೆ ಅನಾಹುತ ನಡೆಯದಂತೆ ಎಲ್ಲ ಪೂರ್ವಸಿದ್ಧತೆ ಮಾಡಿಕೊಂಡ ಬಳಿಕ ಸಫಾರಿ ಪುನಾರಂಭಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮಿಗಿಲಾಗಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಕೇಂದ್ರ ವನ್ಯಜೀವಿ ಸಂಸ್ಥೆಯ ಪ್ರತಿನಿಧಿಯನ್ನೂ ಒಳಗೊಂಡ ತಜ್ಞರ ಸಮಿತಿ ರಚಿಸಿ, ಆ ಸಮಿತಿಯ ಪ್ರಾಥಮಿಕ ವರದಿಯ ಆಧಾರದಲ್ಲಿ ಸಫಾರಿ ಪುನಾರಂಭ ಮಾಡಲಾಗಿದೆ ಎಂದು ವಿವರಿಸಿದರು.

ಹುಲಿಗಳ ಸಂಖ್ಯೆ ಗಣನೀಯ ಏರಿಕೆ: 1972ರಲ್ಲಿ ಬಂಡೀಪುರದಲ್ಲಿ ಕೇವಲ 12 ಹುಲಿಗಳಿದ್ದವು. ಕಳೆದ 3 ವರ್ಷದ ಹಿಂದೆ ಗಣತಿ ನಡೆದಾಗ ಅಲ್ಲಿ 150 ಹುಲಿ ಇದ್ದವು. ಈಗ ಹುಲಿಗಳ ಸಂಖ್ಯೆ 175 ಇವೆ.

ಕಾಡಿನ ಧಾರಣಾ ಸಾಮರ್ಥ್ಯ ತಿಳಿಯಲು ತಜ್ಞರ ಸಮಿತಿಯಿಂದ ವರದಿ ತರಿಸಿಕೊಳ್ಳುತ್ತಿದ್ದೇವೆ. ಕಾಡು ಹೆಚ್ಚುತ್ತಿಲ್ಲ. ಬದಲಾಗಿ ಕ್ಷೀಣಿಸುತ್ತಿದೆ. ಸಫಾರಿ ಪುನಾರಂಭ ಮಾಡಿದ ಬಳಿಕ ಪ್ರತಿಷ್ಠಾನಕ್ಕೆ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35ರಷ್ಟನ್ನು ಕಾಡಿನಂಚಿನ ಗ್ರಾಮದಲ್ಲಿ ಜನಸಂಪರ್ಕ ಸಭೆ ಮಾಡಲು, ಶಿಕ್ಷಣ, ಮೂಲಸೌಕರ್ಯ ಹೆಚ್ಚಳಕ್ಕೆ, ಉದ್ಯೋಗ ಸೃಷ್ಟಿಗೆ ಬಳಸಲು ಸೂಚಿಸಲಾಗಿದೆ ಎಂದು ಸದನಕ್ಕೆ ಈಶ್ವರ ಖಂಡ್ರೆ ತಿಳಿಸಿದರು.

ಆನೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದರ ಜೊತೆಗೆ ಎಕ್ಸ್ ಪ್ರೆಸ್ ಹೆದ್ದಾರಿ ಮೊದಲಾದ ಮೂಲಭೂತ ಕಾಮಗಾರಿಗೆ ಗಜಪಥ ಛಿದ್ರವಾಗಿ ಆನೆ ಹಾವಳಿಯೂ ಹೆಚ್ಚಾಗಿದೆ ಎಂದು ಪಿ.ಎಂ. ನರೇಂದ್ರಸ್ವಾಮಿ ಅವರ ಪ್ರಸ್ತಾವಕ್ಕೆ ಉತ್ತರಿಸಿದರು.

ಆನೆ–ಮಾನವ ಸಂಘರ್ಷ ತಡೆಗಟ್ಟಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ವರ್ಷ 116 ಕಿ.ಮೀ. ರೈಲು ಹಳಿ ತಡೆಗೋಡೆ (ರೈಲ್ವೆ ಬ್ಯಾರಿಕೇಡ್) ಮಂಜೂರು ಮಾಡಿದ್ದು, 201 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಗಳು ನಡೆಯುತ್ತಿದ್ದು, ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ ಎಂದೂ ತಿಳಿಸಿದರು.

ಮಳವಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಐದೂವರೆ ಕಿ.ಮೀ. ರೈಲು ಹಳಿ ತಡೆಗೋಡೆಗೆ ಮಂಜೂರಾತಿ ನೀಡಲಾಗಿದ್ದು, 9 ಕೋಟಿ 38 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಆರಂಭವಾಗುತ್ತಿದೆ. ಇದರ ಜೊತೆಯಲ್ಲಿ ಟೆಂಟಕಲ್ ಫೆನ್ಸಿಂಗ್, ಕಂದಕ ನಿರ್ಮಾಣ ಮಾಡುತ್ತಿದ್ದೇವೆ.

ಆನೆಗಳು ನಾಡಿನತ್ತ ಬಂದಾಗ ಮರಳಿ ಕಾಡಿಗೆ ಅಟ್ಟಲು ಆನೆ ಕಾರ್ಯಪಡೆ ಮಾಡಿದ್ದೇವೆ. ಚಿರತೆ ಕಾರ್ಯಪಡೆ ರಚಿಸಿದ್ದೇವೆ. ಡ್ರೋನ್ ಕ್ಯಾಮರಾ ಬಳಸಿಕೊಂಡು ವನ್ಯಜೀವಿಗಳ ಸಂಚಾರದ ಬಗ್ಗೆ ನಿಗಾ ಇಡುತ್ತಿದ್ದೇವೆ. ಹೆಚ್ಚಿನ ರೈಲು ಹಳಿ ತಡೆಗೋಡೆಗೆ ಬೇಡಿಕೆ ಬಂದರೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಉಪ ವಲಯ ಅರಣ್ಯಾಧಿಕಾರಿಗಳ ನೇಮಕಕ್ಕೂ ಕ್ರಮ ಕೈಗೊಳ್ಳಲಾಗುವುದು ಎಂದರು.

ಉತ್ತಮ ಶಿಕ್ಷಣದಿಂದ ಸದೃಢ ದೇಶ ಕಟ್ಟಲು ಸಾಧ್ಯ

ಪುಸ್ತಕ ಮನೆಯ ಅಂಕೇಗೌಡರ ಅಭಿಮತ

ಮೈಸೂರು, ಮಾ.12(ವಿವಿಹೆಚ್)– ಉತ್ತಮ ಶಿಕ್ಷಣದಿಂದ ಸದೃಢ ದೇಶ ಕಟ್ಟಲು ಸಾಧ್ಯ ಎಂದು ಮಂಡ್ಯ ಜಿಲ್ಲೆ, ಪಾಂಡವಪುರದ 'ಪುಸ್ತಕದ ಮನೆ' ಸ್ಥಾಪಕ, ಪದ್ಮಶ್ರೀ ಪುರಸ್ಕೃತರಾದ ಎಂ.ಅಂಕೇಗೌಡರು ಅಭಿಪ್ರಾಯಪಟ್ಟರು.



ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಗುರುವಾರ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ 4.0 ಅನ್ನು ಪದ್ಮಶ್ರೀ ಪುರಸ್ಕೃತ, ಪುಸ್ತಕ ಪ್ರೇಮಿ ಅಂಕೇಗೌಡರು ಉದ್ಘಾಟಿಸಿದರು

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ 4.0 ಉದ್ಘಾಟಿಸಿ ಅವರು ಮಾತನಾಡಿದರು.


ಚಿಕ್ಕವಯಸ್ಸಿನಿಂದಲೇ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಅಧ್ಯಯನಕ್ಕೆ ತಮ್ಮನ್ನು ತಾವು ಮುಡುಪಾಗಿಸಿಕೊಳ್ಳಬೇಕು. ಉತ್ತಮ ಶಿಕ್ಷಣದಿಂದ ಉತ್ತಮ ಪ್ರಜೆಯಾಗಿ ರೂಪುಗೊಳ್ಳುವುದರ ಜೊತೆಗೆ ಆ ಮೂಲಕ ಸದೃಢ ದೇಶ ಕಟ್ಟಲು ಸಾಧ್ಯವಾಗುತ್ತದೆ. ನಿಮ್ಮಲ್ಲಿರುವ ಶಕ್ತಿ, ಸಾಮರ್ಥ್ಯವನ್ನು ಉತ್ತಮ ಗುರಿ ಸಾಧನೆಗೆ ಬಳಸಬೇಕು. ವೈಯಕ್ತಿಕ ಕ್ಷಣಿಕ ಆಸೆ–ಆಮಿಷಗಳಿಗೆ ಮರುಳಾಗದೆ ಒಳ್ಳೆಯ ಜೀವನ ಹಾದಿಯನ್ನು ಕಂಡು ಕೊಳ್ಳಿ, ವಿಲಾಸಿ ಜೀವನಕ್ಕೆ ಹಾತೊರೆಯುವ, ಪರರ ಅಧೀನದಲ್ಲಿ ಬದುಕುವ ಮನೋಭಾವ ತೊರೆಯಿರಿ. ಆಗ ಪ್ರತಿಯೊಬ್ಬರೂ ದೇಶಕ್ಕೆ, ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಹುದು ಎಂದು ಕಿವಿಮಾತು ಹೇಳಿದರು.

ನಾನು 53 ವರ್ಷಗಳಿಂದ ಪುಸ್ತಕ ಸಂಗ್ರಹ ಮಾಡಿದ್ದೇನೆ. ನಾನು ಓದುವಾಗ ತಾಲೂಕುಗಳಲ್ಲಿ ಗ್ರಂಥಾಲಯ ಇರಲಿಲ್ಲ. ರೈಲಿಗೆ ಹಣವಿಲ್ಲದೇ ಪಾಂಡವಪುರ ದಿಂದ ಮೈಸೂರಿಗೆ ನಡೆದು ಬಂದು ಓದು ಮುಂದುವರಿಸಿದೆ. ಪುಸ್ತಕ ಪಡೆಯಲು ನಾನು ಪಟ್ಟ ಕಷ್ಟ ಭವಿಷ್ಯದ ಪೀಳಿಗೆಗೆ ಬರಬಾರದು ಎಂಬ ಉದ್ದೇಶದಿಂದ ಪುಸ್ತಕ ಸಂಗ್ರಹಿಸಲು ಆರಂಭಿಸಿದೆ ಎಂದು ತಮ್ಮ ಸಂಕಷ್ಟದ ದಿನಗಳನ್ನು ಮೆಲುಕು ಹಾಕಿದರು.

ಅಕಾಡೆಮಿ ಕುಲಪತಿ ಹೆಚ್.ಬಸವನಗೌಡಪ್ಪ ಮಾತನಾಡಿ, ಮಧ್ಯಪ್ರಾಚ್ಯ ದೇಶಗಳಲ್ಲಿ ಒಂದೇ ಧರ್ಮವಿದ್ದರೂ ಭಾವೈಕ್ಯತೆ ಇಲ್ಲದಿರುವುದರಿಂದಲೇ ಯುದ್ಧ, ಸಂಘರ್ಷ ನಡೆಯುತ್ತಿದೆ. ಆದರೆ ನಮ್ಮ ದೇಶದಲ್ಲಿ ಹಲವು ಧರ್ಮಗಳಿದ್ದರೂ ಭಾವೈಕ್ಯತೆಯೊಂದಿಗೆ ಸಾಮರಸ್ಯದ ಜೀವನ ಸಾಗಿಸುತ್ತಿದ್ದೇವೆ. ಎನ್‌ಎಸ್‌ಎಸ್ ಇಂತಹ ಭಾವಕ್ಯತಾ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕಾಲೇಜು ಪ್ರಾಂಶುಪಾಲ ಟಿಎಂ. ಪ್ರಮೋದ್ ಕುಮಾರ್, ಸಂಘಟನಾ ಕಾರ್ಯದರ್ಶಿ ಕೆ.ಎಲ್.ಕೃಷ್ಣ, ಎನ್‌ಎಸ್‌ಎಸ್‌ನ ಸಂಯೋಜಕರಾದ ಪ್ರೊ.ಮಧುಸೂದನ್, ಪ್ರೊ.ನಿಂಗರಾಜು ಮತ್ತಿತರರು ಉಪಸ್ಥಿತರಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಪೈಲ್ವಾನ್ ಶ್ರೀ ಬಿ.ಸಿದ್ದಯ್ಯ ರವರು
ದೊಡ್ಡಗರಡಿ ಉಸ್ತಾದ್, ಅಶೋಕಪುರಂ
ನಿಧನ : 03-03-2026

ಇವರು ದಿನಾಂಕ 03-03-2026ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 13-03-2025ರ ಶುಕ್ರವಾರ ಬೆಳಗ್ಗೆ 10-30 ಗಂಟೆಗೆ ನಮ್ಮ ಸ್ವಗೃಹ #1631, CH-85, 8ನೇ ಕ್ರಾಸ್, ಅಶೋಕಪುರಂ, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಹೆಣ್ಣುಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಕುಟುಂಬವರ್ಗದವರು

ಭೋಜನ : 15-03-2026ನೇ ಭಾನುವಾರ । ಮಧ್ಯಾಹ್ನ 1-00ಕ್ಕೆ
ಸ್ಥಳ : #1631, CH-85, 8ನೇ ಕ್ರಾಸ್, ಅಶೋಕಪುರಂ, ಮೈಸೂರು.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

13ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

R. ಶ್ರೀನಿವಾಸ್
ಬನ್ನೂರು

ಇಂತಿ ದುಃಖತಪ್ತರು
R.P. ನಂಜುಂಡಸ್ವಾಮಿ
S. ರವಿಕುಮಾರ್
ಮತ್ತು ಸ್ನೇಹಿತರು